

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 30 ಸೋಮವಾರ 2023

ಸಂಪುಟ: 44 | ಸಂಚಿಕೆ: 194 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23


ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.co

₹ 4



ಕೇರಳ ಧಾರ್ಮಿಕ ಸಮಾವೇಶದಲ್ಲಿ
ಸರಣಿ ಸ್ಫೋಟ



- ಸ್ಫೋಟಕ್ಕೆ ಸುಧಾರಿತ ಐಇಡಿಗಳ ಬಳಕೆ
- ಮಹಿಳೆ ಸೇರಿ 2 ಸಾವು, 52 ಮಂದಿಗೆ ಗಾಯ
- ಎನ್‌ಐಎ, ಎನ್‌ಎಸ್‌ಜಿಯಿಂದ ತೀವ್ರ ತನಿಖೆ

ಕೊಚ್ಚಿ, ಅ.29–ಇಲ್ಲಿಗೆ ಸಮೀಪದ ಕಲಸ್ಸೇರಿ ಎಂಬಲ್ಲಿ ಕನ್‌ವೆನ್ಷನ್ ಸೆಂಟರ್‌ನಲ್ಲಿ ನಡೆಯುತ್ತಿದ್ದ ಧಾರ್ಮಿಕ ಸಮಾವೇಶದಲ್ಲಿ ಸರಣಿ ಸ್ಫೋಟ ಸಂಭವಿಸಿದ್ದು, ಮಹಿಳೆ ಸೇರಿ ಇಬ್ಬರು ಸಾವನ್ನಪ್ಪಿ, 52 ಮಂದಿ ಗಾಯಗೊಂಡಿದ್ದಾರೆ.

ಗಾಯಗೊಂಡವರಲ್ಲಿ 30 ಮಂದಿಯನ್ನು ವಿವಿಧ ಆಸ್ಪತ್ರೆಗಳಲ್ಲಿ ದಾಖಲಿಸಲಾಗಿದೆ. 18 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, 12 ವರ್ಷದ ಬಾಲಕಿ ಸೇರಿದಂತೆ 6 ಮಂದಿ ಸ್ಥಿತಿ ಚಿಂತಾಜನಕವಾಗಿದೆ. ಅವರಲ್ಲಿ ಮೂವರಿಗೆ ಶೇ.90ರಷ್ಟು ಸುಟ್ಟಗಾಯಗಳಾಗಿವೆ ಎಂದು ಕೇರಳ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ. ಅವಳಿ ಸ್ಫೋಟವನ್ನು ತಾನೇ ನಡೆಸಿದ್ದು ಎಂದು ಹೊಣೆ ಹೊತ್ತುಕೊಂಡಿರುವ ವ್ಯಕ್ತಿಯೋರ್ವ ತ್ರಿಶೂರ್ ಜಿಲ್ಲೆಯಲ್ಲಿ ಪೊಲೀಸರಿಗೆ ಶರಣಾಗಿದ್ದಾನೆ. ಸ್ಫೋಟಕ್ಕೆ ಸುಧಾರಿತ ಐಇಡಿ ಬಳಸಿದ್ದು, ಎನ್‌ಐಎ ತಂಡ ಸ್ಥಳಕ್ಕೆ ದೌಡಾಯಿಸಿದೆ. ಅಲ್ಲದೇ ಕನ್‌ವೆನ್ಷನ್ ಹಾಲ್ ಸುತ್ತಮುತ್ತಲಿನ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ. ▶ 8ನೇ ಪುಟಕ್ಕೆ

> ಕೊಚ್ಚಿ ಬಳಿ ನಡೆದ ಸರಣಿ ಸ್ಫೋಟದ ಬಗ್ಗೆ ಕೇಂದ್ರದ ಗೃಹ ಸಚಿವ ಅಮಿತ್ ಶಾ ಕೇರಳ ಸರ್ಕಾರದಿಂದ ಮಾಹಿತಿ ಪಡೆದಿದ್ದಾರೆ. ಕೇರಳ ಸಿಎಂ ಪಿಣರಾಯ್ ವಿಜಯನ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಅವರು, ಧಾರ್ಮಿಕ ಸಮಾವೇಶದಲ್ಲಿ ನಡೆದ ಸರಣಿ ಸ್ಫೋಟ ಹಾಗೂ ಘಟನೆಯ ನಂತರ ರಾಜ್ಯದ ಪರಿಸ್ಥಿತಿ ಬಗ್ಗೆ ಮಾಹಿತಿ ಪಡೆದಿದ್ದಾರೆ. ಅಲ್ಲದೇ ತಕ್ಷಣವೇ ಘಟನಾ ಸ್ಥಳಕ್ಕೆ ತೆರಳಿ ತನಿಖೆ ಆರಂಭಿಸುವಂತೆ ಎನ್‌ಐಎ ಮತ್ತು ಎನ್‌ಎಸ್‌ಜಿ ಉನ್ನತ ಅಧಿಕಾರಿಗಳಿಗೆ ಅಮಿತ್ ಶಾ ಸೂಚನೆ ನೀಡಿದ್ದಾರೆ.

ಸ್ಫೋಟ ನಡೆಸಿದ್ದು ನಾನೇ...



ಪೊಲೀಸರಿಗೆ ಶರಣಾದ ವ್ಯಕ್ತಿ

ತಿರುವನಂತಪುರಂ, ಅ.29–ಕೊಚ್ಚಿಯಲ್ಲಿ ಧಾರ್ಮಿಕ ಸಮ್ಮೇಳನ ನಡೆಯುತ್ತಿದ್ದ ಕನ್‌ವೆನ್ಷನ್ ಹಾಲ್‌ನಲ್ಲಿ ಸ್ಫೋಟಕ್ಕೆ ತಾನೇ ಕಾರಣ ಎಂದು ಹೊಣೆ ಹೊತ್ತು ವ್ಯಕ್ತಿಯೋರ್ವ ತ್ರಿಚೂರ್ ಬಳಿಯ ಕೊಡಕರ ಪೊಲೀಸ್ ಠಾಣೆಗೆ ಶರಣಾಗಿದ್ದಾನೆ.

44 ವರ್ಷದ ಡೊಮಾನಿಕ್ ಮಾರ್ಟಿನ್ ಎಂಬಾತ ಶರಣಾದವನಾಗಿದ್ದು, ಇದಕ್ಕೂ ಮುನ್ನ ಈತ ಕೇರಳದ ಸುದ್ದಿವಾಹಿನಿಗಳಿಗೆ ವೀಡಿಯೋವೊಂದನ್ನು ಕಳುಹಿಸಿ ತಾನು ಸ್ಫೋಟ ನಡೆಸಲು ಕಾರಣವೇನು ಎಂಬುದರ ಬಗ್ಗೆ ತಿಳಿಸಿದ್ದ. ತನ್ನನ್ನು 'ಯಹೋವನ ವಿಟ್ನೆಸಸ್' ಸಂಘಟನೆಗೆ ▶ 8ನೇ ಪುಟಕ್ಕೆ

ಸರ್ವಪಕ್ಷ ಸಭೆ ಕರೆದ ಕೇರಳ ಸಿಎಂ

ತಿರುವನಂತಪುರಂ: ಕೊಚ್ಚಿಯ ಕಲಸ್ಸೆರಿಯ ಕನ್ವೆನ್ಷನ್ ಸೆಂಟರ್‌ನಲ್ಲಿ ಸ್ಫೋಟ ಸಂಭವಿಸಿದ ಹಿನ್ನೆಲೆಯಲ್ಲಿ ಕೇರಳ ಸಿಎಂ ಪಿಣರಾಯಿ ವಿಜಯನ್ ಸೋಮವಾರ ಸರ್ವಪಕ್ಷ ಸಭೆ ಕರೆದಿದ್ದಾರೆ. ಸೋಮವಾರ ಬೆಳಗ್ಗೆ 10 ಗಂಟೆಗೆ ಸಚಿವಾಲಯದ ಕಾಂಪ್ಲೆಕ್ಸ್‌ನಲ್ಲಿರುವ ಮುಖ್ಯಮಂತ್ರಿಗಳ ಕಾನ್ಫರೆನ್ಸ್ ಸಭಾಂಗಣದಲ್ಲಿ ಸರ್ವಪಕ್ಷ ಸಭೆಗೆ ಪಿಣರಾಯಿ ವಿಜಯನ್ ಕರೆ ನೀಡಿದ್ದಾರೆ ಎಂದು ಸಿಎಂ ಕಾರ್ಯಾಲಯದ ಹೇಳಿಕೆ ತಿಳಿಸಿದೆ.

ಮೈಸೂರಲ್ಲೂ ಪೊಲೀಸರ ಕಟ್ಟೆಚ್ಚರ

ಮೈಸೂರು,ಅ.29(ಎಸ್‌ಬಿಡಿ)–ಕೇರಳದಲ್ಲಿ ಸರಣಿ ಸ್ಫೋಟದ ಹಿನ್ನೆಲೆಯಲ್ಲಿ ಮೈಸೂರಿನಲ್ಲೂ ಪೊಲೀಸರು ಹೆಚ್ಚಿನ ನಿಗಾ ವಹಿಸಿದ್ದಾರೆ. ಕೇರಳ ಕೊಚ್ಚಿಯಲ್ಲಿ ಸರಣಿ ಸ್ಫೋಟ ನಡೆದು, ಸಾವು–ನೋವಾಗಿರುವ ಕಾರಣ ದೇಶಾದ್ಯಂತ ಹೈಅಲರ್ಟ್ ಕೈಗೊಳ್ಳಲಾಗಿದೆ. ಅಂತೆಯೇ ಮೈಸೂರು ನಗರದಲ್ಲೂ ಎಚ್ಚರಿಕೆ ವಹಿಸಲಾಗಿದೆ. ಮೈಸೂರಿಗೆ ಬಂದು ಹೋಗುವ ಅಂತಾರಾಜ್ಯ ವಾಹನಗಳ ತಪಾಸಣೆ ತೀವ್ರಗೊಳಿಸಲಾಗಿದೆ. ಅನುಮಾನಾಸ್ಪದ ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆ ▶ 8ನೇ ಪುಟಕ್ಕೆ

MyBharat ವೆಬ್‌ಸೈಟ್ ಸದ್ಯದಲ್ಲೇ ಆರಂಭ

ಹಬ್ಬ-ಹರಿದಿನಗಳಲ್ಲಿ ಸ್ಥಳೀಯ ವಸ್ತುಗಳನ್ನು ಬಳಸಿ: ಮನ್ ಕೀ ಬಾತ್‌ನಲ್ಲಿ ಪ್ರಧಾನಿ ಘೋಷಣೆ



ನವದೆಹಲಿ, ಅ.29– ಭಾನುವಾರ ತಮ್ಮ ಜನಪ್ರಿಯ ಮನ್ ಕೀ ಬಾತ್ ರೇಡಿಯೋ ಕಾರ್ಯಕ್ರಮದ 106ನೇ ಸಂಚಿಕೆಯಲ್ಲಿ ಮಾತನಾಡಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಈ ತಿಂಗಳ ಖಾದಿ ಮಹೋತ್ಸವ ಎಲ್ಲಾ ದಾಖಲೆಗಳನ್ನು ಮುರಿದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಈ ತಿಂಗಳ ಆರಂಭದಲ್ಲಿ, ಖಾದಿ ದೆಹಲಿಯಲ್ಲಿ ದಾಖಲೆ ಮಾರಾಟಕ್ಕೆ ಸಾಕ್ಷಿಯಾಯಿತು. ಈ ತಿಂಗಳು ನಡೆದ ಖಾದಿ ಮಹೋತ್ಸವವು ಮತ್ತೊಮ್ಮೆ ಎಲ್ಲಾ ದಾಖಲೆಗಳನ್ನು ಮುರಿದಿದೆ. ಗಾಂಧಿ ಜಯಂತಿಯಂದು, ಖಾದಿ ದಾಖಲೆಯ ಮಾರಾಟವಾಗಿದೆ ಎಂದು ನರೇಂದ್ರ ಮೋದಿ ಹೇಳಿದರು.

ಹಬ್ಬ ಹರಿದಿನಗಳಲ್ಲಿ 'ವೋಕಲ್ ಫಾರ್ ಲೋಕಲ್' ಸ್ಥಳೀಯ ವಸ್ತುಗಳನ್ನು ಬಳಕೆ ಮಾಡಬೇಕು. ಪ್ರತಿ ಬಾರಿಯಂತೆ, ಈ ಬಾರಿಯೂ, ಹಬ್ಬಗಳಲ್ಲಿ, ನಮ್ಮ ಆದ್ಯತೆಯು 'ಸ್ಥಳೀಯತೆಗಾಗಿ ಧ್ವನಿ' ಆಗಿರಬೇಕು. ನಾವೆಲ್ಲರೂ ಒಟ್ಟಾಗಿ ಆ ಕನಸನ್ನು ನನಸಾಗಿಸಿಕೊಳ್ಳೋಣ, ನಮ್ಮ ಕನಸು 'ಆತ್ಮನಿರ್ಭರ ಭಾರತ'. ಭಾರತವು ವಿಶ್ವದ ಅತಿದೊಡ್ಡ ಉತ್ಪಾದನಾ ಕೇಂದ್ರವಾಗುತ್ತಿದೆ ಎಂದರು.

ದೇಶದ ಜನತೆ ಬೆವರು ಸುರಿಸಿ ತಯಾರಿಸಿರುವ ವಸ್ತುಗಳನ್ನು ಮಾತ್ರ ಖರೀದಿಸಿ. ನೀವು ದೇಶದಲ್ಲಿ ಎಲ್ಲೇ ಪ್ರವಾಸಕ್ಕೆ ಹೋದರೂ, ಉಳಿದ ಹಣದಲ್ಲಿ ಅಲ್ಲಿ ಸ್ಥಳೀಯವಾಗಿ ಸಿದ್ಧಪಡಿಸಿರುವ ವಸ್ತುಗಳನ್ನು ಖರೀದಿ ಮಾಡುವುದನ್ನು ರೂಢಿಸಿಕೊಳ್ಳಿ ಎಂದಿದ್ದಾರೆ. ಕೇವಲ ಹಬ್ಬದ ದಿನಗಳಲ್ಲಿ ಸ್ಥಳೀಯವಾಗಿ ತಯಾರಿಸಿರುವ ದೀಪವನ್ನು ಖರೀದಿ ಮಾಡಿ ಸುಮ್ಮನಾಗುವುದಲ್ಲ, ಸಣ್ಣ ಸಣ್ಣ ಅಂಗಡಿಗಳು ಮಾತ್ರವಲ್ಲ ಇಡೀ ದೇಶವೇ ಮ್ಯಾನ್ಯುಫ್ಯಾಕ್ಚರಿಂಗ್ ಹಬ್ ಆಗಿದ್ದು, ದೇಶದಲ್ಲೇ ತಯಾರಿಸಿರುವ ವಸ್ತುಗಳನ್ನು ಖರೀದಿ ಮಾಡುವ ಮೂಲಕ ದೇಶದ ಜನತೆಯ ಬೆವರು, ಯುವಕರ ಪ್ರತಿಭೆಗೆ ಗೌರವ ನೀಡಬೇಕು. ವೋಕಲ್ ಫಾರ್ ಲೋಕಲ್ ಜತೆ, ಆತ್ಮನಿರ್ಭರ ಭಾರತವು ಕೂಡ ಮುಖ್ಯ. ಹಾಗೆಯೇ ಏನೇ ಖರೀದಿ ಮಾಡಿದರೂ ಹಣವನ್ನು ಯುಪಿಐ ಮೂಲಕವೇ ನೀಡಿ ಎಂದು ಸಲಹೆ ನೀಡಿದರು.

ಇಂದು ಭಾರತವು ವಿಶ್ವದ ಅತಿ ದೊಡ್ಡ ಉತ್ಪಾದನಾ ಕೇಂದ್ರವಾಗುತ್ತಿದೆ. ಅನೇಕ ದೊಡ್ಡ ಬ್ರ್ಯಾಂಡ್‌ಗಳು ತಮ್ಮ ಉತ್ಪನ್ನಗಳನ್ನು ಇಲ್ಲಿ ತಯಾರಿಸುತ್ತಿವೆ. ನಾವು ಆ ಉತ್ಪನ್ನಗಳನ್ನು ಅಳವಡಿಸಿಕೊಂಡರೆ, ಮೇಕ್ ಇನ್ ಇಂಡಿಯಾ ಪ್ರಚಾರ ಪಡೆಯುತ್ತದೆ ಎಂದು ಮೋದಿ ಹೇಳಿದರು.

ಸರ್ದಾರ್ ಪಟೇಲ್ ಸ್ಮರಣೆ: ದೇಶದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನವನ್ನು ಆಚರಿಸುವ ಅಕ್ಟೋಬರ್ 31ರಂದು ಭಾರತದ ಜನರಿಗೆ ವಿಶೇಷ ಮಹತ್ವವಿದೆ. ನಾವು ಭಾರತೀಯರು ಅವರನ್ನು ಅನೇಕ ಕಾರಣಗಳಿಗಾಗಿ ನೆನಪಿಸಿಕೊಳ್ಳುತ್ತಿದ್ದು, ಅವರಿಗೆ ಗೌರವವನ್ನು ಸಲ್ಲಿಸುತ್ತೇವೆ. ದೇಶದ 580ಕ್ಕೂ ಹೆಚ್ಚು ರಾಜಪ್ರಭುತ್ವದ ರಾಜ್ಯಗಳನ್ನು ಸಂಪರ್ಕಿಸುವಲ್ಲಿ ಅವರ ಅನುಪಮ ಪಾತ್ರವೇ ದೊಡ್ಡ ಕಾರಣ ಎಂದು ಹೇಳಿದರು. ▶ 6ನೇ ಪುಟಕ್ಕೆ

ವಿಧಾನಪರಿಷತ್ ಚುನಾವಣೆ: ಕೈ ಅಭ್ಯರ್ಥಿಗಳ ಘೋಷಣೆ

ಬೆಂಗಳೂರು: ರಾಜ್ಯದ 5 ವಿಧಾನ ಪರಿಷತ್ ಸ್ಥಾನಕ್ಕೆ ನಡೆಯುವ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳ ಚುನಾವಣೆಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಘೋಷಿಸಿದೆ.

ಅಭ್ಯರ್ಥಿಗಳ ಪಟ್ಟಿಯಲ್ಲಿ ಹಿರಿಯೂರಿನ ಬಿಜೆಪಿ ಮಾಜಿ ಶಾಸಕಿ ಪೂರ್ಣಿಮ ತಮ್ಮ ಪತಿ ಶ್ರೀನಿವಾಸ್ ಅವರಿಗೆ ಟಿಕೆಟ್ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪೂರ್ಣಿಮ ವಾರದ ಹಿಂದಷ್ಟೇ ಕಾಂಗ್ರೆಸ್ ಸೇರ್ಪಡೆ ಆಗಿದ್ದರು. ಪೂರ್ಣಿಮ ಕಾಂಗ್ರೆಸ್ ಸೇರ್ಪಡೆ ಆದ ಒಂದೇ ವಾರದಲ್ಲಿ ಪತಿ ಶ್ರೀನಿವಾಸ್‌ಗೆ ಆಗ್ನೇಯ ಶಿಕ್ಷಕರ ಕ್ಷೇತ್ರದ ಟಿಕೆಟ್ ಘೋಷಿಸಲಾಗಿದೆ.


ರಾಮೋಜಿಗೌಡ


ಪುಟ್ಟಣ್ಣ


ಕೆ.ಕೆ.ಮಂಜುನಾಥ್


ಡಿ.ಟಿ.ಶ್ರೀನಿವಾಸ್


ಚಂದ್ರಶೇಖರ

ಬೆಂಗಳೂರು ಪದವೀಧರರ ಕ್ಷೇತ್ರ: ರಾಮೋಜಿಗೌಡ
ಬೆಂಗಳೂರು ಶಿಕ್ಷಕರ ಕ್ಷೇತ್ರ: ಪುಟ್ಟಣ್ಣ
ನೈಋತ್ಯ ಶಿಕ್ಷಕರ ಕ್ಷೇತ್ರ: ಕೆ.ಕೆ. ಮಂಜುನಾಥ್
ಆಗ್ನೇಯ ಶಿಕ್ಷಕರ ಕ್ಷೇತ್ರ: ಡಿ.ಟಿ. ಶ್ರೀನಿವಾಸ್
ಈಶಾನ್ಯ ಪದವೀಧರರು ಕ್ಷೇತ್ರ: ಡಾ.ಚಂದ್ರಶೇಖರ ಬಿ.ಪಾಟೀಲ್

ಆಂಧ್ರದಲ್ಲಿ ರೈಲುಗಳ ಡಿಕ್ಕಿ: 8 ಸಾವು
ಹಲವರಿಗೆ ಗಂಭೀರ ಗಾಯ

ನವದೆಹಲಿ, ಅ.29– ಆಂಧ್ರಪ್ರದೇಶದಲ್ಲಿ 2 ರೈಲುಗಳ ನಡುವೆ ಡಿಕ್ಕಿ ಸಂಭವಿಸಿದ್ದರಿಂದಾಗಿ ಪ್ಯಾಸೆಂಜರ್ ರೈಲು ಹಳಿ ತಪ್ಪಿದೆ. ಈ ಅವಘಡದಲ್ಲಿ 8 ಮಂದಿ ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

ಗಾಯಗೊಂಡವರಲ್ಲಿ ಹಲವರ ಸ್ಥಿತಿ ಚಿಂತಾಜನಕವಾಗಿದೆ. ಸ್ಥಳದಲ್ಲಿ ಪರಿಹಾರ ಮತ್ತು ರಕ್ಷಣಾ ಕಾರ್ಯ ನಡೆಯುತ್ತಿದೆ. ವಿಶಾಖಪಟ್ಟಣಂ–ಪಲಾಸ ಪ್ಯಾಸೆಂಜರ್ ರೈಲು ಮತ್ತು ವಿಶಾಖಪಟ್ಟಣಂ–ರಗ್ಗಾ ಪ್ಯಾಸೆಂಜರ್ ರೈಲು ನಡುವೆ ಡಿಕ್ಕಿ ಸಂಭವಿಸಿದೆ. ಈ ಅವಘಡದಲ್ಲಿ 3 ಬೋಗಿಗಳಿಗೆ ಹಾನಿಯಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ಈ ಅಪಘಾತದಲ್ಲಿ 10 ಮಂದಿ ಗಾಯಗೊಂಡಿದ್ದಾರೆ. ಸಹಾಯಕ್ಕಾಗಿ ಆಂಬ್ಯುಲೆನ್ಸ್‌ಗಳನ್ನು ಕಳುಹಿಸಲಾಗಿದೆ ಜೊತೆಗೆ ಸ್ಥಳೀಯ ಆಡಳಿತ ಮತ್ತು ಎನ್‌ಡಿಆರ್‌ಎಫ್‌ಗೂ ಕೂಡ ಮಾಹಿತಿ ನೀಡಲಾಗಿದೆ.

ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಪ್ರಕಾರ, ಅಪಘಾತ ಪರಿಹಾರ ರೈಲುಗಳನ್ನು ಸ್ಥಳಕ್ಕೆ ಕಳುಹಿಸಲಾಗಿದೆ. ಆದರೆ ರೈಲ್ವೇ ಬೋರ್ಡ್ ಗ್ರೂಪ್‌ನಲ್ಲಿರುವ ಡಿಆರ್‌ಎಂ ಸೌರಭ್‌ಪ್ರಸಾದ್ ರೈಲು ಅಪಘಾತದ ಬಗ್ಗೆ ಮಾಹಿತಿ ನೀಡಿದ್ದಾರೆ. ಹಳಿ ತಪ್ಪಿದ ಘಟನೆ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ. ರಕ್ಷಣಾ ತಂಡಗಳು ತಕ್ಷಣ ಸ್ಥಳಕ್ಕೆ ತೆರಳಿವೆ ಎಂದು ಡಿಆರ್‌ಎಂ ತಿಳಿಸಿದ್ದಾರೆ. ▶ 6ನೇ ಪುಟಕ್ಕೆ

ಓಲಾ, ಉಬರ್‌ನಂತೆಯೇ ಸಾರಿಗೆ ಇಲಾಖೆಗೆ ಸರ್ಕಾರಿ ಆ್ಯಪ್




ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭರವಸೆ

ಬೆಂಗಳೂರು, ಅ.29– ಓಲಾ, ಉಬರ್ ರೀತಿಯಲ್ಲಿ ಶೀಘ್ರದಲ್ಲೇ ಸಾರಿಗೆ ಇಲಾಖೆಯಿಂದ ಆ್ಯಪ್ ಪರಿಚಯಿಸಲಾಗುತ್ತದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭರವಸೆ ನೀಡಿದರು.

ಆಲ್ ಇಂಡಿಯಾ ರೋಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಫೆಡರೇಶನ್ (ಎಐಆರ್‌ಟಿಡಬ್ಲ್ಯುಎಫ್) ಭಾನುವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಸಮಾವೇಶದಲ್ಲಿ ಅವರು ಮಾತನಾಡಿದರು. ಇದು ಆನ್‌ಲೈನ್ ಕಾಲವಾಗಿರುವುದರಿಂದ ಆ್ಯಪ್ ಅಗತ್ಯ ಹೆಚ್ಚಿದೆ. ತ್ವರಿತವಾಗಿ ಅಥವಾ ಸ್ವಲ್ಪ ತಡವಾಗಿಯಾದರೂ ಆ್ಯಪ್ ಪರಿಚಯಿಸಲಾಗುತ್ತದೆ. ಅದಕ್ಕಾಗಿ ಯೋಜನೆಯನ್ನು ರೂಪಿಸಿದ್ದೇವೆ ಎಂದು ತಿಳಿಸಿದರು.

ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿ ರಚಿಸಲು ಸಾರಿಗೆ ಇಲಾಖೆ ಯೋಜನೆ ರೂಪಿಸಿದೆ. ಚಳಿಗಾಲದ ಅಧಿವೇಶನದಲ್ಲಿ ಈ ಮಸೂದೆ ಮಂಡಿಸಲಾಗುವುದು. ಎಲ್ಲ ಅಸಂಘಟಿತ ಕಾರ್ಮಿಕರು ಈ ಮಂಡಳಿ ವ್ಯಾಪ್ತಿಗೆ ಬರುವುದಿಲ್ಲ. ರಸ್ತೆ ಸಾರಿಗೆ ಕಾರ್ಮಿಕರಿಗಷ್ಟೇ ಇದು ಅನ್ವಯವಾಗಲಿದೆ. ಆಟೋ, ಟ್ಯಾಕ್ಸಿ, ಲಾರಿ ಸಹಿತ ಸಾರ್ವಜನಿಕ ಸಾರಿಗೆಯಲ್ಲಿ ದುಡಿಯುವವರು, ಇವುಗಳ ತಯಾರಿ, ದುರಸ್ತಿ ಕಾರ್ಯಾಗಾರಗಳಲ್ಲಿ ಕೆಲಸ ಮಾಡುವವರ ಕ್ಷೇಮಕ್ಕಾಗಿ ಮಂಡಳಿ ಇರಲಿದೆ ಎಂದು ಮಾಹಿತಿ ನೀಡಿದರು.

ಕೇಂದ್ರ ಸರ್ಕಾರ ಖಾಸಗಿಯವರು ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಸಬ್ಸಿಡಿ ನೀಡುತ್ತದೆ. ಅದೇ ಸಬ್ಸಿಡಿಯನ್ನು ಕೆಎಸ್‌ಆರ್‌ಟಿಸಿ, ಬಿಎಂಟಿಸಿಗೆ ನೀಡಿದರೆ ನಮ್ಮ ಇಲಾಖೆಯೇ ಬಸ್ ಖರೀದಿಸುತ್ತದೆ. ಹಾಗಾಗಿ ಕೇಂದ್ರ ಸರ್ಕಾರ ಸಾರಿಗೆ ಕಾಯ್ದೆಗೆ ತಿದ್ದುಪಡಿ ತರಬೇಕೆಂದು ಒತ್ತಾಯ ಮಾಡುತ್ತೇವೆ. ಈ ವಿಷಯವಾಗಿ ಸಾರಿಗೆ ಸಂಘಟನೆಗಳು ಧ್ವನಿ ಎತ್ತಬೇಕು' ಎಂದು ಮನವಿ ಮಾಡಿದರು. ಎಐಆರ್‌ಟಿಡಬ್ಲ್ಯುಎಫ್ ರಾಜ್ಯ ಸಂಚಾಲಕ ಪ್ರಕಾಶ್ ಮಾತನಾಡಿ, ▶ 6ನೇ ಪುಟಕ್ಕೆ

ವನ್ಯಜೀವಿಗಳಿಗೆ ಸಂಬಂಧಿಸಿದ ವಸ್ತುಗಳನ್ನು ಸರ್ಕಾರಕ್ಕೆ ಒಪ್ಪಿಸಲು 2 ತಿಂಗಳು ಗಡುವು



ಬೆಂಗಳೂರು,ಅ.29–ವನ್ಯಜೀವಿಗಳಿಗೆ ಸಂಬಂಧಿಸಿದ ವಸ್ತುಗಳನ್ನು ಹೊಂದಿರುವವರು ಎರಡು ತಿಂಗಳೊಳಗೆ ಅವುಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂದು ಕರ್ನಾಟಕ ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ.

'ಬಿಗ್ ಬಾಸ್ ರಿಯಾಲಿಟಿ ಶೋ ಸ್ಪರ್ಧಿ ವರ್ತೂರು ಸಂತೋಷ್ ಅವರ ಬಂಧನಕ್ಕೂ ಮುನ್ನ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಬಗ್ಗೆ ಯಾವುದೇ ಸಾರ್ವಜನಿಕ ಜಾಗೃತಿ ಇರಲಿಲ್ಲ. ಈ ಬೆಳವಣಿಗೆಯ ನಂತರ, ಜನರಿಗೆ ಕಾನೂನಿನ ಬಗ್ಗೆ ತಿಳುವಳಿಕೆ ಬಂದಿದೆ. ಹೀಗಾಗಿ, ಅಂತಹ ವಸ್ತುಗಳನ್ನು ಸರ್ಕಾರಕ್ಕೆ ಒಪ್ಪಿಸಲು ಎರಡು ತಿಂಗಳ ಕಾಲಾವಕಾಶ ನೀಡಲಾಗಿದೆ' ಎಂದರು.

ಈ ಅವಧಿ ಮುಗಿದ ನಂತರ ಸರ್ಕಾರ ಈ ಬಗ್ಗೆ ಸುತ್ತೋಲೆ ಹೊರಡಿಸಲಿದೆ. 1972ರಲ್ಲಿ ವನ್ಯಜೀವಿ (ಸಂರಕ್ಷಣಾ) ಕಾಯ್ದೆಯನ್ನು ಜಾರಿಗೆ ತಂದಾಗ, ವನ್ಯಜೀವಿ ಸಂಬಂಧಿತ ವಸ್ತುಗಳನ್ನು ಘೋಷಿಸಲು ಮತ್ತು ಕಾನೂನುಬದ್ಧವಾಗಿ ತಮ್ಮ ಬಳಿ ಇಟ್ಟುಕೊಳ್ಳಲು ಅವಕಾಶ ನೀಡಲಾಯಿತು. ಆದರೆ, ಕಾನೂನನ್ನು 2003, 2022ರಲ್ಲಿ ತಿದ್ದುಪಡಿ ಮಾಡಲಾಗಿದೆ. 2022ರ ತಿದ್ದುಪಡಿ ಪ್ರಕಾರ, ವನ್ಯಜೀವಿಗಳಿಗೆ ಸಂಬಂಧಿಸಿದ ವಸ್ತುಗಳನ್ನು ಇಟ್ಟುಕೊಳ್ಳುವುದು, ಧರಿಸುವುದು, ಬಳಸುವುದು, ಸಂಗ್ರಹಿಸುವುದು, ಸಾಗಿಸುವುದು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಲಾಗುತ್ತದೆ ಎಂದು ಹೇಳಿದರು.

ಸಚಿವ ಸಂಪುಟ ಪುನಾರಚನೆ ಬಗ್ಗೆ ಹೈಕಮಾಂಡ್ ನಿರ್ಧರಿಸುತ್ತೆ, ಶಾಸಕರಲ್ಲ



ಬೆಂಗಳೂರು, ಅ.29–ತಮ್ಮ ಸಚಿವ ಸಂಪುಟ ಪುನಾರಚನೆಯ ಸಾಧ್ಯತೆಯನ್ನು ಸ್ಪಷ್ಟವಾಗಿ ತಳ್ಳಿಹಾಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸಂಪುಟ ಪುನಾರಚನೆ ಬಗ್ಗೆ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಹೇಳಿದ್ದಾರೆ.

ಭಾನುವಾರ ನಗರದಲ್ಲಿ ಎರಡೂವರೆ ವರ್ಷದ ನಂತರ ಸಚಿವರನ್ನು ಬದಲಾಯಿಸಿ ಹೊಸಬರಿಗೆ ಅವಕಾಶ ನೀಡಬೇಕು ಎಂಬ ಕೆಲ ಕಾಂಗ್ರೆಸ್ ಶಾಸಕರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿಎಂ, ಎಲ್ಲಾ ಶಾಸಕರು ಹಾಗೆ ಹೇಳಿದ್ದಾರೆಯೇ? ಎಂದು ಪ್ರಶ್ನಿಸಿದರು. ಹಾಗೇನಾದರೂ ಹೇಳಿದ್ದರೆ ಈ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನ ಮಾಡುತ್ತಾರೆ. ಸಂಪುಟ ಪುನಾರಚನೆ ಬಗ್ಗೆ ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆಯೇ ಹೊರತು ಶಾಸಕರಲ್ಲ ಎಂದು ಹೇಳಿದರು.

ಇದೇ ವೇಳೆ ಜಾತಿ ಗಣತಿ ವರದಿ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ, ಇಡೀ ದೇಶದಲ್ಲಿ ಜಾತಿಗಣತಿ ಮೊದಲು ಮಾಡಿದ್ದು ನಮ್ಮ ಸರ್ಕಾರ. ನಿಖರವಾಗಿ ಪ್ರತಿ ಜಾತಿಗಳ ಆರ್ಥಿಕ, ಸಾಮಾಜಿಕ, ಆರ್ಥಿಕ ಸ್ಥಿತಿ ತಿಳಿಯುವ ಉದ್ದೇಶದಿಂದ ಜಾತಿ ಜನಗಣತಿ ಮಾಡಿಸಿದ್ದೆ. ಇದಕ್ಕಾಗಿ 165 ಕೋಟಿ ರೂ. ಖರ್ಚು ಮಾಡಿದ್ದೆವು ಎಂದರು. ನನ್ನ ಅವಧಿಯಲ್ಲಿ ನಡೆದ ಜಾತಿ ಸಮೀಕ್ಷೆ ಸಂದರ್ಭದಲ್ಲಿ ಕಾಂತರಾಜು ಅವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದರು. ನಾನು ಇದ್ದಾಗ ಅವರು ವರದಿ ಸಲ್ಲಿಸಲಿಲ್ಲ. ನಾನು ಹೋದ ಮೇಲೆ ಯಡಿಯೂರಪ್ಪ, ಕುಮಾರಸ್ವಾಮಿ, ಬೊಮ್ಮಾಯಿ ಬಂದರೂ ಅವರು ವರದಿ ಬಿಡುಗಡೆ ಮಾಡಿಲ್ಲ. ಕುಮಾರಸ್ವಾಮಿ ಸಮಯದಲ್ಲಿ ವರದಿ ರೆಡಿ ಆಗಿದೆ. ಅಂದಿನ ಸಚಿವ ಪುಟ್ಟರಂಗಶೆಟ್ಟಿ ವರದಿ ತೆಗೆದುಕೊಳ್ಳೋಕೆ ರೆಡಿ ಇದ್ದರು. ಆದರೆ ಕುಮಾರಸ್ವಾಮಿ ವರದಿ ತೆಗೆದುಕೊಳ್ಳಬೇಡ ಎಂದು ಹೆದರಿಸಿದರು. ಅದಕ್ಕೆ ಪುಟ್ಟರಂಗಶೆಟ್ಟಿ ವರದಿ ಪಡೆಯಲಿಲ್ಲ ಎಂದು ಕುಮಾರಸ್ವಾಮಿ ವಿರುದ್ಧ ಆರೋಪ ಮಾಡಿದರು.

ಐತಿಹಾಸಿಕ ಜಂಬೂಸವಾರಿ ಮೂಲಕ ದೇಶಕ್ಕೆ ಸಾಮಾಜಿಕ ಸಂದೇಶ ರವಾನೆ
ಜನಾಭಿಪ್ರಾಯ ಪಡೆದು ದಸರಾ ಪ್ರಾಧಿಕಾರ ರಚನೆಗೆ ನಿರ್ಧಾರ

ಮೈಸೂರು,ಅ.29 (ಎಂಟಿವೈ)– ಮುಂಬರುವ ವರ್ಷಗಳಲ್ಲಿ ದಸರಾ ಮಹೋತ್ಸವಕ್ಕೆ ಹೊಸ ರೂಪ ನೀಡಲು ಜನಾಭಿಪ್ರಾಯ ಪಡೆದು ದಸರಾ ಪ್ರಾಧಿಕಾರ ರಚಿಸಲು ಕ್ರಮ ಕೈಗೊಳ್ಳುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾಗೆ ರೀ ಲುಕ್ ನೀಡಲು ಹಾಗೂ ದಸರಾ ಪ್ರಾಧಿಕಾರ ರಚನೆ ಮಾಡಬೇಕೆಂಬ ಅಭಿಪ್ರಾಯ ಕೆಲವರಿಂದ ವ್ಯಕ್ತವಾಗಿದೆ. ಅಲ್ಲದೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಅನೇಕರು ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಕುರಿತು ಮುಂಬರುವ ದಿನಗಳಲ್ಲಿ ಮೈಸೂರಿನ ಜನರ ಅಭಿಪ್ರಾಯ ಪಡೆದು ಸೂಕ್ತ ನಿರ್ಧಾರ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ನಿರೀಕ್ಷೆಗೂ ಮೀರಿದ ಯಶಸ್ಸು: ನಾಡಹಬ್ಬ ದಸರಾ ಮಹೋತ್ಸವ ನಿರೀಕ್ಷೆಗೂ ಮೀರಿದ ಯಶಸ್ಸು ಕಂಡಿದೆ. ಸಾಮರಸ್ಯ ಬೆಸೆಯುವ ಸಮುದಾಯಗಳ ಸಮ್ಮಿಲನವಾಗಿ ದೇಶಕ್ಕೆ ಸಾಮಾಜಿಕ ಸಂದೇಶವನ್ನು ಜಂಬೂಸವಾರಿ ಮೆರವಣಿಗೆ ರವಾನಿಸಿದೆ. ಜಂಬೂಸವಾರಿಯನ್ನು ಈ ಬಾರಿ ವಿವಿಧ ವೇದಿಕೆ ಮೂಲಕ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ 10 ಲಕ್ಷ ಮಂದಿ ವೀಕ್ಷಿಸಿದ್ದಾರೆ. ನಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಪ್ರಮಾಣದ ಯಶಸ್ಸು ಕಂಡಿದೆ. ಈ ದಸರಾ ಮಹೋತ್ಸವ ಆಚರಣೆಗೆ ನಿಯೋಜನೆಗೊಂಡಿದ್ದ ಬಹುತೇಕ ಅಧಿಕಾರಿಗಳು ಹೊಸ ಅಧಿಕಾರಿಗಳಾಗಿದ್ದಾರೆ. ಆದರೂ ಕಳೆದ ಒಂದೂವರೆ ತಿಂಗಳಿಂದ ದಸರಾ ಯಶಸ್ಸಿಗಾಗಿ ಶ್ರಮಿಸಿದ್ದಾರೆ ಎಂದು ಹೆಚ್.ಸಿ.ಮಹದೇವಪ್ಪ ಪ್ರಶಂಸೆ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ


ಮೈಸೂರಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿದರು.

ದಸರಾದ ವಿವಿಧ ಕಾರ್ಯಕ್ರಮಗಳು ಹಾಗೂ ಜಂಬೂಸವಾರಿ ಮೆರವಣಿಗೆಯಲ್ಲಿ ಲಕ್ಷಾಂತರ ಮಂದಿ ವೀಕ್ಷಿಸಿದ್ದರೂ, ಯಾವುದೇ ಸಣ್ಣ ಅಹಿತಕರ ಘಟನೆ ನಡೆದಿಲ್ಲ. ಎಲ್ಲರೂ ಕಾನೂನು ಸುವ್ಯವಸ್ಥೆಯನ್ನು ಗೌರವಿಸಿದ್ದಾರೆ. ನಾಡಿನ ಸಾಂಸ್ಕೃತಿಕ ವೈಭವದೊಂದಿಗೆ, ಕಲೆ, ಸಾಮಾಜಿಕ ಸಂದೇಶ, ವಿವಿಧತೆಯಲ್ಲಿ ಏಕತೆ ಸೇರಿದಂತೆ ಸಮಾಜದ ಸಾಮರಸ್ಯ ಸಾರುವ ಸಂದೇಶವನ್ನು ದಸರಾ ಮಹೋತ್ಸವ ನೀಡಿದೆ ಎಂದು ಹೇಳಿದರು.

ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಅವರ ಆಧಾರರಹಿತವಾದ ಘಟನೆ. ಈ ಸಂಬಂಧ ದೂರು ದಾಖಲಾಗಿದೆ. ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಅಭಿವೃದ್ಧಿ ಕಡೆಗೆ ಒತ್ತು: ದಸರಾ ಮುಗಿದಿದೆ. ಜಿಲ್ಲೆಯ ಅಭಿವೃದ್ಧಿಯ ಕಡೆಗೆ ಗಮನಹರಿಸುತ್ತೇವೆ. ಮೈಸೂರಿನ ಸಾಂಸ್ಕೃತಿಕತೆ ಮತ್ತು ಉದಾತ್ತತೆಗೆ ಧಕ್ಕೆ ಬರದಂತೆ ಕೆಲಸ ಮಾಡುತ್ತೇವೆ. ಬರದ ಕೆಲಸಗಳು ಆರಂಭಗೊಳ್ಳಲಿವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವರಿಗೆ ಬೆದರಿಕೆ ವಿಚಾರವಾಗಿ ಉತ್ತರಿಸಿದ ಸಚಿವರು, ವಾಕ್ ಸ್ವಾತಂತ್ರ್ಯ ಹತ್ತಿಕ್ಕಿದರೆ ಪ್ರಜಾಪ್ರಭುತ್ವ ಹೋಗುತ್ತದೆ. ಪ್ರಜಾಪ್ರಭುತ್ವದ ಕತ್ತು ಹಿಚುಕಿದಂತೆ ಎಂದು ಪ್ರತಿಕ್ರಿಯಿಸಿದರಲ್ಲದೆ, ಮಹಿಷಾ ದಸರಾಗೆ ಸರ್ಕಾರ ಪ್ರೋತ್ಸಾಹ ನೀಡಿದೆ ಎಂಬ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಸಂವಿಧಾನದ ಆಶಯದಂತೆ ಎಲ್ಲರಿಗೂ ಅವಕಾಶ ನೀಡಲಾಗುತ್ತದೆ. ರಾಜ್ಯ ಸರ್ಕಾರವು ಮಹಿಷಾ ದಸರಾಗೆ ಪ್ರೋತ್ಸಾಹ ನೀಡಿದಂತಲ್ಲ. ಹೀಗಾಗಿಯೇ, ಸಂವಿಧಾನ ಪೀಠಿಕೆಯನ್ನು ಎಲ್ಲಾ ಕಡೆ ಓದಿಸಲಾಗುತ್ತಿದೆ. ಅದನ್ನು ಓದಿಕೊಂಡರೇ ಎಲ್ಲವೂ ಅರ್ಥವಾಗುತ್ತದೆ ಎಂದು ತಿರುಗೇಟು ನೀಡಿದರು.

ದೀಪಾಲಂಕಾರ ವಿಸ್ತರಣೆ



ಜಂಬೂಸವಾರಿ ಮುಗಿದ ನಂತರ ದೀಪಾಲಂಕಾರವನ್ನು ಮುಂದುವರೆಸಲಾಗಿದೆ. ಪ್ರವಾಸಿಗರು ಹಾಗೂ ಮೈಸೂರಿನ ನಿವಾಸಿಗಳು ದೀಪಾಲಂಕಾರದ ಸೊಬಗು ಸವಿಯಲು ದೀಪಾಲಂಕಾರವನ್ನು ನ.3 ಅಥವಾ 4ರವರೆಗೂ ವಿಸ್ತರಿಸಲಾಗಿದೆ. ದೀಪಾಲಂಕಾರಕ್ಕೆ ಎಲ್‌ಇಡಿ ಬಲ್ಬ್‌ಗಳನ್ನು ಬಳಸಿರುವುದರಿಂದ ಹೆಚ್ಚಿನ ವಿದ್ಯುತ್ ಬಳಕೆಯಾಗುತ್ತಿಲ್ಲ. ಈ ಬಾರಿಯ ದೀಪಾಲಂಕಾರದಲ್ಲಿ ಸಾಮಾಜಿಕ ಸಂದೇಶ ಇತ್ತು. ಸ್ವಾತಂತ್ರ್ಯ ಹೋರಾಟ, ಅನುಭವ ಮಂಟಪ, ನಾಲ್ವಡಿ ಅಭಿವೃದ್ಧಿ ಬಿಂಬಿಸುವ ಮಾದರಿಗಳು ಜನರ ಗಮನಸೆಳೆದಿವೆ ಎಂದು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಿ.ನರಸೀಪುರ ಬಳಿ ಬೋನಿಗೆ ಬಿದ್ದ ಚಿರತೆ



ಮೈಸೂರು,ಅ.29(ಎಂಟಿವೈ)–ಜಿಲ್ಲೆಯ ತಿ.ನರಸೀಪುರ ತಾಲೂಕಿನ ಬೊಮ್ಮನಹಳ್ಳಿಯ ಜಮೀನೊಂದರಲ್ಲಿ ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ 8 ವರ್ಷದ ಹೆಣ್ಣು ಚಿರತೆಯೊಂದು ಸೆರೆ ಸಿಕ್ಕಿದ್ದು, ಅದು ಬೇಟೆಯಾಡುವ ಶಕ್ತಿ ಕಳೆದುಕೊಂಡಿರುವುದರಿಂದ ಕೂರ್ಗಳ್ಳಿಯಲ್ಲಿರುವ ಪುನರ್ವಸತಿ ಕೇಂದ್ರದಲ್ಲಿ ಆರೈಕೆ ಮಾಡಲು ನಿರ್ಧರಿಸಲಾಗಿದೆ.

ಬನ್ನೂರು ಹೋಬಳಿಯ ಬೊಮ್ಮನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಳೆದ 2 ತಿಂಗಳಿನಿಂದ ಮನೆಗಳ ಸಮೀಪದಲ್ಲಿಯೇ ಓಡಾಡುತ್ತಿದ್ದ ಚಿರತೆ, ಕುರಿ ಮತ್ತು ಜಾನುವಾರುಗಳ ಮೇಲೆ ದಾಳಿ ಮಾಡುತ್ತಿತ್ತು. ಈ ಹಿನ್ನೆಲೆಯಲ್ಲಿ ಸ್ಥಳೀಯರು ಅರಣ್ಯ ಇಲಾಖೆಗೆ ದೂರು ನೀಡಿ ಚಿರತೆ ಸೆರೆ ಹಿಡಿಯುವಂತೆ ಮನವಿ ಮಾಡಿದ್ದರು. ಕಳೆದ 1 ತಿಂಗಳಿನಿಂದಲೂ ಚಿರತೆ ಬೋನಿಗೆ ಬೀಳದೆ ಸತಾಯಿಸುತ್ತಿತ್ತು.

ಆದರೆ ಕಳೆದ ರಾತ್ರಿ ಬೊಮ್ಮನಹಳ್ಳಿ ಜಮೀನಿನ ಬಳಿ ಇಡಲಾಗಿದ್ದ ಬೋನಿಗೆ ಬಿದ್ದಿದೆ. ಚಿರತೆಯನ್ನು ಪರಿಶೀಲಿಸಿದಾಗ ಅದು 8ರಿಂದ 9 ವರ್ಷ ಪ್ರಾಯದ ಹೆಣ್ಣು ಚಿರತೆಯಾಗಿದ್ದು, 4 ಕೋರೆ ಹಲ್ಲುಗಳಲ್ಲಿ 3 ಹಲ್ಲುಗಳು ಪೂರ್ಣ ಪ್ರಮಾಣದಲ್ಲಿ ಸವೆದಿದೆ. ಇದರಿಂದ ಬೇಟೆಯಾಡುವ ಶಕ್ತಿಯನ್ನು ಕಳೆದುಕೊಂಡು ಮನೆಗಳ ಸಮೀಪವೇ ಬಂದು ಸಾಕುನಾಯಿ, ಕುರಿ ಸೇರಿದಂತೆ ಜಾನುವಾರುಗಳ ಮೇಲೆ ದಾಳಿ ಮಾಡಿ ಹೊತ್ತೊಯ್ಯುತ್ತಿತ್ತು ಎಂದು ಖಚಿತವಾಗಿದೆ. ಇದೀಗ ಸೆರೆ ಸಿಕ್ಕ ಚಿರತೆಯನ್ನು ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ದಾಳಿ ಪುನರಾವರ್ತನೆ ತಡೆಗೆ ಕ್ರಮ

"ಬೊಮ್ಮನಹಳ್ಳಿ ಸೇರಿದಂತೆ ಕೆಲ ಗ್ರಾಮಗಳಲ್ಲಿ ಚಿರತೆ ಉಪಟಳದ ಬಗ್ಗೆ ದೂರು ಕೇಳಿ ಬಂದಿತ್ತು. ಸ್ಥಳೀಯರು ನೀಡಿದ ದೂರನ್ನು ಗಂಭೀರವಾಗಿ ಪರಿಗಣಿಸಿ ವಿವಿಧೆಡೆ ಬೋನು ಇಟ್ಟು ಚಿರತೆ ಸೆರೆಗೆ ಕಾರ್ಯಾಚರಣೆ ನಡೆಸಲಾಗುತ್ತಿತ್ತು. ದೂರು ಬಂದ ಸ್ಥಳಕ್ಕೆ ತೆರಳಿ ಚಿರತೆಯ ಚಲನ–ವಲನದ ಬಗ್ಗೆ ಸೂಕ್ಷ್ಮವಾಗಿ ಗಮನಿಸಲಾಗುತ್ತಿತ್ತು. ಆದರೆ ಕಳೆದ ರಾತ್ರಿ ಬೋನಿಗೆ ಚಿರತೆ ಬಿದ್ದಿದೆ ಇದನ್ನು ಪರಿಶೀಲಿಸಿದಾಗ ಕೋರೆ ಹಲ್ಲುಗಳು ಸವೆದಿರುವುದು ಪತ್ತೆಯಾಗಿದೆ. ಇದರಿಂದ ಅದು ಸುಲಭವಾಗಿ ಬೇಟೆಗೆ ಸಿಗುವ ನಾಯಿ ಮತ್ತು ಜಾನುವಾರುಗಳ ಮೇಲೆ ದಾಳಿ ಮಾಡಲಾರಂಭಿಸಿತ್ತು. ಅದನ್ನು ಕಾಡಿಗೆ ಬಿಟ್ಟರೆ ಮತ್ತೆ ದಾಳಿ ಮಾಡುವ ಸಾಧ್ಯತೆ ಇತ್ತು. ಈ ಹಿನ್ನೆಲೆಯಲ್ಲಿ ಪುನರ್ವಸತಿ ಕೇಂದ್ರಕ್ಕೆ ಕೊಂಡೊಯ್ಯಲಾಗಿದೆ.

–ಡಾ.ಬಸವರಾಜು, ಡಿಸಿಎಫ್

ಮಜ್ಜನ ಪೂಜೆ, ವಾಹನೋತ್ಸವ, ಮೆರವಣಿಗೆಯೊಂದಿಗೆ ಶ್ರೀ ಬನ್ನಿ ಮಹಾಕಾಳೇಶ್ವರಿ, ಶ್ರೀ ಆಯರಳ್ಳಿ ಮಾಕಮ್ಮ, ಶ್ರೀ ಮಾಲಮ್ಮ ಜಾತ್ರೆ ಸಂಪನ್ನ





ಮೈಸೂರು, ಅ.29(ಎಂಕೆ)– ಮೈಸೂರಿನ ಕುರುಬಾರಹಳ್ಳಿಯ ಶ್ರೀ ಬನ್ನಿಮಹಾಕಾಳೇಶ್ವರಿ, ಶ್ರೀ ಆಯರಳ್ಳಿ ಮಾಕಮ್ಮ ಮತ್ತು ಶ್ರೀ ಮಾಲಮ್ಮ ಜಾತ್ರಾ ಮಹೋತ್ಸವ ಮಜ್ಜನ ಪೂಜೆ, ವಾಹನೋತ್ಸವ ಮತ್ತು ಮೆರವಣಿಗೆಯೊಂದಿಗೆ ಸಂಪನ್ನಗೊಂಡಿತು.

ಕುರುಬಾರಳ್ಳಿ ಬನ್ನಿ ಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮನವರ ದೇವಸ್ಥಾನದ ಟ್ರಸ್ಟ್ ಸಹಯೋಗದೊಂದಿಗೆ ಮೂರು ದಿನಗಳ ಜಾತ್ರಾ ಮಹೋತ್ಸವ ಕಡೆಯ ದಿನದ ವಾಹನೋತ್ಸವಕ್ಕೆ ಪೂಜೆ ಸಲ್ಲಿಸುವ ಮೂಲಕ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಚಾಲನೆ ನೀಡಿದರು.

ಬಳಿಕ ಹತ್ತಾರು ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಕುರುಬಾರಹಳ್ಳಿಯ ಪ್ರಮುಖ ಬೀದಿಗಳಲ್ಲಿ ಸಾಗಿದ ಮೆರವಣಿಗೆಯಲ್ಲಿ ನೂರಾರು ಭಕ್ತರು ಪಾಲ್ಗೊಂಡು ದೇವಿಯರ ಕೃಪೆಗೆ ಪಾತ್ರರಾದರು.

ಕುರುಬಾರಹಳ್ಳಿ ಸಿದ್ಧಾರ್ಥನಗರದ ಸಿಐಟಿಬಿ ಚೌಲ್ಟ್ರಿಗೆ ಹೊಂದಿಕೊಂಡಂತಿರುವ ದೇವಾಲಯದಲ್ಲಿ ಶುಕ್ರವಾರ ರಾತ್ರಿ 7ಕ್ಕೆ ಘಟಿ ಪೂಜೆಯಿಂದ ಆರಂಭವಾದ ಜಾತ್ರಾ ಮಹೋತ್ಸವ ಮಜ್ಜನ ಪೂಜೆ ಹಾಗೂ ವಾಹನೋತ್ಸವ ಪೂಜೆ ಮತ್ತು ಮೆರವಣಿಗೆ ಮೂಲಕ ಸಂಪನ್ನಗೊಂಡಿತು. ಮೈಸೂರು ನಗರವಷ್ಟೇ ಅಲ್ಲದೆ ಪಿರಿಯಾಪಟ್ಟಣ, ಹುಣಸೂರು, ಕೆ.ಆರ್.ನಗರ, ತಿ.ನರಸೀಪುರ, ಗರ್ಗೇಶ್ವರಿ, ಮಂಟಿಕೊಪ್ಪಲು, ರಾವಂದೂರು, ಯಾಂದಳ್ಳಿ, ನಾಡನಹಳ್ಳಿ, ಮಲ್ಲರಾಜಯ್ಯನಹುಂಡಿ, ತಮ್ಮಡಳ್ಳಿ ಸೇರಿದಂತೆ ಸುಮಾರು 40 ಗ್ರಾಮಗಳ ಭಕ್ತರು ಈ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ, ದೇವಿಯನ್ನು ಆರಾಧಿಸಿದರು. ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಅಪ್ಪುಗೌಡ, ಉಪಾಧ್ಯಕ್ಷರಾದ ಪರಮೇಶ್ ಹಾಗೂ ವೈ.ಎಂ.ಗೌಡ, ಪ್ರಧಾನ ಕಾರ್ಯದರ್ಶಿ ಕೆ.ಜವರಾಜು, ಖಜಾಂಚಿ ಕ್ಯಾಂಟಿನ್ ನಾಗರಾಜು, ಸಂಘಟನಾ ಕಾರ್ಯದರ್ಶಿ ಕುರುಬಾರಹಳ್ಳಿ ಜೆ.ಪ್ರಕಾಶ್, ಟ್ರಸ್ಟಿಗಳಾದ ನಾಗಣ್ಣ, ಎಸ್.ಶಿವಣ್ಣ, ಬೀರಪ್ಪ, ಬಿ.ಶಿವಶಂಕರ್, ಕ್ಯಾಂಟಿನ್ ರವಿಕುಮಾರ್, ಟಿ.ಮಂಜುನಾಥ್, ಬಸವರಾಜು, ಎಂ.ದೇವರಾಜು, ಎಂ.ಶಿವಣ್ಣ, ಎಂ.ಚಂದ್ರು, ಶಿವಶಂಕರ್, ಎಸ್.ರಮೇಶ್, ಎಂ.ಜೆ.ರವಿಕುಮಾರ್, ಎ.ಧನಂಜಯ ಗ್ರಾಮಸ್ಥರಾದ ಜೆ.ಪ್ರಕಾಶ್, ಸೋಮು, ಕೆ.ಜೆ.ರಮೇಶ್, ನವೀನ್ ಅಪ್ಪುಗೌಡ, ಕಮಲ, ಹೇಮಂತ್ ಮತ್ತಿತರರು ಪಾಲ್ಗೊಂಡಿದ್ದರು.

ಪುನೀತ್ ಸ್ಮರಣೆ: ಚಿಕನ್ ಬಿರಿಯಾನಿ, ಚಾಪ್ಸ್ ವಿತರಣೆ



ಮೈಸೂರು, ಅ.29(ಎಂಕೆ)– ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ಅವರ 2ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ನೂರಾರು ಜನರಿಗೆ ಚಿಕನ್ ಬಿರಿಯಾನಿ, ಚಿಕನ್ ಚಾಪ್ಸ್ ವಿತರಿಸಲಾಯಿತು.

ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಡಾ.ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ನೂರಾರು ಮಂದಿ ಪುನೀತ್ ಅಭಿಮಾನಿಗಳಿಗೆ ಚಿಕನ್ ಬಿರಿಯಾನಿ, ಚಿಕನ್ ಚಾಪ್ಸ್ ವಿತರಣೆ ಮಾಡಿದರು. ಬಳಿಕ ಕನ್ನಡ ಚಿತ್ರರಂಗ ಎಂದೆಂದಿಗೂ ಮರೆಯಲಾಗದ ಖ್ಯಾತ ನಟ ಹಾಗೂ ಸಮಾಜ ಸೇವಕರಾದ ಡಾ. ಪುನೀತ್ ರಾಜ್‌ಕುಮಾರ್ ನಮ್ಮೊಂದಿಗಿಲ್ಲ ಎಂಬುದು ನೋವಿನ ಸಂಗತಿ. ಸಾಕಷ್ಟು ಜನರಿಗೆ ತೆರೆಮರೆಯಲ್ಲಿ ಸಹಕಾರ ನೀಡಿರುವ ಅವರು, ಹಲವರ ಬದುಕಿಗೆ ಬೆಳಕಾಗಿದ್ದಾರೆ ಎಂದು ಸ್ಮರಿಸಿದರು.

ಡಾ.ಪುನೀತ್ ರಾಜ್‌ಕುಮಾರ್ ಅವರಿಗೆ ಇಷ್ಟವಾದ ಚಿಕನ್ ಬಿರಿಯಾನಿ ಮತ್ತು ಚಿಕನ್ ಚಾಪ್ಸ್ ವಿತರಣೆ ಮಾಡುವ ಮೂಲಕ ಅವರನ್ನು ಸ್ಮರಿಸುತ್ತಿದ್ದೇವೆ ಎಂದರು. ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಮುಡಾ ಮಾಜಿ ಸದಸ್ಯ ನವೀನ್‌ಕುಮಾರ್, ಮುಖಂಡರಾದ ವಿನಯ್ ಕುಮಾರ್, ರಾಜೀವ್ ಗುರುರಾಜ್, ಪ್ರಶಾಂತ್, ನಿತಿನ್, ರವಿಚಂದ್ರನ್, ಮಂಜುನಾಥ್, ಸಂದೀಪ್, ನಂಜುಂಡಿ, ನವೀನ್ ಮತ್ತಿತರರು ಉಪಸ್ಥಿತರಿದ್ದರು.

ಮನೆ ಮಾಲೀಕನಿಂದ ಕಿರುಕುಳ ಆರೋಪ

ಮೈಸೂರು, ಅ.29(ಎಂಟಿವೈ)–ಮೈಸೂರಿನ ಸಾತಗಳ್ಳಿ ಬಡಾವಣೆಯ ಮನೆಯೊಂದರ ಮಾಲೀಕ ಲೈಂಗಿಕ ಕಿರುಕುಳ ನೀಡುವುದರೊಂದಿಗೆ ಭೋಗ್ಯಕ್ಕೆ ಪಡೆದಿದ್ದ ಮನೆಯಿಂದ ಹೊರ ಹಾಕಿದ್ದಾನೆ ಎಂದು ಸಂತ್ರಸ್ತ ಮಹಿಳೆ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾತಗಳ್ಳಿಯ ಮನೆಯೊಂದನ್ನು 12 ಲಕ್ಷ ರೂ. ನಿಯಮಮಾನುಸಾರ ಭೋಗ್ಯಕ್ಕೆ ಪಡೆದು ವಾಸಿಸುತ್ತಿರುವ ನನಗೆ ಮನೆ ಮಾಲೀಕ ಚಿನ್ನಬೆಳ್ಳಿ ವ್ಯಾಪಾರಿ ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದಾನೆ. ಪತಿಗೆ ದೃಷ್ಟಿದೋಷ ಇರುವುದನ್ನೇ ಬಂಡವಾಳವಾಗಿಸಿಕೊಂಡು ನಿರಂತರ ಕಿರುಕುಳ ನೀಡುತ್ತಿದ್ದಾನೆ. ನಾಲ್ವರು ಪತ್ನಿಯರಿದ್ದರೂ ನನ್ನನ್ನು ಲೈಂಗಿಕ ಕೃತ್ಯಕ್ಕೆ ಸಹಕರಿಸುವಂತೆ ಹಣ, ಆಭರಣದ ಆಮಿಷವೊಡ್ಡುತ್ತಿದ್ದಾನೆ. ಇದನ್ನು ನಿರಾಕರಿಸಿ, ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದರಿಂದ ಮನೆಯಿಂದ ಹೊರ ಹಾಕಿದ್ದಾನೆ. ಈ ಸಂಬಂಧ ಪೊಲೀಸರು ನ್ಯಾಯ ದೊರಕಿಸಿಕೊಡುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಹ್ಯೂಮನ್ ರೈಟ್ಸ್ ಕೌನ್ಸಿಲ್ ಖಾಸಗಿ ಸಂಸ್ಥೆ ಕಾರ್ಯದರ್ಶಿ ಲಿಯೊ ಕ್ರಿಸ್ಟಿ, ಶೇಖ್ ಇದ್ದರು.

ಹೂಟಗಳ್ಳಿ ಕಾರ್ಖಾನೆ ಆವರಣದಲ್ಲಿ ಪ್ರತ್ಯಕ್ಷವಾದ ಮುಳ್ಳುಹಂದಿ ಸೆರೆ



ಮೈಸೂರು, ಅ.29(ಎಂಟಿವೈ)– ಮೈಸೂರಿನ ಹೂಟಗಳ್ಳಿಯ ಕೈಗಾರಿಕಾ ಪ್ರದೇಶದಲ್ಲಿರುವ ರಾಣಿ ಮದ್ರಾಸ್ ಹೈಡ್ರಾಲಿಕ ಫ್ಯಾಕ್ಟರಿಯ ಕ್ಯಾಂಟೀನ್ ಬಳಿ ಭಾನುವಾರ ಪ್ರತ್ಯಕ್ಷಗೊಂಡು ಆತಂಕ ಸೃಷ್ಟಿಸಿದ್ದ ಮುಳ್ಳುಹಂದಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಚಾಕಚಕ್ಯತೆಯಿಂದ ಸೆರೆ ಹಿಡಿದು ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಿದ್ದಾರೆ.

ಕಾರ್ಖಾನೆ ಆವರಣದಲ್ಲಿ ಮುಳ್ಳನ್ನು ಹೊದ್ದುಕೊಂಡು ಓಡಾಡುತ್ತಿದ್ದ ಹಂದಿಯನ್ನು ಕಂಡ ಸಿಬ್ಬಂದಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಕೂಡಲೇ ಸ್ಥಳಕ್ಕೆ ಬಂದ ಆರ್‌ಎಫ್‌ಓ ಕೆ.ಸುರೇಶ್ ನೇತೃತ್ವದ ತಂಡ ಬಲೆ ಬಳಸಿ ಮುಳ್ಳುಹಂದಿಯನ್ನು ಸೆರೆ ಹಿಡಿಯುವ ಪ್ರಯತ್ನ ಮಾಡಿತು. ಆದರೆ ಮುಳ್ಳುಹಂದಿ ಬಲೆಗೆ ಸಿಗದೆ ಅರಣ್ಯ ಸಿಬ್ಬಂದಿಗಳಿಗೆ ಚಳ್ಳೆಹಣ್ಣು ತಿನ್ನಿಸುತ್ತಾ ಓಡಾಡತೊಡಗಿತ್ತು.

ನಂತರ ಸ್ಥಳಕ್ಕೆ ಲೀಲಾ ಪಶು ಆಸ್ಪತ್ರೆಯ ಪಶುವೈದ್ಯ ಡಾ.ಮದನ್ ಅವರನ್ನು ಕರೆಸಿ ಮುಳ್ಳುಹಂದಿಗೆ ಅರವಳಿಕೆ ಚುಚ್ಚುಮದ್ದು ನೀಡಲಾಯಿತು. ಆನಂತರ ಪ್ರಜ್ಞಾಹೀನ ಸ್ಥಿತಿಗೆ ತಲುಪಿದ ಮುಳ್ಳುಹಂದಿಯನ್ನು ಬಲೆಗೆ ಹಾಕಿಕೊಂಡು ಪ್ರಾಥಮಿಕ ಚಿಕಿತ್ಸೆ ನೀಡಿ ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಲಾಯಿತು ಎಂದು ಡಿಸಿಎಫ್ ಡಾ. ಬಸವರಾಜು ತಿಳಿಸಿದ್ದಾರೆ.



ಮೈಸೂರಿನ ಸುಣ್ಣದಕೇರಿಯಲ್ಲಿ ವಾಲ್ಮೀಕಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಜಯಂತಿ ಆಚರಿಸಲಾಯಿತು. ಮುಖಂಡರಾದ ಗೋಪಾಲ್, ಅಶ್ವಥ್, ಮಹೇಶ್ ನಾಯಕ್, ಕೃಷ್ಣನಾಯಕ್, ಹೇಮಂತ್, ವಕೀಲರಾದ ಶಿವರಾಜ್, ಗುರುರಾಜ್ ಇದ್ದರು.

ಅರ್ಜಿ ಆಹ್ವಾನ

ಮೈಸೂರು: ತೋಟಗಾರಿಕೆ ನಿರ್ದೇಶಕರ ಕಚೇರಿ ವತಿಯಿಂದ ತಾಲೂಕಿನ ರೈತರಿಗೆ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ಅಡಿ ಪ್ರತಿ ರೈತರಿಗೆ 0.20 ಹೆಕ್ಟೇರ್‌ನಿಂದ 1 ಹೆಕ್ಟೇರ್ ಪ್ರದೇಶಕ್ಕೆ ಗರಿಷ್ಠ 123 ಸಂಖ್ಯೆ ತೆಂಗಿನ ಗಿಡಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ ಆಸಕ್ತ ರೈತರು ತಾಲೂಕಿನ ಹೋಬಳಿ ಅಧಿಕಾರಿಗಳನ್ನು ಸಂಪರ್ಕಿಸಬೇಕು. ಮಾಹಿತಿಗಾಗಿ ಕಸಬಾ ಹೋಬಳಿ ಮೊ: 9901387284, ವರುಣ–ಮೊ: 7259592484, ಜಯಪುರ–ಮೊ:8904673607, ಇಲವಾಲ–ಮೊ:9986086262 ಸಂಪರ್ಕಿಸಬಹುದಾಗಿದೆ.

ವಿಧಾನಪರಿಷತ್ ದಕ್ಷಿಣ ಕ್ಷೇತ್ರಕ್ಕೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಿ

ಮೈಸೂರು, ಅ.29(ಎಂಟಿವೈ)– ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯ ನಾಲ್ಕು ಜಿಲ್ಲೆಗಳಲ್ಲಿರುವ ಶಿಕ್ಷಕರು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ಕರ್ನಾಟಕ ರಾಜ್ಯ ಅನುದಾನ ರಹಿತ ಶಾಲಾ–ಕಾಲೇಜು ಬೋಧಕ ಮತ್ತು ಬೋಧಕೇತರರ ಸಂಘ ಅಧ್ಯಕ್ಷ ಪಿ.ಎಸ್.ರಾಜಶೇಖರ ಮೂರ್ತಿ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಲ್ಕು ಜಿಲ್ಲೆಗಳಲ್ಲಿ ಅನುದಾನರಹಿತ ಶಾಲಾ ಕಾಲೇಜು, ಅನುದಾನಕ್ಕೆ ಒಳಪಟ್ಟ ಹಲವು ಶೈಕ್ಷಣಿಕ ಸಂಸ್ಥೆಗಳಿವೆ. ಇವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹರು ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಿಕೊಳ್ಳಬೇಕು. ಪ್ರೌಢಶಾಲೆಗೆ ಮೇಲ್ಪಟ್ಟ ಇತರೆ ಕಾಲೇಜು ಬೋಧಕರು ಸಹಾ ಮತದಾನದ ಹಕ್ಕು ಪಡೆಯಲು ಅರ್ಹರಾಗಿದ್ದಾರೆ. ಈ ವೇಳೆ ಶಿಕ್ಷಕರು ಪದವೀಧರರಾಗಿರಬೇಕೆಂಬ ನಿಯಮವಿಲ್ಲ. ಕ್ರಾಫ್ಟ್, ಸಂಗೀತ, ಪಿಟಿ, ಮೊದಲಾದ ವಿದ್ಯಾರ್ಹತೆಯುಳ್ಳವರು ಅರ್ಹರಾಗಿದ್ದು, ಮತದಾರರ ನೋಂದಣಿ ಪ್ರಕ್ರಿಯೆ ನಡೆದಿರುವ ಕಾರಣ ಕೂಡಲೇ ಇದೇ ನವೆಂಬರ್ ಆರರ ಅಂತಿಮ ದಿನದ ಮುನ್ನ ಅರ್ಜಿ ಸಲ್ಲಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಡಿ.ಎನ್.ಗಣೇಶ್, ನಟೇಶ್, ನಾಗೇಂದ್ರ, ಎಚ್.ಆರ್. ಸುರೇಶ್ ಹಾಜರಿದ್ದರು.

ಹೆಚ್‌ಡಿಕೆ ವಿರುದ್ಧ ಟೀಕೆ ನಿಲ್ಲಿಸದಿದ್ದರೆ ಎಂ.ಲಕ್ಷ್ಮಣ್ ವಿರುದ್ಧ ಪ್ರತಿಭಟನೆ

ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ ಎಚ್ಚರಿಕೆ

ಮೈಸೂರು, ಅ.29(ಎಂಟಿವೈ)– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಟೀಕೆ ಮಾಡುವುದನ್ನು ನಿಲ್ಲಿಸದಿದ್ದರೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ವಿರುದ್ಧ ಪ್ರತಿಭಟನೆ ನಡೆಸುವುದಾಗಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ನರಸಿಂಹಸ್ವಾಮಿ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಇತ್ತೀಚೆಗೆ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಅವಹೇಳನಕಾರಿಯಾಗಿ ಟೀಕೆ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ರಾಜ್ಯ ನಾಯಕರ ಗಮನ ಸೆಳೆಯುವ ನಿಟ್ಟಿನಲ್ಲಿ ಸುಳ್ಳು ಆರೋಪಗಳ ಮೂಲಕ ಟೀಕೆ ಮುಂದುವರೆಸಿದ್ದಾರೆ. ಲಕ್ಷ್ಮಣ್ ಅವರು ಎಚ್‌ಡಿಕೆ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ, ಕೊನೆಗೆ ತಾವೇ ತಮಗೆ ರಕ್ಷಣೆ ಬೇಕೆಂದು ದೂರು ನೀಡಿರುವುದು ಹಾಸ್ಯಾಸ್ಪದವಾಗಿದೆ. ತಮ್ಮ ಪಕ್ಷದವರ ಮೆಚ್ಚುಗೆ ಗಳಿಸಲು ಈ ರೀತಿ ಅವರು ಮನಸೋ ಇಚ್ಛೆ ಮಾತನಾಡುತ್ತಿದ್ದಾರೆ. ಮತ್ತೊಬ್ಬರನ್ನು ಹಿಯ್ಯಾಳಿಸುವುದರಿಂದ ತಾವು ದೊಡ್ಡವರೆನಿಸಿಕೊಳ್ಳಬಹುದೆಂಬ ಲೆಕ್ಕಾಚಾರದಲ್ಲಿದ್ದಾರೆ. ಇನ್ನಾದರೂ ಟೀಕೆ ನಿಲ್ಲಿಸದಿದ್ದರೆ ಲಕ್ಷ್ಮಣ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮಹಾತ್ಮಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು, ಮುಖಂಡರಾದ ಚಲುವೇಗೌಡ, ಗಂಗಾಧರ್, ರಾಜಶೇಖರ್, ನಿಂಗಪ್ಪ ಹಾಜರಿದ್ದರು.

ಜಯಚಾಮರಾಜೇಂದ್ರ ಒಡೆಯರ್, ಚಾಮುಂಡೇಶ್ವರಿ ಕುರಿತು 90ಕ್ಕೂ ಅಧಿಕ ಗೀತೆಗಳ ರಚಿಸಿ, ಹಾಡಿದ್ದಾರೆ

ವಿದುಷಿ ಆರ್.ಅಮೃತ ಮಾಹಿತಿ



ಮೈಸೂರು,ಅ.29(ಎಸ್‌ಪಿಎನ್)– ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಸ್ವತಃ ಗೀತಾ ರಚನಾಕಾರರಾಗಿದ್ದು, ಶ್ರೀ ಚಾಮುಂಡೇಶ್ವರಿ ಕುರಿತು 90ಕ್ಕೂ ಹೆಚ್ಚು ಗೀತೆಗಳನ್ನು ರಚಿಸಿ, ಹಾಡಿದ್ದಾರೆ. ಹಾಗಾಗಿ ಸಂಗೀತಲೋಕದಲ್ಲಿ ಅವರನ್ನು ವಾಗ್ಗೇಯಕಾರರೆಂದು ಸಂಬೋಧಿಸುವುದುಂಟು ಎಂದು ವಿದುಷಿ ಆರ್.ಅಮೃತ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದ ಸುರುಚಿ ರಂಗಮನೆಯಲ್ಲಿ 'ಕಥೆ ಕೇಳೋಣ ಬನ್ನಿ' ಶೀರ್ಷಿಕೆಯಡಿ ನಡೆದ ವಾರದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮೈಸೂರು ಸಂಸ್ಥಾನ ಆಳ್ವಿಕೆಯಲ್ಲಿ ಕಥೆ, ಸಾಹಿತ್ಯ, ಸಂಗೀತ, ಚಿತ್ರಕಲೆ ಸೇರಿದಂತೆ ಲಲಿತಾ ಕಲೆಗಳಿಗೆ ಪ್ರೋತ್ಸಾಹಿಸಿದ್ದ ಕೀರ್ತಿ ಮಹಾರಾಜರಿಗೆ ಸಲ್ಲುತ್ತದೆ ಎಂದರು.

ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರಕ್ಕೆ ತ್ಯಾಗರಾಜರ ಕೊಡುಗೆ ಅಪಾರ. ತ್ಯಾಗರಾಜರು ಕರ್ನಾಟಕ ಸಂಗೀತ ಪದ್ಧತಿಯ ಮುಖ್ಯ ರಚನಕಾರರಲ್ಲಿ ಒಬ್ಬರು. ಇವರ ಜೊತೆಗೆ ಮುತ್ತುಸ್ವಾಮಿ ದೀಕ್ಷಿತರು ಮತ್ತು ಶ್ಯಾಮಾ ಶಾಸ್ತ್ರಿ ಕರ್ನಾಟಕ ಸಂಗೀತದ ತ್ರಿಮೂರ್ತಿಗಳು ಎಂದೇ ಕರೆಯಲ್ಪಡುತ್ತಾರೆ. ತ್ಯಾಗರಾಜರು ಶ್ರೀರಾಮನ ಪರಮ ಭಕ್ತರಾಗಿದ್ದರು. ದಕ್ಷಿಣ ಭಾರತದ ಎಲ್ಲಾ ಮುಖ್ಯ ದೇವಸ್ಥಾನಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ತ್ಯಾಗರಾಜರು ಅಲ್ಲಿನ ದೇವತೆಗಳ ಕುರಿತು ಗೀತೆಗಳನ್ನು ರಚಿಸಿ, ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಹೆಚ್ಚಿನ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

ತ್ಯಾಗರಾಜರು ಚಿಕ್ಕ ವಯಸ್ಸಿನಲ್ಲಿ ಅವರ ತಾಯಿ ಹಾಡುತ್ತಿದ್ದ ಪುರಂದರದಾಸರ ದೇವರನಾಮಗಳಿಂದ ಪ್ರಭಾವಿತರಾಗಿ, ಹಲವು ಗೀತೆಗಳನ್ನು ಹಾಡಿದ್ದಾರಲ್ಲದೆ, ತ್ಯಾಗರಾಜರು ರಚಿತ ಹಲವು ಕೃತಿಗಳಲ್ಲಿ ಪುರಂದರದಾಸರ ಪ್ರಭಾವ ಇರುವುದು ಗೋಚರಿಸುತ್ತದೆ ಎಂದರು.

ಇಂದಿನ ಮಕ್ಕಳು ಚಿಕ್ಕವಯಸ್ಸಿನಿಂದಲೇ ಓದಿನ ಜೊತೆಗೆ ಸಂಗೀತ, ಚಿತ್ರಕಲೆ, ನೃತ್ಯ ಸೇರಿದಂತೆ ಇತರೆ ಪಠ್ಯೇತರ ಚಟುವಟಿಕೆಗಳ ಬಗ್ಗೆ ಗಮನಹರಿಸಬೇಕು. ಇದರಿಂದ ಶಿಸ್ತುಬದ್ಧ ಜೀವನ ರೂಪಿಸಿಕೊಳ್ಳಲು ಸಾಧ್ಯವಿದೆ. ಅಲ್ಲದೆ, ಕೌಶಲ್ಯಾಧರಿತ ಶಿಕ್ಷಣ ಪಡೆಯಲು ಲಲಿತಾ ಕಲೆಗಳು ವಿದ್ಯಾರ್ಥಿ ಜೀವನದಲ್ಲಿ ಮುಖ್ಯ ಪಾತ್ರವಹಿಸುತ್ತವೆ ಎಂದರು.

ಈ ವೇಳೆ 'ಥಾಟ್ಸ್' ಎಂಬ ಕರ್ನಾಟಕ ಸಂಗೀತ ಪ್ರಯೋಗಾತ್ಮಕ ವಾದ್ಯಗೋಷ್ಠಿ ನಡೆಸಿಕೊಟ್ಟರು. ಇದರಲ್ಲಿ ಯುವ ಕಲಾವಿದರಾದ ವಿದ್ವಾನ್ ಸಾಯಿ ಶಿವ್(ಮೃದಂಗ), ವಿದ್ವಾನ್ ಕೇಶವ್ ಮೋಹನ್ ಕುಮಾರ್ (ಪಿಟೀಲು), ವಿದ್ವಾನ್ ಶಮಿತ್ ಗೌಡ(ಘಟಂ) ವಾದ್ಯ ನುಡಿಸಿ ಎಲ್ಲರ ಗಮನ ಸೆಳೆದರು.

ನ.10ರವರೆಗೆ ಕಲಾ ಕೃತಿಗಳ ಪ್ರದರ್ಶನ

ಮೈಸೂರು,ಅ.29(ಎಂಟಿವೈ)– ಮೈಸೂರಿನ ವಿಜಯನಗರ 2ನೇ ಹಂತದ ಅಂಬರೀಶ್ ರಸ್ತೆಯಲ್ಲಿರುವ ನೆರಳು–ಬೆಳಕು ಗ್ಯಾಲರಿ ಕಾಫಿ ಸಿಟಿಯಲ್ಲಿ ಅ.29ರಿಂದ ನ.10ರವರೆಗೆ ಯುವ ಕಲಾವಿದ ಪವನ್ ಗೌಡ ಅವರ ಕಲಾಕೃತಿಗಳ ಪ್ರದರ್ಶನ ಆಯೋಜಿಸಲಾಗಿದೆ. ಈ ವೇಳೆ ಕಲಾಕೃತಿಗಳ ಮಾರಾಟಕ್ಕೂ ವ್ಯವಸ್ಥೆ ಮಾಡಲಾಗಿದೆ. ಸುಮಾರು 20 ವರ್ಣಚಿತ್ರಗಳು ಪ್ರದರ್ಶನದಲ್ಲಿಡಲಾಗುತ್ತದೆ. ಅ.29 ರಂದು ಬೆಳಗ್ಗೆ 11ಕ್ಕೆ ಹಿರಿಯ ಕಲಾವಿದ ಸುಭಾಷ್ ಕಮ್ಮಾರ್ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ. ಪ್ರತಿದಿನ ಬೆಳಗ್ಗೆ 7ರಿಂದ ರಾತ್ರಿ 9.30 ರವರೆಗೆ ಕಲಾಕೃತಿಗಳ ವೀಕ್ಷಣೆಗೆ ಅವಕಾಶ ನೀಡಲಾಗಿದೆ ಎಂದು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಗ್ಯಾಲರಿ ಕ್ಯುರೇಟರ್ ಗಿರೀಶ್ ಕಪನಿ ತಿಳಿಸಿದರು. ಈ ವೇಳೆ ಕಲಾವಿದ ಪವನ್‌ಗೌಡ, ಕೀರ್ತಿ, ಮಾರುತಿ ಹಾಜರಿದ್ದರು.

ನಾಳೆ ವಿಶ್ವ ಉಪಶಮನ ಆರೈಕೆ ದಿನದ ಜಾಥಾ

ಮೈಸೂರು, ಅ.29(ಎಂಟಿವೈ)– ವಿಶ್ವ ಉಪಶಮನ ಆರೈಕೆ ದಿನಾಚರಣೆ ಅಂಗವಾಗಿ ಅ.31ರಂದು ಬೆಳಗ್ಗೆ 8ಕ್ಕೆ ಮೈಸೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್ಮೆಂಟ್ ವತಿಯಿಂದ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಯಕ್ರಮದ ಸಂಚಾಲಕ ರಾಮಕೃಷ್ಣ ಮುದ್ರೆ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು–ಕೆಆರ್‌ಎಸ್ ಮುಖ್ಯ ರಸ್ತೆಯಲ್ಲಿರುವ ಇಡಿ ಆಸ್ಪತ್ರೆ ಆವರಣದಿಂದ ಅಂದು ಬೆಳಗ್ಗೆ 8 ಗಂಟೆಗೆ ಕಾಲ್ನಡಿಗೆ ಜಾಥಾ ಆರಂಭವಾಗಲಿದೆ. ಈ ಜಾಥಾಕ್ಕೆ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಹಾಗೂ ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ ಚಾಲನೆ ನೀಡಲಿದ್ದಾರೆ. ಈ ಸಂದರ್ಭದಲ್ಲಿ ರೋಟರಿ ಜಿಲ್ಲೆ 3181ರ ಗವರ್ನರ್ ರೊ.ಹೆಚ್.ಆರ್. ಕೇಶವ ಹಾಗೂ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯ ಸಿಇಓ ಎಸ್.ಸವಿತ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಈ ಜಾಥಾವು ಪಿಕೆಟಿಬಿ ಆಸ್ಪತ್ರೆಯಲ್ಲಿ ಅಂತ್ಯಗೊಳ್ಳಲಿದೆ ಎಂದರು.

ಈ ಜಾಥದಲ್ಲಿ ಮಾರಣಾಂತಿಕ ಹಾಗೂ ದೀರ್ಘಕಾಲದ ಖಾಯಿಲೆಗಳಾದ ಕ್ಯಾನ್ಸರ್, ಪಾರ್ಶ್ವವಾಯು, ಹೆಚ್‌ಐವಿ, ಹೃದಯ ರೋಗ, ಕಿಡ್ನಿ ಸಮಸ್ಯೆ ಸೇರಿದಂತೆ ಇನ್ನಿತರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರನ್ನು ಆರೈಕೆ ಮಾಡುವ ಸಂಬಂಧ ಜಾಗೃತಿ ಮೂಡಿಸಲಾಗುತ್ತದೆ ಈ ಬಾರಿ ಉಪಶಮನ ಆರೈಕೆಗಾಗಿ 'ಸಹಾನುಭೂತಿಯ ಸಮುದಾಯದವರೆಲ್ಲ ಒಂದಾಗಿ' ಘೋಷಣೆಯೊಂದಿಗೆ ಆಚರಿಸಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯ ಡಾ.ಎಸ್.ರೇಖಾ, ನಂದಿನಿ, ರೋ.ಜಗದೀಶ್ ಹಾಜರಿದ್ದರು.

ನ್ಯಾಷನಲ್ ವುಶು ಕ್ರೀಡಾಕೂಟಕ್ಕೆ ಶಿಕ್ಷಕ ಎಂ.ಕೆ.ಆಸೀಫ್

ಮೈಸೂರು,ಅ.29(ಎಂಟಿವೈ)– ಗೋವಾದಲ್ಲಿ ನಡೆಯುತ್ತಿರುವ ನ್ಯಾಷನಲ್ ಗೇಮ್ಸ್‌ಗೆ ವುಶು ಕ್ರೀಡಾ ವಿಭಾಗದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲು ನನಗೆ ಅವಕಾಶ ದೊರೆತಿದ್ದು, ಪದಕ ಗೆಲ್ಲುವ ವಿಶ್ವಾಸವಿದೆ ಎಂದು ನಗರದ ಬೇಡನ್ ಪೊವೆಲ್ ಶಾಲೆ ಶಿಕ್ಷಕ ಎಂ.ಕೆ. ಆಸೀಫ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾಷನಲ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳಲು ಹಲವು ವರ್ಷಗಳಿಂದ ಕನಸು ಕಾಣುತ್ತಿದ್ದೆ. ಈಗ ಅದು ಈಡೇರಿದೆ. ಈ ಕ್ರೀಡಾಕೂಟದಲ್ಲಿ ಪದಕ ಗಳಿಸಿದರೆ ಏಷ್ಯನ್ ಗೇಮ್ಸ್‌ನಲ್ಲಿ ಸ್ಪರ್ಧಿಸಲು ಅವಕಾಶ ಸಿಗಲಿದೆ. ರಾಜ್ಯ ಪ್ರತಿನಿಧಿಸಲು ನನ್ನನ್ನು ಮಾತ್ರ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ವುಶು ಸಂಸ್ಥೆಯ ಎಂ.ಎ.ಧರ್ಮ, ದರ್ಶನ್, ಜಯಂತ್ ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.10.2023 ಸೋಮವಾರ, ಮಳೆ ನಕ್ಷತ್ರ: ಸ್ವಾತಿ, 25.10.2023ರಿಂದ 06.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ,
ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ವ್ಯವಸ್ಥಾಪಕರು :** ವರ್ಣಚಿತ್ರ ಕಲಾವಿದ ಪವನ್‌ಗೌಡ ಅವರಿಂದ 'ಸ್ಟಿಲ್ ಲೈಫ್' ವಿಷಯ ಕುರಿತು ಏಕವ್ಯಕ್ತಿ ಪ್ರದರ್ಶನ, ಸ್ಥಳ: ನೆರಳು ಬೆಳಕು ಗ್ಯಾಲರಿ, ವಿಜಯನಗರ, ಬೆಳಗ್ಗೆಯಿಂದ.


■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಮಹಾರಾಜ ಕಾಲೇಜು, ಮೈಸೂರು, ಮೈಸೂರು ವಿಶ್ವವಿದ್ಯಾನಿಲಯ, ಪಠ್ಯೇತರ ಚಟುವಟಿಕೆಗಳ ಸಮಿತಿ, ಅಧ್ಯಾಪಕರ ಬಳಗ :** ಪ್ರತಿಭಾನ್ವೇಷಣಾ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿ: ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಶೈಲಜಾ ಆರ್., ಅಧ್ಯಕ್ಷತೆ: ಮಹಾರಾಜ ಕಾಲೇಜು ಪ್ರಾಂಶುಪಾಲರಾದ ಪ್ರೊ. ಶ್ರೀಧರ್ ಸಿ.ಎ., ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಸ್ಮೈಲ್ ಡೆಂಟಲ್ ಕೇರ್ :** 'ಓರಾ ಸೈಕಲ್' ಪ್ಲಾಸ್ಟಿಕ್ ಟೂತ್ ಬ್ರಷ್‌ಗಳ ಮರುಬಳಕೆ ವಿಲೇವಾರಿ ಕೇಂದ್ರದ ಉದ್ಘಾಟನೆ, ಉದ್ಘಾಟನೆ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಉಪಸ್ಥಿತಿ: ಮೇಯರ್ ಶಿವಕುಮಾರ್, ಸ್ಥಳ: ಸ್ಮೈಲ್ ಡೆಂಟಲ್ ಕೇರ್, ವಿಶ್ವಮಾನವ ಜೋಡಿ ರಸ್ತೆ, ಸರಸ್ವತಿಪುರಂ, ಬೆಳಗ್ಗೆ 11 ಗಂಟೆಗೆ.

■ **ಪುಷ್ಕರ್ ಪ್ರಕಾಶನ :** ಸುರೇಶ್ ಕರ್ತಾಳ್ ಸಾರಥ್ಯದಲ್ಲಿ 'ಲಾ ಫಾರ್ ಆಲ್' ಕನ್ನಡ ಕಾನೂನು ಮಾಸ ಪತ್ರಿಕೆ ಬಿಡುಗಡೆ ಸಮಾರಂಭ, ಸ್ಥಳ: ರೋಟರಿ ಸೆಂಟರ್, ಜೆಎಲ್‌ಬಿ ರಸ್ತೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಎದುರು, ಮಧ್ಯಾಹ್ನ 1.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಡಾ.ಪಿ.ಎಸ್.ಗೀತಾ, 6.15 ಗೀತಾರಾಧನ, 6.35 ಹಾಗೂ 6.10 'ಅಂಚೆ–ಅಂಕನ' ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ರೈತರಿಗೆ ಸಲಹೆ, 6.45 ಕಲ್ಯಾಣ ಕರೆದಿದೆ ಕಲ್ಯಾಣ ಪ್ರಾಯೋಜಿತ ಕಾರ್ಯಕ್ರಮ, 7.15 ಭಾವಗೀತೆಗಳು, 8.30 ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪುರಸ್ಕೃತರಾದ ಸಂಗೀತಗಾರ ಶ್ರೀಪಾದ ಹೆಗಡೆ ಅವರೊಡನೆ ಸಂದರ್ಶನ, 9.05 ಹಾಸನ ನಗರದ ಹಾಸನಾಂಬೆಯ ದರ್ಶನ ಕುರಿತ ಕಾರ್ಯಕ್ರಮ, 10.00 ಜಿ.ಎನ್.ಬಾಲಸುಬ್ರಹ್ಮಣ್ಯಂ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.30 ದೇವರನಾಮ: ಮಂಜುಳಾ ಗುರುರಾಜ್, ಪರಮೇಶ್ವರ್ ಹೆಗಡೆ, 12.45 ನಮ್ಮ ಆರೋಗ್ಯ: ಉಪಶಮನ ಮಹತ್ವ ಕುರಿತು ಉಪಶಮನ ಆರೈಕೆ ತಜ್ಞರಾದ ಡಾ.ವಿದ್ಯಾ ಮತ್ತು ರಾಮಚಂದ್ರ ಮುದ್ರೆ ಅವರೊಂದಿಗೆ ಮಾತುಕತೆ, 1.25 ಭಾವಗೀತೆಗಳು–ಎನ್.ಶ್ರೀಕಾಂತ್, 3.00 ಎಂ.ಎಸ್. ಸುಬ್ಬಲಕ್ಷ್ಮೀ–ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: ಮಹಿಳೆಯರ ಆಹಾರ, ಪೋಷಣೆ ಹಾಗೂ ಆರೋಗ್ಯ ಕುರಿತು, ಡಾ.ಅಸ್ನಾ ಉರೂಜ್ ಅವರೊಂದಿಗೆ ಸಂದರ್ಶನ, 4.45 ಹಿಂದಿ ಪಾಠ: ಡಾ. ಡಾ.ಮಧುಬಾಲ್ ಅಗರ್‌ವಾಲಾ, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: 'ಹಣ್ಣು ಹೊನ್ನು' ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ. **ರಾತ್ರಿ:** 9.30 ಹಳ್ಳೀ ಹಾಡು: ಪ್ರಸ್ತುತಿ–ಅಬ್ದುಲ್ ರಶೀದ್, 10.00 ನಾಟಕ.

ಮೈಸೂರು ಮಿತ್ರ ಸೋಮವಾರ 30 ಅಕ್ಟೋಬರ್ 2023

ನಟ ಪುನೀತ್ ರಾಜ್‌ಕುಮಾರ್ 2ನೇ ವರ್ಷದ ಪುಣ್ಯತಿಥಿ

ಕಂಠೀರವ ಸ್ಟುಡಿಯೋದ ಸಮಾಧಿ ಬಳಿ ಕುಟುಂಬಸ್ಥರಿಂದ ಪೂಜೆ, ಸ್ಮರಣೆ



ಬೆಂಗಳೂರು, ಅ.29– ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಎರಡನೇ ವರ್ಷದ ಪುಣ್ಯತಿಥಿಯಾದ ಭಾನುವಾರದಂದು ಅವರ ಸಮಾಧಿಯಿರುವ ಸ್ಥಳ ಬೆಂಗಳೂರಿನ ಕಂಠೀರವ ಸ್ಟುಡಿಯೋದಲ್ಲಿ ಬೆಳಗ್ಗೆ ಕುಟುಂಬಸ್ಥರೆಲ್ಲಾ ಸೇರಿ ಅವರ ಸಮಾಧಿಗೆ ಪೂಜೆ ಸಲ್ಲಿಸಿದ್ದಾರೆ.

ಪುಣ್ಯತಿಥಿಯ ಅಂಗವಾಗಿ ಪುನೀತ್ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಪುತ್ರಿ, ನಟ ಶಿವರಾಜ್‌ಕುಮಾರ್ ದಂಪತಿ, ರಾಘವೇಂದ್ರ ರಾಜ್‌ಕುಮಾರ್ ದಂಪತಿ, ಪುತ್ರರು, ಪುನೀತ್ ಅಕ್ಕಂದಿರು ಹಾಗೂ ಇತರ ಬಂಧು ಬಳಗದವರು ಬೆಳಗ್ಗೆಯೇ ಆಗಮಿಸಿ ಪೂಜೆ ಶಾಸ್ತ್ರ ನೆರವೇರಿಸಿದರು. ಅಪ್ಪು ಅವರಿಗೆ ಪ್ರಿಯವಾದ ತಿಂಡಿ–ತಿನಿಸುಗಳನ್ನು ಮಾಡಿ ತಂದು ಸಮಾಧಿ ಬಳಿ ಇಟ್ಟು ಸುತ್ತು ಹಾಕಿ ಕಂಬನಿ ಮಿಡಿದರು.


ಕಂಠೀರವ ಸ್ಟುಡಿಯೋಗೆ ರಾಜ್ ಕುಟುಂಬದವರು ಹಾಗೂ ಆಪ್ತರು ಆಗಮಿಸುವ ಹಿನ್ನೆಲೆಯಲ್ಲಿ ಸಮಾಧಿ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಇಡೀ ರಾಜ್ ಕುಟುಂಬ ತಿಥಿ ಕಾರ್ಯದಲ್ಲಿ ಭಾಗಿಯಾಗಿದ್ದರು.

ಗಣ್ಯರು, ಕಲಾವಿದರು, ರಾಜಕಾರಣಿಗಳಿಂದ ಸ್ಮರಣೆ: ಪುನೀತ್ ಅಗಲಿಗೆ ಕನ್ನಡ ಚಿತ್ರರಂಗ ಪಾಲಿಗೆ, ಕನ್ನಡ ನಾಡಿಗೆ ಸಹ ತುಂಬಲಾರದ ನಷ್ಟ ಎಂದರೆ ತಪ್ಪಾಗಲಾರದು. ಅವರ ಹಠಾತ್ ನಿಧನವನ್ನು ಇಂದಿಗೂ ಅರಗಿಸಿಕೊಳ್ಳಲಾಗುತ್ತಿಲ್ಲ. ಅವರನ್ನು ಇಂದು ನಾಡಿನ ಗಣ್ಯರು, ಕಲಾವಿದರು, ರಾಜಕಾರಣಿಗಳು ಸ್ಮರಿಸಿದ್ದಾರೆ.



ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಕುರಿತು ಅಡ್ಡಂಡ ಕಾರ್ಯಪ್ಪ ರಚಿಸಿರುವ ಕರಿನೀರ ವೀರ ನಾಟಕ ಇಂದು ಪ್ರದರ್ಶನ

● ಮೈಸೂರಿನ ಕಿರು ರಂಗಮಂದಿರ ಈಗಾಗಲೇ ಹೌಸ್‌ಫುಲ್ ● ನ.7, 8ರಂದು ಮೈಸೂರಿನ ಕಲಾಮಂದಿರದಲ್ಲಿ ಮತ್ತೆ ಪ್ರದರ್ಶನ


ಅಡ್ಡಂಡ ಕಾರ್ಯಪ್ಪ


ಮೈಸೂರು, ಅ.29–ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಕುರಿತು ಮೈಸೂರು ರಂಗಾಯಣದ ಮಾಜಿ ನಿರ್ದೇಶಕರೂ ಆದ ಹಿರಿಯ ರಂಗಕರ್ಮಿ ಅಡ್ಡಂಡ ಸಿ.ಕಾರ್ಯಪ್ಪ ರಚಿಸಿರುವ 'ಕರಿನೀರ ವೀರ' ನಾಟಕ ನಾಳೆ(ಅ.30) ಸಂಜೆ 6 ಗಂಟೆಗೆ ಮೈಸೂರಿನ ಕಿರು ರಂಗಮಂದಿರದಲ್ಲಿ ಪ್ರದರ್ಶನವಾಗುತ್ತಿದ್ದು, ಬಹು ನಿರೀಕ್ಷಿತವಾದ ಈ ನಾಟಕಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿ ಈಗಾಗಲೇ ಹೌಸ್‌ಫುಲ್ ಆಗಿದೆ.

ಅಲ್ಲದೇ ನವೆಂಬರ್ 7 ಮತ್ತು 8ರಂದು ಈ ನಾಟಕವನ್ನು ಮೈಸೂರಿನ ಕಲಾಮಂದಿರದಲ್ಲಿ ಪ್ರದರ್ಶಿಸಲಾಗುವುದು ಎಂದು ಅಡ್ಡಂಡ ಕಾರ್ಯಪ್ಪ ತಿಳಿಸಿದ್ದಾರೆ.

ಕರಿನೀರ ವೀರ ಒಂದು ನಾಟಕವಷ್ಟೆ ಎಂದಿರುವ ಅಡ್ಡಂಡ ಕಾರ್ಯಪ್ಪ, ಇದು ಒಬ್ಬ ಅಸದೃಶ ವ್ಯಕ್ತಿಯ ಜೀವನ ದರ್ಶನ ಕಥೆ ಮತ್ತು ಇತಿಹಾಸ ಎರಡೂ ಆಗಿದ್ದು,



ಈ ನಾಟಕವನ್ನು ಬರೆಯಲು ನಿರ್ಧರಿಸಿದಾಗ ಸ್ವತಃ ಸಾವರ್ಕರ್ ಅವರು ಬರೆದಿರುವ ಆತ್ಮಚರಿತ್ರೆ, ಕಥೆ, ಕಾವ್ಯ, ಕಾದಂಬರಿ ಮತ್ತು ಪುಸ್ತಕಗಳನ್ನು ಓದಿ ಸಾವರ್ಕರ್ ಅವರನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿದ್ದೇನೆ. ಸಾವರ್ಕರ್ ಬಗ್ಗೆ ವಿದ್ಯಾನಂದ ಶೆಣೈ ಅವರು ಮಾಡಿರುವ ಉತ್ಕೃಷ್ಟ ಭಾಷಣಗಳನ್ನು ಕೇಳಿದ್ದೇನೆ.



ಈ ನಾಟಕಕ್ಕೆ ಮುಖ್ಯ ಆಕರ 'ಆತ್ಮಾಹುತಿ' ಪುಸ್ತಕ ಮತ್ತು ಧನಂಜಯ್ ಕೀರ್ ಅವರು ಬರೆದಿರುವ 'ವೀರ್ ಸಾವರ್ಕರ್ ಅಂಡ್ ಈಸ್ ಟೈಮ್ಸ್' ಪುಸ್ತಕ. ಇದನ್ನು ಖ್ಯಾತ ಸಾಹಿತಿ ಜಿ.ಬಿ.ಹರೀಶ್ ಅನುವಾದ ಮಾಡಿದ್ದಾರೆ ಎಂದು ತಿಳಿಸಿರುವ ಕಾರ್ಯಪ್ಪ ನಾಟಕ ಎಂದರೆ ಸಿನಿಮಾ ಅಲ್ಲ, ಇಲ್ಲಿ ಅನೇಕ ಮಿತಿಗಳು ಕಾಡುತ್ತವೆ. ಈ ಮಿತಿಗಳ ಅಡಿಯಲ್ಲಿ ನಾಟಕ ರಚಿಸಿದ್ದೇನೆ. ಇದು ತಾಯಿ ಭಾರತೀಯಳ ಸುಪುತ್ರರಾದ ಸಾವರ್ಕರ್‌ಗೆ ನುಡಿ ನಮನಗಳನ್ನು ಕಲಾರಾಧನೆಯಿಂದ ಭಾವಜಾಗರಣದಿಂದ ಅರ್ಪಿಸುವ ರಂಗಕ್ರಿಯೆ ಆಗಿದೆ ಎಂದು ತಿಳಿಸಿದ್ದಾರೆ.


ವೀರ ಸಾವರ್ಕರ್

ಸಾವರ್ಕರ್ ಅವರು 'ಸಂಪೂರ್ಣ ಸ್ವಾತಂತ್ರ್ಯವೇ ಭಾರತದ ಧ್ಯೇಯ' ಎಂದು ಘೋಷಿಸಿದ್ದ ಪ್ರಥಮ ರಾಜಕೀಯ ಮುಂದಾಳು ಎಂದು ತಿಳಿಸಿರುವ ಕಾರ್ಯಪ್ಪ, ಅವರು ರಚಿಸಿದ ಸ್ವಾತಂತ್ರ್ಯ ಸಂಗ್ರಾಮ ಗ್ರಂಥವನ್ನು ಪ್ರಕಟಣೆಗೆ ಮುನ್ನವೇ ಎರಡು ರಾಷ್ಟ್ರಗಳಲ್ಲಿ ನಿಷೇಧಿಸಲ್ಪಟ್ಟಿತ್ತು. ವಿಶ್ವದ ರಾಜಕೀಯ ಚರಿತ್ರೆಯಲ್ಲಿ 50 ವರ್ಷ ಕಾಲ ಕರಿನೀರಿನ ಶಿಕ್ಷೆಗೆ ಗುರಿಯಾದ ಏಕೈಕ ರಾಜಕೀಯ ಸೆರೆಯಾಳು ಸಾವರ್ಕರ್.

ಯಾವುದೇ ಸೌಲಭ್ಯವನ್ನು ನೀಡದಿದ್ದರೂ ಸೆರೆ ಮನೆಯ ಗೋಡೆಗಳ ಮೇಲೆ ಮೊಳೆಯಿಂದಲೇ 10 ಸಹಸ್ರ ಸಾಲುಗಳ ಕಾವ್ಯ ರಚಿಸಿದ ಮಹಾಕವಿ ಅವರು ಎಂದು ತಿಳಿಸಿದ್ದಾರೆ.

ರಾಷ್ಟ್ರದ ಹಿತ, ರಾಷ್ಟ್ರೀಯತೆ, ಐಕ್ಯತೆ, ರಾಷ್ಟ್ರದ ಗೌರವವನ್ನು ಬಯಸಿದ ಏಕೈಕ ವ್ಯಕ್ತಿಯಾಗಿದ್ದ ಸಾವರ್ಕರ್, ಯಾವುದೇ ಪ್ರಶಸ್ತಿ, ಗೌರವ, ಸನ್ಮಾನಗಳನ್ನು ಬಯಸದ ಶ್ರೇಷ್ಠ ನಾಯಕರು. 1910ರಿಂದ 1937 ರವರೆಗೆ ಸಾವರ್ಕರ್ ಬಂಧನ, ಸೆರೆವಾಸ ನಂತರವೂ ಪದೇ ಪದೆ ಅವರಿಗೆ ಹಿಂಸೆ ನೀಡಲಾಯಿತು. ಸಾವರ್ಕರ್ ಅವರ ಜೀವನ ಚರಿತ್ರೆಯ ಪುಸ್ತಕಗಳನ್ನು ಓದುವಾಗ ಭಾವುಕವಾಗಿ ಅತ್ತು ನಿರಾಳನಾಗಿದ್ದೇನೆ. ಈ ಮಹಾನ್ ಚೇತನವನ್ನು ಎಲ್ಲರ ಮನಸ್ಸಿಗೆ ರಂಗರೂಪದಲ್ಲಿ ಮುಟ್ಟಿಸ ಬೇಕೆಂಬ ತುಡಿತವೇ ತಾವು ಈ ನಾಟಕ ಬರೆಯಲು ಕಾರಣ ಎಂದು ಅಡ್ಡಂಡ ಕಾರ್ಯಪ್ಪ ತಿಳಿಸಿದ್ದಾರೆ.



ಶ್ರೀನಗರದಲ್ಲಿ ಕ್ರಿಕೆಟ್ ಆಡುತ್ತಿದ್ದ ಪೊಲೀಸ್ ಅಧಿಕಾರಿ ಮೇಲೆ ಉಗ್ರರಿಂದ ಗುಂಡಿನ ದಾಳಿ

ಶ್ರೀನಗರ, ಅ.29– ಶ್ರೀನಗರದ ಡೌನ್‌ಟೌನ್‌ನಲ್ಲಿ ಭಾನುವಾರ ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಅಧಿಕಾರಿಯೊಬ್ಬರ ಮೇಲೆ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದು, ದಾಳಿಯಲ್ಲಿ ಅಧಿಕಾರಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಇನ್ಸ್‌ಪೆಕ್ಟರ್ ಮಸ್ರೂರ್ ಅಹ್ಮದ್ ವಾನಿ ಅವರು ಇಂದು ಈದ್ಗಾ ಮೈದಾನದಲ್ಲಿ ಸ್ಥಳೀಯ ಹುಡುಗರೊಂದಿಗೆ ಕ್ರಿಕೆಟ್ ಆಡುತ್ತಿದ್ದಾಗ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಾಯಗೊಂಡ ಅಧಿಕಾರಿಯನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಸ್ಥಿತಿ ಚಿಂತಾಜನಕವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಶ್ರೀನಗರದ ಈದ್ಗಾ ಬಳಿ ಇನ್‌ಸ್ಪೆಕ್ಟರ್ ಮಸ್ರೂರ್ ಅಹ್ಮದ್ ಮೇಲೆ ಭಯೋತ್ಪಾದಕರು ಗುಂಡು ಹಾರಿಸಿದ್ದಾರೆ. ದಾಳಿಯಲ್ಲಿ ಅಧಿಕಾರಿ ಗಾಯಗೊಂಡಿದ್ದಾರೆ. ತಕ್ಷಣ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಗ್ರರು ಪಿಸ್ತೂಲ್‌ನಿಂದ ಗುಂಡು ಹಾರಿಸಿದ್ದಾರೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಈ ಪ್ರದೇಶವನ್ನು ಸುತ್ತುವರಿಯಲಾಗಿದೆ ಎಂದು ಇದಕ್ಕು ಮುನ್ನ ಕಾಶ್ಮೀರ ವಲಯ ಪೊಲೀಸರು ಟ್ವೀಟ್ ಮಾಡಿದ್ದರು.

ಹಿರಿಯ ನಟಿ ಶರ್ಮಿಳಾ ಟ್ಯಾಗೋರ್‌ಗೆ ಇಮ್ತಿಯಾಜ್–ಎ–ಜಾಮಿಯಾ ಪ್ರಶಸ್ತಿ



ನವದೆಹಲಿ, ಅ.29– ಬಾಲಿವುಡ್ ಹಿರಿಯ ನಟಿ ಶರ್ಮಿಳಾ ಟ್ಯಾಗೋರ್ ಅವರಿಗೆ ಭಾನುವಾರ ಜಾಮಿಯಾ ಮಿಲಿಯಾ ಇಸ್ಲಾಮಿಯಾದ ಅತ್ಯುನ್ನತ ಗೌರವ ಪ್ರಶಸ್ತಿ ಯಾದ ಇಮ್ತಿಯಾಜ್–ಎ–ಜಾಮಿಯಾ ಪ್ರದಾನ ಮಾಡಲಾಯಿತು.

ವಿಶ್ವವಿದ್ಯಾಲಯದ 103ನೇ ಸಂಸ್ಥಾಪನಾ ದಿನದಂದು ಜಾಮಿಯಾ ಕುಲಪತಿ ನಜ್ಮಾ ಅಖ್ತರ್ ಅವರು ಶರ್ಮಿಳಾ ಟ್ಯಾಗೋರ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು.

ಹಿಂದಿ ಚಿತ್ರರಂಗಕ್ಕೆ ನೀಡಿದ ಕೊಡುಗೆಗಾಗಿ ಶರ್ಮಿಳಾ ಅವರಿಗೆ ಈ ಪ್ರಶಸ್ತಿ ನೀಡಲಾಗಿದೆ. ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ನಟಿ ಶರ್ಮಿಳಾ ಅವರು, ನಾನು ವಿಶ್ವವಿದ್ಯಾಲಯಕ್ಕೆ ಪ್ರವೇಶಿಸಿದ ಕ್ಷಣದಿಂದ ಇದೊಂದು ಭಾವನಾತ್ಮಕ ಕ್ಷಣ ಆಗಿತ್ತು ... ಜನರು ನನಗೆ ತೋರಿದ ಪ್ರೀತಿಯಿಂದ ನನ್ನ ಹೃದಯ ತುಂಬಿ ಬಂದಿದೆ ಎಂದು ಹೇಳಿದರು.

ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದ ಮೊದಲ ಮಹಿಳಾ ಕುಲಪತಿಯಿಂದ ನಾನು ಗೌರವಿಸಲ್ಪಟ್ಟಿದ್ದಕ್ಕೆ ಕೃತಜ್ಞಳಾಗಿದ್ದೇನೆ ಎಂದು ಹಿರಿಯ ನಟಿ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಬಿಎಂಟಿಸಿ ಬಸ್ಸಿಗೆ ಇಬ್ಬರು ಬಲಿ

ಬೆಂಗಳೂರು, ಅ.29– ಬಿಎಂಟಿಸಿ ಬಸ್ಸು ಹರಿದು ಬೆಂಗಳೂರಿನಲ್ಲಿ ಭಾನುವಾರ ಇಬ್ಬರು ಬಲಿಯಾಗಿದ್ದಾರೆ. ವೀಣಾ ಎಂಬುವವರು ಬಿಎಂಟಿಸಿ ಬಸ್‌ಗೆ ಸಿಲುಕಿ ಮೃತಪಟ್ಟಿದ್ದಾರೆ. ಹುಳಿಮಾವು ಸಂಚಾರಿ ಠಾಣಾ ವ್ಯಾಪ್ತಿಯ ಅರಕೆರೆಯ ಶ್ರೀ ಸಾಯಿ ಗಾರ್ಮೆಂಟ್ಸ್ ಬಳಿ ರಸ್ತೆ ದಾಟುವಾಗ ಮಹಿಳೆಗೆ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದಿದೆ. ಈ ಪರಿಣಾಮ ವೀಣಾ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾರೆ. ಇದಕ್ಕೂ ಮುನ್ನ ಬೆಂಗಳೂರಿನ ವಿಜಯನಗರದಲ್ಲಿ ಬೈಕ್ ಸವಾರ ಕುಮಾರ್ ಎಂಬುವವರಿಗೆ ಬಿಎಂಟಿಸಿ ಬಸ್ಸು ಡಿಕ್ಕಿ ಹೊಡೆದು ಬಸ್‌ನ ಚಕ್ರಕ್ಕೆ ಸಿಲುಕಿ ಮೃತಪಟ್ಟಿದ್ದಾರೆ. ವಿಜಯನಗರದ ಗೋವಿಂದರಾಜನಗರ ಬೈಟು ಕಾಫಿ ಮುಂಭಾಗ ಹೋಗುತ್ತಿದ್ದ ವೇಳೆ ಬಿಎಂಟಿಸಿ ಬಸ್‌ನ ಚಕ್ರ ಬೈಕ್ ಸವಾರ ಕುಮಾರ್ ಮೇಲೆ ಹರಿದು ಸ್ಥಳದಲ್ಲಿಯೇ ಮೃತಪಟ್ಟರು. ಸ್ಥಳಕ್ಕೆ ವಿಜಯನಗರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿದ್ದಾರೆ.

ಬೆಂಗಳೂರು ಹಜ್ ಭವನದ ಸಭಾಂಗಣದಲ್ಲಿ ಬೆಂಕಿ ಅವಘಡ


ಬೆಂಗಳೂರು, ಅ.29– ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ರಾಜ್ಯ ಹಜ್ ಭವನದಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಹೆಗಡೆ ನಗರ ಸಮೀಪದ ತಿರುಮೇನಹಳ್ಳಿಯಲ್ಲಿ ಈ ಘಟನೆ ನಡೆದಿದ್ದು, ಆಡಿಟೋರಿಯಂನಲ್ಲಿ ಶಾರ್ಟ್ ಸರ್ಕ್ಯೂಟ್ ಆಗಿ ಬೆಂಕಿ ತಗುಲಿದೆ. ದಟ್ಟ ಹೊಗೆಯನ್ನು ಗಮನಿಸಿದ ಅಲ್ಲಿನ ಸಿಬ್ಬಂದಿಗಳು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದಾರೆ. ಇತ್ತೀಚಿನ ವರದಿಯವರೆಗೂ ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಅಗ್ನಿ ಅವಘಡದಿಂದಾಗಿ ಎಷ್ಟು ಪ್ರಮಾಣದಲ್ಲಿ ಹಾನಿಯಾಗಿದೆ ಎಂಬುದು ಇನ್ನಷ್ಟೇ ತಿಳಿಯಬೇಕಿದೆ. ಪೌರಾಡಳಿತ ಹಾಗೂ ಹಜ್ ಸಚಿವ ರಹೀಂ ಖಾನ್ ಮೇಲ್ನೋಟಕ್ಕೆ ಇದು ಶಾರ್ಟ್ ಸರ್ಕ್ಯೂಟ್‌ನಿಂದ ಉಂಟಾಗಿದೆ ಎಂದು ತಿಳಿದುಬಂದಿದೆ. ಹಜ್ ಸಮಿತಿಯ ಸಿಬ್ಬಂದಿಯ ತ್ವರಿತ ಕ್ರಮದಿಂದಾಗಿ ಸಂಭಾವ್ಯ ಅನಾಹುತ ತಪ್ಪಿದೆ ಎಂದು ಅವರು ತಿಳಿಸಿದ್ದಾರೆ.



ಮೈಸೂರು ವಕೀಲರ ಸಂಘದ ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್, ಸಿಂಡಿಕೇಟ್ ಸದಸ್ಯ ಗೋಕುಲ್ ಗೋವರ್ಧನ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ವಕೀಲರ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಸನತ್ ಕುಮಾರ್, ಲೋಕೇಶ್, ಹೇಮಂತ್ ಸೇರಿದಂತೆ ಇತರರಿದ್ದರು.

ಗ್ರಾಹಕರ ಕಣ್ಣಲ್ಲಿ ನೀರು ತರಿಸುತ್ತಿರುವ ಈರುಳ್ಳಿ ದರ

45 ರೂ.ಗಳಿದ್ದ ಈರುಳ್ಳಿ 85ರಿಂದ 90ರೂ.ಗಳಿಗೆ ಮಾರಾಟ



ಮೈಸೂರು, ಅ.29(ಎಸ್‌ಪಿಎನ್)– ಈರುಳ್ಳಿ ದರ ದಿನದಿಂದ ದಿನಕ್ಕೆ ಗಗನಕ್ಕೇರುತ್ತಿದ್ದು, ಈರುಳ್ಳಿ ಕಣ್ಣಲ್ಲಿ ನೀರು ತರಿಸುತ್ತಿದೆ. ಈರುಳ್ಳಿ ಕತ್ತರಿಸಿದರೆ ಮಾತ್ರ ಕಣ್ಣಲ್ಲಿ ನೀರು ಬರುವುದಿಲ್ಲ. ಈಗ ಅದರ ಬೆಲೆ ಕೇಳಿದರೂ ನೀರು ಬರುವಂತಾಗಿದೆ.

ಜಿಲ್ಲೆಯಲ್ಲಿ ವಾರದ ಹಿಂದೆ 40ರಿಂದ 45 ರೂ.ಗಳಿದ್ದ ಈರುಳ್ಳಿ ದರ ಇದೀಗ 80ರಿಂದ 85 ರೂ.ಗಳವರೆಗೆ ದರ ಏರಿಕೆಯಾಗಿದ್ದು, ಸಾರ್ವಜನಿಕರು ಈರುಳ್ಳಿ ಖರೀದಿಸಲು ಕೊಂಚ ಯೋಚಿಸುವ ಪರಿಸ್ಥಿತಿ ಇದೆ. ನಾಲ್ಕೈದು ಈರುಳ್ಳಿ ಹಾಕಿ ಅಡುಗೆ ಮತ್ತು ತಿಂಡಿ ಸಿದ್ಧಪಡಿಸುತ್ತಿದ್ದ ಗೃಹಿಣಿಯರು ಈಗ ಒಂದು ಈರುಳ್ಳಿಯನ್ನೇ ಎರಡ್ಮೂರು ಟೈಮ್ ಬಳಸುತ್ತಿರುವ ಬಗ್ಗೆ ಮಾಹಿತಿಗಳು ಲಭ್ಯವಾಗಿವೆ.

ಪ್ರತಿಯೊಂದು ತಿನಿಸುಗಳ ಒಗ್ಗರಣೆಗೆ ಈರುಳ್ಳಿ ಉಪಯೋಗಿಸದೇ ರುಚಿಯಾದ ಅಡುಗೆ ಮಾಡಲು ಸಾಧ್ಯವಿಲ್ಲ. ಇದೀಗ ಈರುಳ್ಳಿ ಬೆಲೆಯೇರಿಕೆಯಿಂದ ಒಗ್ಗರಣೆ ಹಾಕದೆ ಈರುಳ್ಳಿ ಬಳಸದೆ ಅಡುಗೆ ಮಾಡಲಾಗುತ್ತಿದೆ.

ಮುಂಗಾರು ಮಳೆ ಕೈಕೊಟ್ಟ ಹಿನ್ನೆಲೆಯಲ್ಲಿ ಮೈಸೂರು ಎಪಿಎಂಸಿಗೆ ಹುಬ್ಬಳ್ಳಿ, ಮಹಾರಾಷ್ಟ್ರದಿಂದ ಈರುಳ್ಳಿ ಲೋಡ್ ಕಡಿಮೆ ಬರುತ್ತಿದೆ. ಇದರಿಂದ ಈರುಳ್ಳಿ ದರ ಏರಿಕೆಯಾಗುತ್ತಿದೆ ಎಂದು ವರ್ತಕರೊಬ್ಬರು ತಿಳಿಸಿದ್ದಾರೆ.

ರಫ್ತು ನಿಷೇಧವಿದ್ದರೂ ಕಡಿಮೆಯಾಗದ ದರ: ಹೆಚ್ಚು ಈರುಳ್ಳಿ ಬೆಳೆಯುವ ಮಹಾರಾಷ್ಟ್ರ ಮಾರುಕಟ್ಟೆಗಳಲ್ಲಿ ಈರುಳ್ಳಿ ಬೆಲೆ ನಿರಂತರ ವಾಗಿ ಏರಿಕೆಯಾಗುತ್ತಿದೆ. ಹೈದರಾಬಾದ್ ಕರ್ನಾಟಕ, ಬೆಂಗಳೂರು ಹಾಗೂ ಮೈಸೂರು ಎಪಿಎಂಸಿಗೂ ನಾಸಿಕ್‌ನಿಂದಲೇ ಈರುಳ್ಳಿ ಪೂರೈಕೆಯಾಗುತ್ತಿದೆ. ಇದನ್ನು ಅರಿತ ಕೇಂದ್ರ ಸರ್ಕಾರ ಈರುಳ್ಳಿ ರಫ್ತು ನಿಷೇಧ ಹೇರಿದೆ. ಆದರೂ ಈರುಳ್ಳಿ ದರದಲ್ಲಿ ಅಂತಹ ಬದಲಾವಣೆಗಳೇನೂ ಕಾಣುತ್ತಿಲ್ಲ.

ಈರುಳ್ಳಿ ದರ ಕಡಿಮೆ ಆಗಬೇಕಾದರೆ, ಹೊಸ ಬೆಳೆ ಮಾರುಕಟ್ಟೆಗೆ ಬರಬೇಕು. ಆದರೆ ಈರುಳ್ಳಿ ಬೆಳೆಯುವ ಪ್ರದೇಶಗಳಾದ ಹುಬ್ಬಳ್ಳಿ–ಧಾರವಾಡ, ಚಿಕ್ಕ ಮಗಳೂರು, ಕಡೂರು, ಚಿತ್ರದುರ್ಗ ಸೇರಿದಂತೆ ಇತರೆ ಜಿಲ್ಲೆಗಳಲ್ಲಿ ಮುಂಗಾರು ಕೈಕೊಟ್ಟ ಹಿನ್ನೆಲೆಯಲ್ಲಿ ಈ ಭಾಗದಿಂದ ಈರುಳ್ಳಿ ಮಾರುಕಟ್ಟೆಗೆ ನಿರೀಕ್ಷಿತ ಪ್ರಮಾಣದಲ್ಲಿ ಸರಬರಾಜಾಗುವುದು ಅನುಮಾನವಾಗಿದೆ.

ಕೆಲ ದಿನಗಳಿಂದ ಬೆಂಗಳೂರು, ಮೈಸೂರು ಸೇರಿದಂತೆ ಹಲವು ಎಪಿಎಂಸಿಯಲ್ಲಿ ಉತ್ತಮ ಗುಣಮಟ್ಟದ ಈರುಳ್ಳಿ ಕ್ವಿಂಟಾಲ್‌ಗೆ 5,900 ರೂ.ನಿಂದ 6 ಸಾವಿರ ರೂ.ವರೆಗೂ ಮಾರಾಟವಾಗಿದೆ. ಎಪಿಎಂಸಿ ಹೊರಗಿನ ಚಿಲ್ಲರೆ ಮಾರುಕಟ್ಟೆಯಲ್ಲಿ ದಪ್ಪ ಗಾತ್ರದ ಈರುಳ್ಳಿಯನ್ನು ಪ್ರತಿ ಕೆಜಿಗೆ 85 ರಿಂದ 90 ರೂ.ವರೆಗೂ ಗ್ರಾಹಕರು ಖರೀದಿಸುತ್ತಿದ್ದಾರೆ.

ವರ್ಲ್ಡ್ ಕಿಕ್ ಬಾಕ್ಸಿಂಗ್‌ನಲ್ಲಿ ಮೈಸೂರು ಕುವರನಿಗೆ ಪದಕ



ಮೈಸೂರು, ಅ.29(ಎಂಕೆ)– ಕಿಕ್ ಬಾಕ್ಸಿಂಗ್‌ನಲ್ಲಿ ಹೊಸಛಾಪು ಮೂಡಿಸಿರುವ ಮೈಸೂರಿನ ಬಾಲ ಪ್ರತಿಭೆ ಜರ್ಮನಿಯಲ್ಲಿ ಭಾರತದ ಬಾವುಟ ಹಾರಿಸಿದ್ದಾರೆ...!

ಮೈಸೂರಿನ ನಿವಾಸಿಗಳಾದ ಪ್ರದೀಪ್ ಹಾಗೂ ಶ್ರೀಮತಿ ಮನೀತಾ ಅವರ ಪುತ್ರ ಹಾಗೂ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ 4ನೇ ತರಗತಿ ಓದುತ್ತಿರುವ ಜೂನಿಯರ್ ಕಿಕ್ ಬಾಕ್ಸರ್ ಪರೀಕ್ಷಿತ್ ಪ್ರದೀಪ್, ಇತ್ತೀಚೆಗೆ ಜರ್ಮನಿಯಲ್ಲಿ ನಡೆದ ವರ್ಲ್ಡ್ ಕಿಕ್ ಬಾಕ್ಸಿಂಗ್ ಪಂದ್ಯಾವಳಿಯಲ್ಲಿ ಪದಕ ಗೆದ್ದು ದೇಶಕ್ಕೆ ಕೀರ್ತಿ ತಂದಿದ್ದಾನೆ.

ಜರ್ಮನಿಯ ಮುನೀಚ್‌ನಲ್ಲಿ ಅ.18ರಿಂದ 22ರವರೆಗೆ ನಡೆದ ಅಂತರಾಷ್ಟ್ರೀಯ ಮಟ್ಟದ ISKA ವರ್ಲ್ಡ್ ಮಾರ್ಷಲ್ ಆರ್ಟ್ ಚಾಂಪಿಯನ್‌ಶಿಪ್‌ನಲ್ಲಿ ಜೂನಿಯರ್ ಬಾಯ್ಸ್ 45 ಕೆ.ಜಿ ಲೈಟ್ ಕಾಂಟ್ಯಾಕ್ಟ್ ವಿಭಾಗದಲ್ಲಿ ಬೆಳ್ಳಿ ಪದಕ ಹಾಗೂ ಕೆ1 ಲೈಟ್ ವಿಭಾಗದಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಹೊಸಛಾಪು ಮೂಡಿಸಿದ್ದಾನೆ.


ಕೇರಳದ ಕಲ್ಲಿಕೋಟೆಯಲ್ಲಿ ಮೇ 27 ಮತ್ತು 28ರಂದು ನಡೆದ ರಾಷ್ಟ್ರೀಯ ಮಟ್ಟದ ಫುಲ್ ಕಾಂಟ್ಯಾಕ್ಟ್ ಮಾರ್ಷಲ್ ಆರ್ಟ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಅಂತಾರಾಷ್ಟ್ರೀಯ ಮಟ್ಟದ ಪಂದ್ಯಾವಳಿಗೆ ಆಯ್ಕೆಯಾಗಿದ್ದ ಪರೀಕ್ಷಿತ್ ಪ್ರದೀಪ್, ಅಂತಾರಾಷ್ಟ್ರೀಯ ಮಟ್ಟದಲ್ಲೂ ಪದಕ ಜಯಿಸಿ ಕೀರ್ತಿ ತಂದಿದ್ದಾನೆ.

ಪಂಚಿಂಗ್‌ನಲ್ಲಿ ರೆಕಾರ್ಡ್: ಓಶೋಕಾಯ್ ಮಾರ್ಷಲ್ ಆರ್ಟ್ಸ್ ಕಾಲೇಜ್‌ನ ಮಹೇಶ್, ಅಶ್ವಿನಿ ಹಾಗೂ ಮುಖ್ಯಶಿಕ್ಷಕ ಡಾ.ಎಸ್.ಕೃಷ್ಣಮೂರ್ತಿ ಅವರ ಮಾರ್ಗದರ್ಶನ ಪಡೆಯುತ್ತಿರುವ ಪರೀಕ್ಷಿತ್ ಪ್ರದೀಪ್, ಪಂಚಿಂಗ್‌ನಲ್ಲಿ ವಿಶ್ವ ದಾಖಲೆ ಮಾಡಿದ್ದಾನೆ. ಪಂಚಿಂಗ್ ಬ್ಯಾಗ್‌ಗೆ 1 ನಿಮಿಷದಲ್ಲಿ 193 ಬಾರಿ ಲೋ ಕಿಕ್ ಮಾಡುವ ಮಾಡುವ ಮೂಲಕ ವರ್ಲ್ಡ್ ರೆಕಾರ್ಡ್ ಮಾಡಿದ್ದಾನೆ. ಕಿಕ್ ಬಾಕ್ಸಿಂಗ್‌ನಲ್ಲಿ ಹೊಸ ಭರವಸೆ ಮೂಡಿಸಿರುವ ಜೂನಿಯರ್ ಕಿಕ್ ಬಾಕ್ಸರ್ ಇನ್ನಷ್ಟು ಪದಕಗಳನ್ನು ಗೆಲ್ಲಲಿ ಎಂದು ಹಲವರು ಆಶಿಸಿದ್ದಾರೆ.

ಶಿರಾ ಬಳಿ ಚಾಲಕನ ನಿಯಂತ್ರಣ ತಪ್ಪಿ ಕೆರೆಗೆ ಬಿದ್ದ ಕಾರು; ಒಂದೇ ಕುಟುಂಬದ ಮೂವರ ದುರ್ಮರಣ

ತುಮಕೂರು, ಅ.29– ಭಾನುವಾರ ಬೆಳಗ್ಗೆ ಕಾರೊಂದು ಕೆರೆಗೆ ಬಿದ್ದ ಪರಿಣಾಮ ಇಬ್ಬರು ಮಹಿಳೆಯರು ಸೇರಿದಂತೆ ಒಂದೇ ಕುಟುಂಬದ ಮೂವರು ಸಾವಿಗೀಡಾಗಿರುವ ಘಟನೆ ಜಿಲ್ಲೆಯ ಶಿರಾ ತಾಲೂಕಿನಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾರಿನಲ್ಲಿದ್ದ ಓರ್ವ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕುಟುಂಬ ಸಮೇತರಾಗಿ ಮುಂಜಾನೆ ಧರ್ಮಸ್ಥಳಕ್ಕೆಂದು ತೆರಳುತ್ತಿದ್ದ ವೇಳೆ ಶಿರಾ ತಾಲೂಕಿನ ಬುಕ್ಕಾಪಟ್ಟಣದ ಬಳಿಯಿರುವ ರಾಮಲಿಂಗಪುರ ಕೆರೆಯಲ್ಲಿ ಅವಘಡ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರನ್ನು ದೊಡ್ಡಣ್ಣ, ಸಣ್ಣಮ್ಮ, ಯಮುನಾ ಎಂದು ಗುರುತಿಸಲಾಗಿದೆ. ಪ್ರವೀಣ್ ಎಂಬುವವರು ಪಾಣಾಪಾಯದಿಂದ ಪಾರಾಗಿದ್ದಾರೆ. ಮೃತರೆಲ್ಲರೂ ತುಮಕೂರು ಜಿಲ್ಲೆಯ



ಶಿರಾ ತಾಲ್ಲೂಕಿನ ಪಟ್ಟನಾಯಕನಹಳ್ಳಿ ಸಮೀಪದ ವೀರಾಪುರ ಗ್ರಾಮದವರಾಗಿದ್ದಾರೆ. ಚಾಲಕನ ನಿಯಂತ್ರಣ ತಪ್ಪಿ ಕಾರು ಕೆರೆಗೆ ಬಿದ್ದಿದೆ. ಈ ಸಂಬಂಧ ಶಿರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಅವರು ತಿಳಿಸಿದ್ದಾರೆ.



ಕೊಡಗು ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಹಾಸಭಾದ ರಾಜ್ಯ ಕೋಶಾಧ್ಯಕ್ಷ ವರುಣಾ ಮಹೇಶ್ ಅವರನ್ನು ಸನ್ಮಾನಿಸಲಾಯಿತು. ಕೊಡ್ಲಿ ಮಠದ ಕಿರಿಯ ಸದಾಶಿವ ಸ್ವಾಮೀಜಿ, ಜಿಲ್ಲಾಧ್ಯಕ್ಷ ಶಿವಪ್ಪ, ಕಾರ್ಯದರ್ಶಿ ರಾಜೇಶ್ವರಿ ನಾಗರಾಜ್, ಜಿಲ್ಲಾ ಪದಾಧಿಕಾರಿಗಳಾದ ಶಾಂಭವಮೂರ್ತಿ, ಉದಯ್, ಮಾದೇವಪ್ಪ ದಯಾನಂದ್, ಯುವ ಘಟಕದ ಅಧ್ಯಕ್ಷರಾದ ಮೋಕ್ಷಿತ್ ಮತ್ತು ಎಲ್ಲಾ ಶರಣು, ಶರಣೆಯರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ತುಂಬಿ ತುಳುಕಿದ ದಸರಾ ವಸ್ತು ಪ್ರದರ್ಶನ ಆವರಣ

● ವೈವಿಧ್ಯತೆಗೆ ಮಾರುಹೋದ ಜನ ● 40 ಸಾವಿರಕ್ಕೂ ಅಧಿಕ ಮಂದಿ ಭೇಟಿ

ಮೈಸೂರು,ಅ.29(ಪಿಎಂ)– ಮೈಸೂರು ದಸರಾ ಮಹೋತ್ಸವ ಮತ್ತು ನಂತರದಲ್ಲಿಯೂ ಪ್ರಮುಖ ಆಕರ್ಷಣೆಯಾದ ದಸರಾ ವಸ್ತು ಪ್ರದರ್ಶನವು ಭಾನುವಾರ ಜನದಟ್ಟಣೆಯಲ್ಲಿ ತುಂಬಿ ತುಳುಕಿತು. 40 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿ, ಇಲ್ಲಿನ ವೈವಿಧ್ಯತೆಗೆ ಮನಸೋತರು.

ಮೈಸೂರಿನ ದೊಡ್ಡಕೆರೆ ಮೈದಾನದ ಬಳಿಯ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಉಡುಪು, ಆಭರಣ ಸೇರಿದಂತೆ ವಿವಿಧ ಸಾಮಗ್ರಿಗಳ ನೂರಾರು ವಾಣಿಜ್ಯ ಮಳಿಗೆಗಳು, ಭರಪೂರ ಮನರಂಜನೆ ನೀಡುವ ಬಗೆಬಗೆಯ ಅಮ್ಯೂಸ್‌ಮೆಂಟ್ ಆವರಣ, ತರಾವರಿ ಫುಡ್ ಮಳಿಗೆಗಳು ಹಾಗೂ ಮಹತ್ವದ ಸಂಗತಿಗಳನ್ನು ತಿಳಿಸುವ ಮಾಹಿತಿ ಕಣಜದಂತಿರುವ ಸರ್ಕಾರದ ಮಳಿಗೆಗಳು ಸೇರಿದಂತೆ ಎಲ್ಲಿ ನೋಡಿದರಲ್ಲಿ ಜನದಟ್ಟಣೆ ಇಂದು ಕಂಡು ಬಂದಿತು.



ದಸರಾ ಉತ್ಸವದ ವೇಳೆ ವಿವಿಧ ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕಲಾಸಕ್ತರು ಮನಸೂರೆಗೊಂಡಿದ್ದರು. ಜಂಬೂಸವಾರಿ ಬಳಿಕ ಇದೀಗ ವಸ್ತು ಪ್ರದರ್ಶನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ವೈಭವ ಅನಾವರಣಗೊಂಡಿದೆ. ವಸ್ತು ಪ್ರದರ್ಶನಕ್ಕೆ ಭೇಟಿ ನೀಡುವ ಜನತೆಗೆ ಶಾಪಿಂಗ್, ಆಹಾರ–ವಿಹಾರದೊಂದಿಗೆ ಮನರಂಜನೆಯೂ ದೊರೆಯುವಂತಾಗಿದೆ.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ವಸ್ತು ಪ್ರದರ್ಶನಕ್ಕೆ ಭೇಟಿ ನೀಡುವವರಿಗೆ ಮನರಂಜನೆಯ ಮಹಾಪೂರವನ್ನೇ ನೀಡಲು ಮುಂದಾಗಿದೆ. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪ್ರಾಧಿಕಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಜಿ.ಗೌಡ, ಮುಂದಿನ ಜ.12ರಂದು ದಸರಾ ವಸ್ತು ಪ್ರದರ್ಶನ ಮುಕ್ತಾಯಗೊಳ್ಳಲಿದೆ. ಅಲ್ಲಿಯವರೆಗೂ ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲು ನಿರ್ಧಾರ ಮಾಡಲಾಗಿದೆ ಎಂದು ತಿಳಿಸಿದರು.

ಮುಂದಿನ ಮೂರು ದಿನಗಳಿಗೆ ಆಯಾಯ ದಿನದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಕಲಾವಿದರ ಪಟ್ಟಿ ಸಿದ್ಧಪಡಿಸಿಕೊಳ್ಳಲಾಗಿದೆ. ಪ್ರತಿದಿನ ಕಾರ್ಯಕ್ರಮ ನೀಡುವ ಕಲಾವಿದರ ಪಟ್ಟಿಯನ್ನು ಶೀಘ್ರದಲ್ಲಿ ಸಿದ್ಧಪಡಿಸಲಿದ್ದೇವೆ. ಈಗಾಗಲೇ ಸಾಕಷ್ಟು ಕಲಾವಿದರಿಂದ ಅರ್ಜಿ ಬಂದಿವೆ ಎಂದು ತಿಳಿಸಿದರು.

ಪ್ರತಿದಿನ ಮಧ್ಯಾಹ್ನ 3ರಿಂದ ಸಾರ್ವಜನಿಕರು ಭೇಟಿ ನೀಡಬಹುದು. ಪ್ರತಿದಿನ ರಾತ್ರಿ 9.30ಕ್ಕೆ ಟಿಕೆಟ್ ನೀಡುವುದನ್ನು ಕೊನೆಗೊಳಿಸಲಾಗುವುದು. ಶನಿವಾರ ಮತ್ತು ಭಾನುವಾರ ಹಾಗೂ ರಜೆ ದಿನಗಳಲ್ಲಿ ರಾತ್ರಿ 10ರವರೆಗೆ ಟಿಕೆಟ್ ಕೊಡಲಾಗುತ್ತದೆ. ಪ್ರತಿದಿನ ರಾತ್ರಿ 11ಕ್ಕೆ ಸಾರ್ವಜನಿಕರು ವಸ್ತು ಪ್ರದರ್ಶನದಿಂದ ನಿರ್ಗಮಿಸಬೇಕಾಗುತ್ತದೆ. ದಸರಾ ಮಹೋತ್ಸವದ ದಿನಗಳಲ್ಲಿ ರಾತ್ರಿ 10ರವರೆಗೆ ಟಿಕೆಟ್ ವಿತರಣೆ ಮಾಡಲಾಗಿದೆ ಎಂದರು.

ವಾರಕಾಲ ಅವಕಾಶ: ಕೆಲವೊಂದು ಇಲಾಖೆ, ಸರ್ಕಾರಿ ಸಂಸ್ಥೆಗಳ ಮಳಿಗೆಗಳು ಇನ್ನೂ ಸಿದ್ಧಗೊಂಡಿಲ್ಲ. ಟೆಂಡರ್ ಪ್ರಕ್ರಿಯೆ, ಅನುದಾನ ಬಿಡುಗಡೆ ತಡವಾಗಿದೆ ಎಂಬುದೂ ಸೇರಿದಂತೆ ಮೊದಲಾದ ಕಾರಣಗಳನ್ನು ನೀಡಿದ್ದಾರೆ. ತಡವಾಗಿ ಮಾಡುವುದಾದರೆ ಅವಕಾಶ ನೀಡುವುದೇ ಬೇಡವೆಂದು ನಿರ್ಧಾರ ಮಾಡಿದ್ದೆವು. ಆದರೆ ಒಂದು ವಾರ ಕಾಲ ಅವಕಾಶ ನೀಡಲಾಗಿದೆ ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಎಲ್ಲಾ ವಾಣಿಜ್ಯ ಮಳಿಗೆಗಳು, ಫುಡ್ ಮಳಿಗೆಗಳು ಭರ್ತಿಯಾಗಿ ಕಾರ್ಯ ನಿರ್ವಹಿಸುತ್ತಿವೆ. ಅಮ್ಯೂಸ್‌ಮೆಂಟ್ ಆವರಣಗಳೆಲ್ಲವೂ ಚಾಲ್ತಿಯಲ್ಲಿವೆ. ಸರ್ಕಾರಿ ಮಳಿಗೆಗಳ ಪೈಕಿ ಶೇ.80ರಷ್ಟು ಚಾಲನೆಯಲ್ಲಿವೆ. ಪಾರ್ಕಿಂಗ್, ಪ್ರವೇಶ, ವಾಣಿಜ್ಯ ಮಳಿಗೆಗಳು, ಫುಡ್ ಮಳಿಗೆಗಳು ಹಾಗೂ ಅಮ್ಯೂಸ್‌ಮೆಂಟ್ ಸೇರಿದಂತೆ ಒಬ್ಬರಿಗೆ ಟೆಂಡರ್ ಆಗಿದೆ. ಈ ಐದು ವಿಭಾಗಗಕ್ಕೂ ಸೇರಿದಂತೆ ಒಟ್ಟು 11.50 ಕೋಟಿಗೆ ಟೆಂಡರ್ ನೀಡಲಾಗಿದೆ. ಈ ಐದು ವಿಭಾಗಗಳೂ ಸೇರಿಯೇ ಒಂದು ಟೆಂಡರ್ ನೀಡಬೇಕಿದ್ದು, ಅದರಂತೆ ಕ್ರಮ ವಹಿಸಲಾಗಿದೆ ಎಂದು ಪ್ರಶ್ನೆಗಳಿಗೆ ವಿವರಿಸಿದರು.

> "ಇಂದು 40 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದಾರೆ. ಅ.15ರಿಂದ 18ರವರೆಗೆ ಪ್ರತಿದಿನ 25 ಸಾವಿರ ಮಂದಿ, 19ರಿಂದ 28ರವರೆಗೆ ಪ್ರತಿದಿನ 35 ಸಾವಿರ ಮೇಲ್ಪಟ್ಟು ಜನ ಬಂದಿದ್ದಾರೆ. ರಜೆಗಳು ಮುಗಿದ ಹಿನ್ನೆಲೆ ಹಾಗೂ ಶಾಲೆಗಳು ಪ್ರಾರಂಭಗೊಳ್ಳುವ ಕಾರಣ ನಾಳೆಯಿಂದ ಭೇಟಿ ನೀಡುವವರ ಸಂಖ್ಯೆಯಲ್ಲಿ ಇಳಿಮುಖ ಆಗಬಹುದು. ವಾರಾಂತ್ಯದಲ್ಲಿ ಭೇಟಿ ನೀಡುವವರು ಸಾಮಾನ್ಯವಾಗಿ ಹೆಚ್ಚಾಗಲಿದ್ದಾರೆ. 90 ದಿನಗಳ ಕಾಲ ದಸರಾ ವಸ್ತು ಪ್ರದರ್ಶನವಿರುವ ಹಿನ್ನೆಲೆಯಲ್ಲಿ ಸ್ಥಳೀಯರು ತಡವಾಗಿ ಭೇಟಿ ನೀಡುವುದು ಸಾಮಾನ್ಯ. ಈಗ ಪ್ರವಾಸಿಗರು, ಮೈಸೂರಿನ ಹೊರಗಿನವರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದಾರೆ.
>
> –ರಾಜೇಶ್ ಜಿ.ಗೌಡ, ಸಿಇಓ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ

ನಕ್ಕರೆ ಅದೇ ಸ್ವರ್ಗ

ವಿದ್ಯಾರ್ಥಿ : ಟೀಚರ್... ಪಕ್ಷಾಂತರ ಎಂದರೇನು?
ಟೀಚರ್ : ಪಕ್ಷ ಬದಲಾಯಿಸುವುದು!
ವಿದ್ಯಾರ್ಥಿ : ಸ್ಥಳಾಂತರ ಎಂದರೆ...?
ಟೀಚರ್ : ಸ್ಥಳ ಬದಲಾಯಿಸುವುದು!
ವಿದ್ಯಾರ್ಥಿ : ಹಾಗಾದ್ರೆ ಗಂಡಾಂತರ ಎಂದರೇನು?
ಟೀಚರ್ : .....

ಮೈಸೂರು ಮಿತ್ರ
ಸೋಮವಾರ, 30 ಅಕ್ಟೋಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

"ಹೊರಗಿನ ಶತ್ರುಗಳೊಡನೆ ಹೋರಾಡುವುದರಿಂದ ಯಾವ ಲಾಭವೂ ಇಲ್ಲ; ಆದ್ದರಿಂದ ಆತ್ಮದೊಡನೆ ಆತ್ಮದ ಸಹಾಯದಿಂದ ಹೋರಾಡಿ ಜಯ ಗಳಿಸಬೇಕು. ಆತ್ಮವನ್ನು ಗೆದ್ದವನೇ ನಿಜವಾದ ಸುಖವನ್ನು ಪಡೆಯುತ್ತಾನೆ. ಆತ್ಮವನ್ನು ಜಯಿಸಿದವನೇ ನಿಜವಾದ ಶೂರ"

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಮಾಡಿದ್ದು ಉಣ್ಣೋ ಮಾರಾಯ'

ನಿಮ್ಮ ಪತ್ರಗಳು

ಕನ್ನಡಿಗರ ಬದುಕಿನಲ್ಲಿ ಕನ್ನಡ ಉಸಿರಾಗಬೇಕು

ಮಾನ್ಯರೆ,

ಇಂಗ್ಲಿಷ್, ಹಿಂದಿ, ಇನ್ನಿತರ ಭಾಷೆಗಳ ಭರಾಟೆಯಲ್ಲಿ, ಕನ್ನಡ ನಾಡಿನಲ್ಲಿ ಕನ್ನಡದ ಬಳಕೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಇದರ ಅಭಿವೃದ್ಧಿಗೆ ಕನ್ನಡಿಗರ ಪ್ರಬಲ ಇಚ್ಛಾಶಕ್ತಿ ಹಾಗೂ ಸಾಮೂಹಿಕ ಪ್ರಯತ್ನದ ಅಗತ್ಯವಿದೆ, ಅದರ ಶ್ರೇಯೋಭಿವೃದ್ಧಿಗಾಗಿ ಕನ್ನಡಿಗರಾದ ನಾವು ಮೊದಲು ಕಂಕಣಬದ್ಧರಾಗಿ ಟೊಂಕಕಟ್ಟಿ ಕೈಜೋಡಿಸಬೇಕು, ಮೊದಲು ಕನ್ನಡಿಗರು ಕನ್ನಡದ ಬಗ್ಗೆ ಅಪಾರ ಪ್ರೀತಿ, ಗೌರವ ಇರಬೇಕು, ಇಂಗ್ಲಿಷ್ ಮಾತನಾಡುವವರೇ ಬುದ್ಧಿವಂತರು, ಕನ್ನಡ ವ್ಯವಹರಿಸುವವರು ಗಮಾರರು ಎಂಬ ಭಾವನೆ ಇದೆ, ಮೊದಲು ಇದು ಬದಲಾಗಿ ನಮ್ಮ ಮನಸ್ಸಿನಿಂದ ಕಿತ್ತೊಗೆಯಬೇಕು, ಬಹುರಾಷ್ಟ್ರೀಯ ಕಂಪನಿಗಳು, ಸಂಸ್ಥೆಗಳು, ಶಾಲೆ-ಕಾಲೇಜುಗಳು, ಸಂಘ ಸಂಸ್ಥೆಗಳಲ್ಲಿ ಕನ್ನಡ ನಾದ ಮೊಳಗಬೇಕು, ಕನ್ನಡದಲ್ಲಿ ಪ್ರಕಟವಾಗುವ ಪುಸ್ತಕಗಳು, ದಿನಪತ್ರಿಕೆಗಳು, ಕಾದಂಬರಿಗಳು, ವಾರಪತ್ರಿಕೆಗಳು, ಕಥೆಗಳು, ಮಾಸಿಕ ಪತ್ರಿಕೆಗಳನ್ನು ಹೆಚ್ಚು ಹೆಚ್ಚು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು, ಈ ರೀತಿ ಮಾಡುವುದರಿಂದ ಕನ್ನಡ ಸಾಹಿತಿಗಳಿಗೆ ಪ್ರೋತ್ಸಾಹವು ಸಿಗುವುದರೊಂದಿಗೆ ಭಾಷೆ ಸುಧಾರಿಸುತ್ತದೆ.

ಎಲ್ಲೆಡೆ ಕನ್ನಡವನ್ನು ಬಳಸಿ, ಉಳಿಸಿ ಬೆಳೆಸಲು ನಾವು ಕನ್ನಡವನ್ನು ನಮ್ಮ ಜೀವನದ ಭಾಗವಾಗಿಸಿಕೊಳ್ಳಬೇಕು, ಕುಟುಂಬ, ಸ್ನೇಹಿತರು, ಬಂಧುಬಾಂಧವರೊಂದಿಗೆ ಕನ್ನಡದಲ್ಲಿ ಮಾತನಾಡಬೇಕು. ಇಂಗ್ಲಿಷ್ ಶ್ರೇಷ್ಠ ಎಂಬ ಭ್ರಮೆ ಬಿಟ್ಟು ಕನ್ನಡವನ್ನು ವಿಶ್ವಾಸದಿಂದ ದಿನನಿತ್ಯದ ವ್ಯವಹಾರಗಳಲ್ಲಿ ಬಳಸಬೇಕು, ಅಂತರ್ಜಾಲಗಳಲ್ಲಿ ಹೆಚ್ಚು ಹೆಚ್ಚು ಕನ್ನಡವನ್ನು ಬಳಸಬೇಕು, ನಮಗೆ ಬೇಕಾಗಿರುವ ಮಾಹಿತಿ ಮತ್ತು ತಂತ್ರಜ್ಞಾನ ಹಾಗೂ ಅಂತರ್ಜಾಲದ ನೆರವಿನಿಂದ ಕನ್ನಡ ಬಳಕೆಯ ವೇಗ ಮತ್ತು ವ್ಯಾಪ್ತಿಯನ್ನು ಹೆಚ್ಚಿಸಬೇಕು, ಭಾಷಾ ಸಾಹಿತ್ಯವನ್ನು ಡಿಜಿಟಲೀಕರಣ ಗೊಳಿಸಿದಾಗ, ಕನ್ನಡದಲ್ಲಿ ಬೇಕಾದ ಮಾಹಿತಿ ತಕ್ಷಣ ದೊರೆಯುತ್ತದೆ, ಆಗ ಇಂಗ್ಲೀಷಿನ ಮೇಲಿನ ಅವಲಂಬನೆ ಸಹಜವಾಗಿ ಕಡಿಮೆಯಾಗುತ್ತದೆ.

ಯಾರಾದರೂ ನೆಲ, ಜಲ, ಭಾಷೆ, ತಂಟೆಗೆ ಬಂದರೆ ಒಟ್ಟಾಗಿ ಹೋರಾಟ ಮಾಡಬೇಕು, ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಲು 'ಸ್ನೇಹಕ್ಕೂ ಸೈ, ಸಮರಕ್ಕೂ ಸೈ' ಎಂಬ ಮಾತಿನಂತೆ ನಾಡಿನ ಜನರಲ್ಲಿ ಜಾಗೃತಿ ಮೂಡಿಸಬೇಕು, ಉತ್ತರ ಭಾರತದಲ್ಲಿ ಕೆಲವು ಮಾತೃಭಾಷೆಗಳು ನಶಿಸುತ್ತಿರುವುದನ್ನು ನಾವೆಲ್ಲರೂ ಕೇಳಿದ್ದೇವೆ ಆದ್ದರಿಂದ ಕನ್ನಡ ಭಾಷೆಯನ್ನು ಹೆಚ್ಚು ಹೆಚ್ಚು ಬಳಸುವುದರಿಂದ ಅದು ಬೆಳೆಯುತ್ತಾ ಹೋಗುತ್ತದೆ.

– ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾಲೂಕು.

ಬೆಂಗಳೂರು-ಮೈಸೂರು ರೈಲುಗಳಿಗೆ ನಿಗದಿತ ಸಮಯವಿಲ್ಲವೇ...?

ಮಾನ್ಯರೆ,

ಬೆಂಗಳೂರಿನಿಂದ ಮೈಸೂರಿಗೆ, ಮೈಸೂರಿನಿಂದ ಬೆಂಗಳೂರಿಗೆ ದಿನನಿತ್ಯ ಸಂಚರಿಸುವ ಕೆಲವು ರೈಲುಗಳು ನಿಗದಿತ ಸಮಯಕ್ಕೆ ಬಾರದೆ ಪ್ರಯಾಣಿಕರಿಗೆ ಭಾರಿ ತೊಂದರೆಯಾಗಿದೆ. ಒಂದು ದಿನ ನಿಗದಿತ ಸಮಯಕ್ಕೆ ಹೊರಟರೆ ಮತ್ತೊಂದು ದಿನ ನಿಗದಿತವಾದ ಸಮಯಕ್ಕಿಂತ 10, 15 ಹಾಗೂ 25ಕ್ಕೂ ಹೆಚ್ಚು ನಿಮಿಷ ತಡವಾಗಿ ಬರುತ್ತಿದ್ದು, ಪ್ರಯಾಣಿಕರ ಪಾಡು ಹೇಳತೀರದಾಗಿದೆ. ಒಂದೆರಡು ದಿನಗಳಾದರೆ ಸಹಿಸಬಹುದು. ಆದರೆ ತಿಂಗಳಲ್ಲಿ 10ರಿಂದ 15 ದಿನಗಳು ಬೆಂಗಳೂರು-ಮೈಸೂರು ರೈಲುಗಳು ವಿಳಂಬವಾಗಿ ಬರುವುದು, ಹೋಗುವುದು ಸಾಮಾನ್ಯವಾಗಿಬಿಟ್ಟಿದೆ. ಇದರಿಂದ ಸಾರ್ವಜನಿಕರ ಅನೇಕ ಕೆಲಸಗಳು ತಡವಾಗುತ್ತಿದೆ ಮತ್ತು ಸರ್ಕಾರಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು ರೈಲ್ವೆ ಸೇವೆಯನ್ನು ಹೆಚ್ಚು ಬಳಸುವುದರಿಂದ ಕಚೇರಿಗಳಿಗೆ ಸರಿಯಾದ ಸಮಯಕ್ಕೆ ಹೋಗದಂತಾಗಿದೆ. ಇನ್ನು ಶಾಲಾ-ಕಾಲೇಜಿನ ಮಕ್ಕಳು, ಶಿಕ್ಷಕರು, ಅಧ್ಯಾಪಕರು, ರೋಗಿಗಳು ಸೇರಿ ಇನ್ನಿತರಿಗೂ ಸಹ ಬಹುತೇಕ ತೊಂದರೆಯಾಗುತ್ತಿದೆ. ಕೂಡಲೇ ನೈರುತ್ಯ ರೈಲ್ವೆ ಇಲಾಖೆಯ ಅಧಿಕಾರಿಗಳು ಬೆಂಗಳೂರು ಮತ್ತು ಮೈಸೂರಿನ ರೈಲ್ವೆ ಮಾರ್ಗದಲ್ಲಿರುವ ಲೋಪ-ದೋಷಗಳನ್ನು ಸರಿಪಡಿಸಿ ರೈಲು ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವ ಮೂಲಕ ಮಾದರಿಯಾಗಬೇಕು ಎಂದು ಕೋರುತ್ತೇನೆ.

– ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಇಂದಿರಾ ಕ್ಯಾಂಟೀನ್‌ಗಳ ಸಂಖ್ಯೆ ಹೆಚ್ಚಳವಾಗಲಿ

ಮಾನ್ಯರೆ,

ಬಡವರು, ಕೂಲಿ ಕಾರ್ಮಿಕರು, ವಲಸಿಗರ ಹಸಿವು ನೀಗಿಸುವ ಉದ್ದೇಶದಿಂದ ಪ್ರಾರಂಭಿಸಲಾದ ಇಂದಿರಾ ಕ್ಯಾಂಟೀನ್ ಯೋಜನೆಯ ಉದ್ದೇಶ ಅತ್ಯುತ್ತಮವಾಗಿದ್ದು, ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದರೆ ರಾಜ್ಯದ ಬಹುತೇಕ ಬಡ ಜನರು ಹಸಿವಿನಿಂದ ಮುಕ್ತಿ ಹೊಂದಿದಂತಾಗುತ್ತದೆ.

ತಮಿಳುನಾಡಿನಲ್ಲಿ ಅಮ್ಮ ಕ್ಯಾಂಟೀನ್ ಜನಪ್ರಿಯತೆಯನ್ನು ಕಂಡು 2017ರಲ್ಲಿ ಸಿದ್ದರಾಮಯ್ಯ ಅವರು ಸಿಎಂ ಆಗಿದ್ದ ವೇಳೆ ಇಂದಿರಾ ಕ್ಯಾಂಟೀನ್ ಆರಂಭಿಸಿದ್ದರು. ಕಡಿಮೆ ದರದಲ್ಲಿ ಆಹಾರ ನೀಡುವ ಇಂದಿರಾ ಕ್ಯಾಂಟೀನ್ ಭಾರಿ ಜನಪ್ರಿಯವಾಗಿತ್ತು. ಪ್ರಾರಂಭದಲ್ಲಿ ರಾಜ್ಯದ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಒಟ್ಟು 247 ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲಾಗಿತ್ತು ಮತ್ತು ಹಲವು ಕಡೆಗಳಲ್ಲಿ ಇಂದಿರಾ ಕ್ಯಾಂಟೀನ್ ಯೋಜನೆ ಯಶಸ್ವಿಯಾಗಿತ್ತು.ಇಂದಿರಾ ಕ್ಯಾಂಟೀನ್‌ನಲ್ಲಿ 5 ರೂ.ಗೆ ಉಪಾಹಾರ, 10 ರೂ.ಗೆ ಊಟವನ್ನು ನೀಡಲಾಗುತ್ತಿತ್ತು. ನಂತರ ಸರ್ಕಾರದ ಬದಲಾವಣೆಯಿಂದಾಗಿ ನೇಪಥ್ಯಕ್ಕೆ ಸರಿದಿದ್ದ ಇಂದಿರಾ ಕ್ಯಾಂಟೀನ್ ಪ್ರಸುತ್ತ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ.

ಇದೀಗ ರಾಜಧಾನಿ ಬೆಂಗಳೂರಿನಲ್ಲಿ 198 ಇರುವ ಇಂದಿರಾ ಕ್ಯಾಂಟೀನ್‌ಗಳ ಸಂಖ್ಯೆಯನ್ನು 250ಕ್ಕೇರಿಸುವ ಚಿಂತನೆಯಲ್ಲಿರುವ ರಾಜ್ಯ ಸರ್ಕಾರ ಪ್ರತಿ ಹೋಬಳಿ ಮಟ್ಟದಲ್ಲಿ ಒಂದು ಇಂದಿರಾ ಕ್ಯಾಂಟೀನ್ ತೆರೆದರೆ ಲಕ್ಷಾಂತರ ಸಂಖ್ಯೆಯ ಬಡವರ ಹಸಿವನ್ನು ನೀಗಿಸಿದಂತಾಗುತ್ತದೆ. ಮಾಹಿತಿಯ ಪ್ರಕಾರ ತಿಂಡಿಗೆ 10 ರೂ, ಊಟಕ್ಕೆ 20 ರೂ. ಬೆಲೆ ನಿಗದಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಬೆಲೆ ಏರಿಸಿ ಶುಚಿಕರ ತಿಂಡಿ ಊಟ ನೀಡಲು ಸಿದ್ಧತೆ ನಡೆಸಲಾಗಿದೆ. ಇಂದಿರಾ ಕ್ಯಾಂಟೀನ್‌ನಲ್ಲಿ ಬೆಳಗ್ಗೆ ತಿಂಡಿಗೆ 2 ಇಡ್ಲಿ 1 ವಡೆ, ಉಪ್ಪಿಟ್ಟು, ಕೇಸರಿಬಾತ್, ಬಿಸಿಬೇಳೆ ಬಾತ್, ಪುಳಿಯೊಗರೆ, ಚಿತ್ರಾನ್ನ, ವಾಂಗಿಬಾತ್, ರೈಸ್ ಬಾತ್ ಟೊಮೆಟೋ ಬಾತ್ ಸಿಗಲಿದೆ.

ಮಧ್ಯಾಹ್ನ ಊಟಕ್ಕೆ ಒಂದು ಚಪಾತಿ, ಮುದ್ದೆ, ಒಂದು ವೆಜ್ ಪಲ್ಯಾ, ಒಂದು ಕಪ್ ವೈಟ್ ರೈಸ್, ಸಾಂಬಾರ್ ಹಾಗೂ ರಸಂ ಸಿಗಲಿದೆ. ಇನ್ನು ವಾರದಲ್ಲಿ ಮೂರು ದಿನ ಮಧ್ಯಾಹ್ನ ಸಿಹಿ ತಿಂಡಿ, ಹೋಳಿಗೆ, ಅಕ್ಕಿಪಾಯಸ, ಕೇಸರಿ ಬಾತ್ ಹಾಗೂ ರಾತ್ರಿ ಊಟಕ್ಕೆ ರೈಸ್ ಬಾತ್, ಅನ್ನ ಸಾಂಬಾರ್ ಇರಲಿದ್ದು ಸರ್ಕಾರದ ಈ ಯೋಜನೆ ಯಶಸ್ವಿಯಾದರೆ ರಾಜ್ಯದ ಹಲವಾರು ಜನರಿಗೆ ಹಸಿವಿನಿಂದ ಮುಕ್ತಿ ದೊರಕಿದಂತಾಗುತ್ತದೆ. ಸಮಾಜವಾದಿ ಚಿಂತನೆಯ ಇಂದಿರಾ ಕ್ಯಾಂಟೀನ್ ಯೋಜನೆಯನ್ನು ಮೇಲ್ದರ್ಜೆಗೆ ಏರಿಸುವ ಸರ್ಕಾರದ ಕ್ರಮ ಉತ್ತಮವಾಗಿದ್ದು , ಇಂದಿರಾ ಕ್ಯಾಂಟೀನ್ ಗಳ ಸಂಖ್ಯೆಯನ್ನು ಹೆಚ್ಚುಮಾಡಬೇಕೆಂದು ಮನವಿ ಮಾಡುತ್ತಾ ಕರ್ನಾಟಕ ರಾಜ್ಯದ ಬಡವರ ಪರವಾಗಿ ರಾಜ್ಯ ಸರ್ಕಾರಕ್ಕೆ ಧನ್ಯವಾದಗಳು.

–ರಾಸುಮ ಭಟ್, ಚಿಕ್ಕಮಗಳೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಧರ್ಮ ಹೃದಯದಲ್ಲಿದ್ದರೆ ಪಂಜು ; ನೆತ್ತಿಗೇರಿದರೆ ನಂಜು!



"ತನಗೆ ನೆಲೆ ನೀಡಿದ, ನೀರು ಹಾಗೂ ಅನ್ನ ನೀಡುತ್ತಿರುವ ದೇಶದ ಕಾನೂನನ್ನೇ ಧಿಕ್ಕರಿಸಿ ತಮ್ಮ ಧರ್ಮದ ಅನುಷ್ಠಾನಕ್ಕಾಗಿ ಹಾತೊರೆಯುವ ಮನಸ್ಥಿತಿ ವಿಚಿತ್ರ ಎನಿಸುತ್ತದೆ. ದೇಶದ ಸಂವಿಧಾನವನ್ನು ಕೆಲವು ವಿಷಯಗಳಿಗೆ ಮಾತ್ರ ಅನ್ವಯ ಮಾಡುತ್ತಾ, ಮತ್ತೆ ಕೆಲವು ವಿಷಯಗಳಿಗೆ ತಮ್ಮ ಧರ್ಮ ಮುಖ್ಯ ಎನ್ನುತ್ತಿರುವುದು ಜಾಣ ನಡೆ ಎನಿಸುತ್ತದೆ. ನೆಲದ ಕಾನೂನನ್ನು ಗೌರವಿಸ ಬೇಡ ಎಂಬ ನೀತಿಯನ್ನು ಯಾವ ಧರ್ಮವೂ ಬೋಧಿಸುವುದಿಲ್ಲ. ಧರ್ಮವು ಹೃದಯದಲ್ಲಿ ನೆಲೆಸಿದ್ದರೆ ಕಾನೂನನ್ನು ಗೌರವಿಸುವ ಕನಿಷ್ಠ ಜ್ಞಾನವಿರುತ್ತದೆ. ಧರ್ಮವನ್ನು ನೆತ್ತಿಗೇರಿಸಿಕೊಂಡರೆ ಧರ್ಮದ ಮುಂದೆ ಕಾನೂನು ಸಹ ನಗಣ್ಯವಾಗುತ್ತದೆ. ರೇಷನ್ ಕಾರ್ಡ್ ಪಡೆಯಲು ಸರ್ಕಾರ ರೂಪಿಸಿರುವ ಕಾನೂನನ್ನು ಪಾಲಿಸುವ ಮಂದಿ, ಸರ್ಕಾರ ರೂಪಿಸಿರುವ ಇತರೆ ಕಾನೂನುಗಳನ್ನು ಗಾಳಿಗೆ ತೂರುತ್ತಿರುವುದು ದೇಶದ್ರೋಹದ ಕೆಲಸವಲ್ಲವೇ?

'ಈ ಪವಿತ್ರ ಭಾರತದಲ್ಲಿ ಹಿಂದುಗಳಿದ್ದಾರೆ, ಮುಸ್ಲಿಮರಿದ್ದಾರೆ, ಕ್ರೈಸ್ತರಿದ್ದಾರೆ, ಸಿಖ್ಖರಿದ್ದಾರೆ, ಜೈನರಿದ್ದಾರೆ, ಬೌದ್ಧರಿದ್ದಾರೆ ಅಷ್ಟೇ ಅಲ್ಲದೆ ನೂರಾರು ಜಾತಿಗಳವರಿದ್ದಾರೆ. ಆದರೆ ನಾನು ಹುಡುಕುತ್ತಿರುವುದು ಮನುಷ್ಯರನ್ನು, ದಯಮಾಡಿ ಹೇಳಿ ಅವರೆಲ್ಲಿದ್ದಾರೆ?' ಎಂದು ಕವಿಯೊಬ್ಬರು ಪ್ರಶ್ನಿಸಿದ್ದಾರೆ. ಇಂದು ಮನುಷ್ಯನಾದವನು ಮನುಷ್ಯ ಧರ್ಮವನ್ನು ಬಿಟ್ಟು ಮನುಷ್ಯ ಸೃಷ್ಟಿಸಿದ ಧರ್ಮಕ್ಕಾಗಿ ನಿತ್ಯ ಒಂದಿಲ್ಲೊಂದು ಹೋರಾಟ, ಹೊಡೆದಾಟ ನಡೆಸುತ್ತಲೇ ಇದ್ದಾನೆ. ಜಗತ್ತಿನಲ್ಲಿನ ಇಂದಿನ ವಿದ್ಯಮಾನಗಳನ್ನು ನೋಡುತ್ತಿದ್ದರೆ ಭೂಮಿಯ ಮೇಲೆ ಮೊದಲು ಹುಟ್ಟಿದ್ದು ಮನುಷ್ಯನೋ ಅಥವಾ ಧರ್ಮವೋ? ಎಂಬ ಅನುಮಾನ ಮೂಡುತ್ತದೆ. ಭೂಮಿಯ ಮೇಲೆ ಪ್ರಾಣಿಗಳು ಪ್ರಕೃತಿದತ್ತವಾಗಿ ಬದುಕುತ್ತಾ ಆನಂದದ ಬದುಕನ್ನು ಕಂಡುಕೊಂಡಿದ್ದರೆ ಮನುಷ್ಯ ಮಾತ್ರ ಧರ್ಮದ ಹೆಸರಿನಲ್ಲಿ ಒಂದಿಲ್ಲೊಂದು ವಿವಾದ, ಪ್ರಮಾದ ಅಷ್ಟೇ ಅಲ್ಲದೇ ವಿನಾಶಕಾರಿ ಯುದ್ಧವನ್ನೇ ಮಾಡುತ್ತಾ ಮನುಜ ಕುಲವೇ ನಾಚುವಂತಹ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾನೆ. 'ದಯವೇ ಧರ್ಮದ ಮೂಲವಯ್ಯ' ಎಂಬ ಶರಣರಾದ ಬಸವಣ್ಣನವರ ಮಾತನ್ನು ವೇದಿಕೆಗಳಲ್ಲಿ ಭಾಷಣಕ್ಕೆ ಸೀಮಿತಗೊಳಿಸಿ 'ವಿವಾದವೇ ಧರ್ಮದ ಮೂಲವಯ್ಯ' ಎಂಬಂತೆ ನಿತ್ಯ ನಡೆಯುತ್ತಿರುವ ಗಲಭೆಗಳು ಶಾಂತಿಪ್ರಿಯರ ಸಂಯಮವನ್ನೇ ಪರೀಕ್ಷಿಸುವಂತಿದೆ. ಇಂದು ಜಗತ್ತಿನಲ್ಲಿ ಬೇರೆ ಬೇರೆ ಕಾರಣಗಳಿಗೆ ಸಂಭವಿಸುತ್ತಿರುವ ಸಾವುನೋವಿಗಿಂತ ಧರ್ಮಕಾರಣಕ್ಕೆ ಸಾವುನೋವುಗಳು ಹೆಚ್ಚಾಗುತ್ತಿರುವುದು ದುರದೃಷ್ಟಕರ.

ಪ್ರತಿಯೊಬ್ಬರೂ ಅವರವರ ಧರ್ಮವನ್ನು ಸರ್ವಶ್ರೇಷ್ಠ ಹಾಗೂ ಅಮೂಲ್ಯವಾದುದು ಎಂದು ನಂಬುವುದು ಸಹಜ. ಆದರೆ ಯಾವುದೇ ಧರ್ಮವೂ ಮತ್ತೊಂದು ಧರ್ಮದವರಿಗೆ ಹಿಂಸಿಸು, ಕೊಲ್ಲು ಎಂದು ಹೇಳುವುದಿಲ್ಲ. ಧರ್ಮದ ತತ್ತ್ವಗಳು ಏನೇ ಹೇಳಿದರೂ, ಮತ್ತೊಂದು ಧರ್ಮವನ್ನು ಗೌರವಿಸುವುದು ನಿಜವಾದ ಮನುಷ್ಯ ಧರ್ಮ. ಆದರೆ ಇಂದು ಧರ್ಮಗಳು ತಮ್ಮ ಧರ್ಮೀಯರ ಅಂಧಕಾರವನ್ನು ತೊಡೆದು ಹಾಕುವ ಬದಲು ಅಂಧಭಕ್ತಿ ಹಾಗೂ ಅಂಧಶ್ರದ್ಧೆಯಿಂದ ಅನ್ಯ ಧರ್ಮವನ್ನು ಹೀಯಾಳಿಸುವ, ಅನ್ಯ ಧರ್ಮದವರನ್ನು ಹಿಂಸಿಸುವ ಕೃತ್ಯಕ್ಕೆ ಮುಂದಾಗುತ್ತಿರುವುದು ಮಾತ್ರ ಹೇಯ ಹಾಗೂ ಖಂಡನೀಯ. ಧರ್ಮ ಎಂಬುದನ್ನು ಹೃದಯಲ್ಲಿರಿಸಿಕೊಂಡರೆ ಅದು ಬೆಳಕನ್ನು ನೀಡುವ ಪಂಜಾಗಿ ಪರಿಣಮಿಸುತ್ತದೆ, ಬದಲಿಗೆ ಅದನ್ನು ನೆತ್ತಿಗೇರಿಸಿಕೊಂಡರೆ ಹೇಗೆ ಮದ್ಯಪಾನ ಮಾಡಿದ ಕುಡುಕನಿಗೆ ತನ್ನ ಕೃತ್ಯದ ಅರಿವಿರುವುದಿಲ್ಲವೋ ಹಾಗೆ ಧರ್ಮದ ಅಮಲು ಹೆಚ್ಚಾಗಿ ಅಮಾನವೀಯವಾದ ಕೃತ್ಯಗಳನ್ನು ಮಾಡಲು ಪ್ರಚೋದಿಸುತ್ತದೆ.

ಮನುಷ್ಯನ ಜೀವನ ಶೈಲಿ ಸಾವಿರಾರು ವರ್ಷಗಳಿಂದ ಇರುವಂತೆ ಇಂದು ಇಲ್ಲ, ಆಮೂಲಾಗ್ರವಾದ ಬದಲಾವಣೆಯನ್ನು ಕಂಡಿದೆ. ಬದಲಾವಣೆ ಜಗದ ನಿಯಮ ಎಂದಾದ ಮೇಲೆ ಇಂದಿಗೂ ಕೆಲವು ಧರ್ಮಗಳು ಸಾವಿರಾರು ವರ್ಷಗಳ ಹಿಂದೆ ಇದ್ದ ತತ್ತ್ವಗಳನ್ನು ಇಂದಿಗೂ ಅನುಸರಿಸುತ್ತಿರುವುದನ್ನು ಕಾಣಬಹುದು. ಎಲ್ಲದರಲ್ಲೂ ಬದಲಾವಣೆ ಆದಂತೆ ಧರ್ಮದ ನೀತಿನಿಯಮಗಳಲ್ಲೂ ಬದಲಾಗಬೇಕಲ್ಲವೇ? ಮನುಷ್ಯ ರಚಿಸಿದ ಸಂವಿಧಾನವೇ ಕಾಲಕಾಲಕ್ಕೆ ಬದಲಾದ ಮೇಲೆ ಅದೇ ಮನುಷ್ಯ ಸೃಷ್ಟಿಸಿದ ಧರ್ಮ ಏಕೆ ಮಾರ್ಪಾಡು ಹೊಂದುತ್ತಿಲ್ಲವೋ ತಿಳಿಯದು?

ಇಂದು ಮೂಲಭೂತವಾದಿಗಳಿಂದ ಒಬ್ಬ ಮನುಷ್ಯ ಮತ್ತೊಬ್ಬನನ್ನು ಮನುಷ್ಯ ಎಂದು ಭಾವಿಸದೇ ಅಮಾನುಷವಾಗಿ ವಿನಾಕಾರಣ ಹತ್ಯೆ ಮಾಡಿಬಿಡುವಷ್ಟು ಆಕ್ರೋಶ ಹೊಂದಿರುತ್ತಾನೆ. ಇದಕ್ಕೆ ಕಾರಣ ಧರ್ಮಾಂಧತೆ ಅಲ್ಲದೆ ಮತ್ತೇನೂ ಅಲ್ಲ. ಅಕ್ಕಪಕ್ಕದ ಮನೆಯಲ್ಲಿ ಸಹೋದರರಂತೆ ಬದುಕುತ್ತಿರುವ ಅನ್ಯಧರ್ಮೀಯರ ಕುಟುಂಬಗಳು ಎಲ್ಲೋ ಒಂದು ಕಡೆ ಧರ್ಮ ಸಂಘರ್ಷ ನಡೆಯುತ್ತಿದೆ ಎನ್ನುವ ಕಾರಣಕ್ಕೆ ಇಲ್ಲಿ ಹೊಡೆದಾಡಿಕೊಳ್ಳುತ್ತಿರುವುದು ಧರ್ಮದ ದುಷ್ಟ ಶಕ್ತಿಯನ್ನು ತೋರುತ್ತದೆ. ಧರ್ಮಗಳು ಮನುಷ್ಯನ ಕಣ್ತೆರಿಸುವಂತೆ ಇರಬೇಕು. ಆದರೆ ಕಣ್ಣು ಕಾಣುವವನಿಗೆ ತಾತ್ಕಾಲಿಕ ಅಂಧತ್ವವನ್ನು ಕರುಣಿಸುತ್ತಿರುವುದು ಮಾತ್ರ ವಿಷಾದಕರ. ಖ್ಯಾತ ಸಾಹಿತಿ ಪಿ. ಲಂಕೇಶ್ ಅವರು ಧರ್ಮದ ಕುರಿತು ಹೇಳಿರುವ ಒಂದು ಮಾತು ಇಲ್ಲಿ ಉಲ್ಲೇಖನೀಯ. 'ಧರ್ಮ ಬಹುಮುಖ್ಯ ಎಂದು ಹೇಳುವ ಮನುಷ್ಯನನ್ನು ಕೇಳಿ, ನಿನಗೆ ಧರ್ಮ ಎಷ್ಟು ಮುಖ್ಯ ಎಂದು. ನಿನ್ನ ಧರ್ಮವನ್ನು ಒಪ್ಪದವನನ್ನು ಕೊಲ್ಲುವಷ್ಟು? ಹಾಗಾದರೆ ನಿನ್ನ ಧರ್ಮದ ಅರ್ಥವೇನು? ನಿನ್ನನ್ನು ಕೊಲೆಗಡುಕನನ್ನಾಗಿ ಮಾಡಿದ ನಿನ್ನ ಧರ್ಮಕ್ಕೆ ಅರ್ಥವಿರಲು ಸಾಧ್ಯವೇ?' ಎಂದು ಲಂಕೇಶ್ ಅವರು ಪ್ರಶ್ನಿಸುತ್ತಾರೆ. ಈ ಮಾತು ಮಾರ್ಮಿಕವಾಗಿದ್ದು ಅಕ್ಷರಶಃ ಸತ್ಯ ಎನಿಸದೇ ಇರದು.

ಹುಟ್ಟಿದವನು ಸಾಯಲೇ ಬೇಕು ಎಂಬುದು ಪ್ರಕೃತಿ ನಿಯಮ. ಧರ್ಮದ ನಿಯಮಗಳು ಪ್ರಕೃತಿ ನಿಯಮಗಳನ್ನು ಬದಲಿಸಲು ಸಾಧ್ಯವಿಲ್ಲ. ಮನುಷ್ಯ ತನ್ನ ಧರ್ಮವನ್ನು ಎಷ್ಟೇ ಶ್ರೇಷ್ಠ ಎಂದು ಕರೆದುಕೊಂಡರೂ ಪ್ರಕೃತಿಯ ಆಗುಹೋಗುಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಧರ್ಮಾಧಿಕಾರಿ ಎಷ್ಟೇ ಮೇಧಾವಿ ಆದರೂ ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇಷ್ಟೆಲ್ಲಾ ಅರಿವಿದ್ದರೂ, ವಿದ್ಯಾವಂತರಾದವರೂ ಸಹ ಧರ್ಮದ ಹೆಸರನ್ನು ಕೇಳಿದಾಕ್ಷಣ ಕೆರಳಿ ಬಿಡುವುದನ್ನು ಕಾಣಬಹುದು. ಮನುಷ್ಯನನ್ನು ಅಳಿಸಲು ಉಗ್ರವಾಗಿ ಹೋರಾಡುವಷ್ಟು ಮನುಷ್ಯನನ್ನು ಉಳಿಸಲು ಹೋರಾಡದೇ ಇರುವುದು ಅನಾಗರಿಕ ನಡೆಯಲ್ಲವೇ?

ಶಿಕ್ಷಣದ ಗುಣಮಟ್ಟ ಹೆಚ್ಚಾದಷ್ಟು ಮನುಷ್ಯತ್ವದ ಗುಣಮಟ್ಟ ಕಡಿಮೆಯಾಗುತ್ತಿರುವುದು ಈ ಶತಮಾನದ ವಿಡಂಬನೆ ಎನಿಸುತ್ತದೆ. ಶಿಕ್ಷಣ ವ್ಯವಸ್ಥೆಯಲ್ಲಿ ಸಹೋದರತ್ವ, ಸಹಬಾಳ್ವೆ, ಸಹಿಷ್ಣುತೆ ಕುರಿತು ಬೋಧಿಸುವುದು ಸಹಜ. ಆದರೆ ಕೆಲವು ಧರ್ಮಗಳು ಶಾಂತಿ ಸ್ಥಾಪನೆ ಕುರಿತು ಬೋಧಿಸುವ ಬದಲು ಅಶಾಂತಿ, ವೈರತ್ವ, ಅಸಹಿಷ್ಣುತೆ ಕುರಿತು ಹೇಳುತ್ತ ಭಯೋತ್ಪಾದನೆ ಮಾಡುತ್ತಾ, ಯುವ ಸಮುದಾಯವನ್ನು ತಪ್ಪು ದಾರಿಗೆ ಎಳೆದೊಯ್ಯುತ್ತಿರುವುದನ್ನು ಕಾಣಬಹುದು. ತಮ್ಮ ಧರ್ಮದ ಸಂಸ್ಕಾರವನ್ನು ಪಾಲಿಸಿ ದೊಡ್ಡತನ ಮೆರೆಯದೆ ಬೇರೆ ಧರ್ಮದವರ ಶವಸಂಸ್ಕಾರಕ್ಕಾಗಿ ಹಾತೊರೆಯುತ್ತಿರುವುದು ಧರ್ಮಗಳ ಕರಾಳ ಮುಖವನ್ನು ತೋರುತ್ತದೆ. ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ಮನುಕುಲದ ಒಳಿತಿಗಾಗಿ ಕಾರ್ಯಗಳು ನಡೆಯುವುದು ಸಹಜ. ಆದರೆ ಅನ್ಯ ಧರ್ಮವನ್ನು ಅಳಿಯಲು ಸಂಚು ರೂಪಿಸುವ ಅಧರ್ಮದ ಕೇಂದ್ರಗಳಾಗಿ ಮಾರ್ಪಾಡಾಗುತ್ತಿರುವುದು ದುರದೃಷ್ಟಕರ. ಧರ್ಮ ಶಾಂತಿಪ್ರಿಯರನ್ನು ಹುಟ್ಟುಹಾಕಬೇಕೇ ಹೊರತು ಅಶಾಂತಿ ಕದಡುವ ಪುಂಡರನ್ನು ಅಲ್ಲ!

ತನಗೆ ನೆಲೆ ನೀಡಿದ, ನೀರು ಹಾಗೂ ಅನ್ನ ನೀಡುತ್ತಿರುವ ದೇಶದ ಕಾನೂನನ್ನೇ ಧಿಕ್ಕರಿಸಿ ತಮ್ಮ ಧರ್ಮದ ಅನುಷ್ಠಾನಕ್ಕಾಗಿ ಹಾತೊರೆಯುವ ಮನಸ್ಥಿತಿ ವಿಚಿತ್ರ ಎನಿಸುತ್ತದೆ. ದೇಶದ ಸಂವಿಧಾನವನ್ನು ಕೆಲವು ವಿಷಯಗಳಿಗೆ ಮಾತ್ರ ಅನ್ವಯ ಮಾಡುತ್ತಾ, ಮತ್ತೆ ಕೆಲವು ವಿಷಯಗಳಿಗೆ ತಮ್ಮ ಧರ್ಮ ಮುಖ್ಯ ಎನ್ನುತ್ತಿರುವುದು ಜಾಣ ನಡೆ ಎನಿಸುತ್ತದೆ. ನೆಲದ ಕಾನೂನನ್ನು ಗೌರವಿಸ ಬೇಡ ಎಂಬ ನೀತಿಯನ್ನು ಯಾವ ಧರ್ಮವೂ ಬೋಧಿಸುವುದಿಲ್ಲ. ಧರ್ಮವನ್ನು ಹೃದಯದಲ್ಲಿ ನೆಲೆಸಿದ್ದರೆ ಕಾನೂನನ್ನು ಗೌರವಿಸುವ ಕನಿಷ್ಠ ಜ್ಞಾನವಿರುತ್ತದೆ. ಧರ್ಮವು ನೆತ್ತಿಗೇರಿಸಿಕೊಂಡರೆ ಧರ್ಮದ ಮುಂದೆ ಕಾನೂನು ಸಹ ನಗಣ್ಯವಾಗುತ್ತದೆ. ರೇಷನ್ ಕಾರ್ಡ್ ಪಡೆಯಲು ಸರ್ಕಾರ ರೂಪಿಸಿರುವ ಕಾನೂನನ್ನು ಪಾಲಿಸುವ ಮಂದಿ, ಸರ್ಕಾರ ರೂಪಿಸಿರುವ ಇತರೆ ಕಾನೂನುಗಳನ್ನು ಗಾಳಿಗೆ ತೂರುತ್ತಿರುವುದು ದೇಶದ್ರೋಹದ ಕೆಲಸವಲ್ಲವೇ?

ಕೆಲವು ಧರ್ಮಗಳು ತಮ್ಮ ಧರ್ಮ ಪಾಲನೆ ಮಾಡುವವರ ಜನಸಂಖ್ಯೆಯನ್ನು ವೃದ್ಧಿಸುವ ದೃಷ್ಟಿಯಿಂದ ಬಡತನವನ್ನು ಬಂಡವಾಳ ಮಾಡಿಕೊಂಡು, ಕೆಲಸ, ಸಂಬಳದ ಆಮಿಷ ಒಡ್ಡಿ ಮತಾಂತರ ಮಾಡುವಂತಹ ಅಧರ್ಮದ ಕೆಲಸವನ್ನು ಎಗ್ಗಿಲ್ಲದೆ ನಡೆಸುತ್ತಿವೆ. ಯಾವುದೇ ಧರ್ಮವನ್ನು ಪಾಲಿಸುವ ಹಕ್ಕು ಪ್ರತಿಯೊಬ್ಬ ಪ್ರಜೆಗೂ ಇದೆ. ಆದರೆ ಅದು ಸ್ವಯಂ ಇಚ್ಛೆಯಿಂದ ಆಗಬೇಕೆ ವಿನಃ ಬಲವಂತವಾಗಿ ಅಲ್ಲ. ವ್ಯಾಪಾರ ವಹಿವಾಟುಗಳಲ್ಲಿ ಮೋಸ ಹೋಗದ ಜನ ಧರ್ಮದ ಹೆಸರಿನಲ್ಲಿ ಸುಲಭವಾಗಿ ಮೋಸ ಹೋಗುತ್ತಿರುವುದು ಅಜ್ಞಾನದ ಪರಮಾವಧಿ ಎನ್ನಬಹುದು. ಬಳಸಿ ಬೀಸಾಡುವ ಹತ್ತು ರೂಪಾಯಿಗಳ ಪೆನ್ನನ್ನು ಹತ್ತು ಬಾರಿ ಬರೆದು ಖರೀದಿಸುವ ಜನ ಮತಾಂತರ ಆಗುವಾಗ ಸುಖಾಸುಮ್ಮನೆ ಹರಕೆಯ ಕುರಿಗಳಂತೆ ಅನ್ಯ ಧರ್ಮವನ್ನು ಅಪ್ಪಿ ಬಿಡುವುದು ಮಾತ್ರ ಹಾಸ್ಯಾಸ್ಪದ ಎನಿಸುತ್ತದೆ. ಧರ್ಮ ಬೋಧನೆಯ ಹೆಸರಿನಲ್ಲಿ ವ್ಯಾಪಾರಿಕರಣವೇ ನಡೆಯುತ್ತದೆ. ಇದು ಮಾನವ ಕಳ್ಳಸಾಗಾಣಿಕೆಗಿಂತ ಏನೂ ಕಡಿಮೆ ಇಲ್ಲ.

ರಾಜಕೀಯ ಪಕ್ಷಗಳಿಗೆ ಧರ್ಮ ಎಂಬುದು ಅಸ್ತಿತ್ವದ ನೆಲೆಯಾಗಿದೆ. ರಾಜಕೀಯದಲ್ಲಿ ಯಾವುದೇ ಧರ್ಮಪಾಲನೆ ಯಾವುದೇ ಕಾರಣಕ್ಕೂ ಆಗುವುದಿಲ್ಲ. ಆದರೆ ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡುತ್ತಿರುವುದು ಇಂದು ರಹಸ್ಯವಾಗಿ ಉಳಿದಿಲ್ಲ. ಬಹಿರಂಗವಾಗಿಯೇ ಪಕ್ಷಗಳು ಧರ್ಮಗಳ ಪರ ಹಾಗೂ ವಿರೋಧ ನಡೆಗಳನ್ನು ಪ್ರಕಟಿಸುತ್ತಿವೆ. ಸರ್ಕಾರಗಳು ಇಡೀ ದೇಶದ ಪ್ರಜೆಗಳನ್ನು ನಾಗರಿಕರಾಗಿ ನೋಡಬೇಕೆ ವಿನಃ ಧರ್ಮದ ಕನ್ನಡಕ ಧರಿಸಿ ಪ್ರತ್ಯೇಕಿಸಿ ನೋಡಬಾರದು. ಸಮಾಜದಲ್ಲಿ ಸಾಮರಸ್ಯ ಮೂಡಿಸುವಂತಹ ಕೆಲಸಗಳನ್ನು ರಾಜಕೀಯ ಮುಖಂಡರುಗಳು ಮಾಡಬೇಕು. ಆದರೆ ಇಂದು ವೇದಿಕೆಗಳಲ್ಲಿ ಧರ್ಮಗಳ ಕುರಿತಾಗಿ ಕಿಚ್ಚು ಹಚ್ಚುವಂತಹ ಪ್ರಚೋದನಕಾರಿ ಭಾಷಣಗಳನ್ನು ಮಾಡುತ್ತಾ, ಮಾಧ್ಯಮಗಳಿಗೆ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಾ ಸಮಾಜದಲ್ಲಿ ಅಶಾಂತಿ ಮೂಡುವಂತಹ ಕಾರ್ಯವನ್ನು ವ್ಯವಸ್ಥಿತವಾಗಿ ಮುಖಂಡರು ಮಾಡುತ್ತಿದ್ದಾರೆ. ಇದರಿಂದ ಅನೇಕ ಸಾವುನೋವುಗಳು ಸಂಭವಿಸುತ್ತವೆ. ಯಾರದೋ ಮಾತಿಗೆ ಅಮಾನುಷವಾಗಿ ಬಲಿಯಾಗುತ್ತಿರುವುದು ಮಾತ್ರ ಅಮಾಯಕರು. ಮುಖಂಡರುಗಳ ಮನೆಮಂದಿ ಮಾತ್ರ ಸುರಕ್ಷಿತವಾಗಿರುತ್ತಾರೆ. ಧರ್ಮದ ಹುಚ್ಚು ಹಚ್ಚಿಸಿಕೊಂಡಿರುವ ಸಾಮಾನ್ಯರು ಮಾತ್ರ ಪ್ರಚೋದನೆಗೆ ಬಲಿಯಾಗುತ್ತಿದ್ದಾರೆ.

ಗುಡಿಗೋಪುರಗಳಲ್ಲಿ ಸಲ್ಲಿಸುವ ಪೂಜೆಗಳು, ಪ್ರಾರ್ಥನೆಗಳಿಗೂ ಮನುಷ್ಯ ನಡೆದುಕೊಳ್ಳುತ್ತಿರುವುದಕ್ಕೂ ಒಂದಕ್ಕೊಂದು ಸಂಬಂಧವೇ ಇಲ್ಲ. ಮಂದಿರದಲ್ಲಿ ಶಾಂತಿಮಂತ್ರವನ್ನು ಸಾವಿರಾರು ಬಾರಿ ಹೇಳಿ ಅಲ್ಲಿಂದ ಹೊರಬಂದು ಅಶಾಂತಿಯನ್ನು ಹರಡಿದರೆ ಏನಿದೆ ಅರ್ಥ? ಎಲ್ಲ ಅನರ್ಥ ! ಏಕೆಂದರೆ ಇಂದು ನಡೆಯುತ್ತಿರುವ ಯುದ್ಧಗಳನ್ನು ನೋಡುತ್ತಿದ್ದರೆ ಧರ್ಮಗಳ ಧರ್ಮ ಎಲ್ಲಿ ಹೋಯಿತು ? ಎಂದು ಕೇಳುವಂತಾಗುತ್ತದೆ. ಮೈಸೂರಿನ ಕನ್ನಡ ಪ್ರಾಧ್ಯಾಪಕರಾದ ಡಾ.ಪ್ರಭುಸ್ವಾಮಿ ಅವರ ಒಂದು 'ಹೇಗೆ ನಂಬಲಿ ಗೆಳೆಯ' ಎಂಬ ಕವನ ಎಲ್ಲರಿಗೂ ಚಿಂತನೆ ಮೂಡಿಸುವಂತಿದೆ.

'ಧರ್ಮದ ತೆವಲಿಗಾಗಿ
ಬಂದೂಕಿನ ಬಾಯಿಗೆ
ಮುಗ್ಧ ಕಂದಮ್ಮಗಳು ಬಲಿಯಾಗುತ್ತಿರುವಾಗ
ಹೆಣ್ಣನ್ನು ಬೆತ್ತಲೆ ಮಾಡಿ ಮೆರವಣಿಗೆ ಮಾಡುತ್ತಿರುವಾಗ
ಎಲ್ಲಿ ಹೋದ ಗೆಳೆಯ ಆ ನಿನ್ನ ದೇವರು
ಇಸ್ರೇಲಿನಲ್ಲೋ ಪ್ಯಾಲಿಸ್ತೇನಿಯದಲ್ಲೋ
ಕಂದಮ್ಮಗಳ ಆಕ್ರಂದನದಲ್ಲೋ
ಆ ಹೆಣ್ಣಿನ ಯಾತನೆಯಲ್ಲೋ
ಎಲ್ಲಿ ಹುಡುಕಲಿ ಗೆಳೆಯ ಆ ನಿನ್ನ ದೇವರ?

ಧರ್ಮದ ಹೆಸರಿನಲ್ಲಿ ನಾಗರಿಕರು ನಿರುಮ್ಮಳವಾಗಿ ಬದುಕುವ ಹಕ್ಕನ್ನೇ ಇಂದು ಕಸಿಯಲಾಗುತ್ತಿದೆ. ದೇಶಗಳಿಗೆ ತನ್ನ ನಾಗರಿಕರ ಹಿತಾಸಕ್ತಿಗಿಂತ ಧರ್ಮ ಉಳಿಸುವ ಉಮೇದು ಹೆಚ್ಚಾಗಿದೆ. ಇನ್ನಾದರೂ ಧರ್ಮ ನೆತ್ತಿಗೇರದೆ ಹೃದಯದಲ್ಲಿ ನೆಲೆಸುವಂತಾಗಲಿ. ಧರ್ಮಗಳು ಶಾಂತಿ ನೆಲೆಸಲು ಶ್ರಮಿಸುವಂತಾಗಲಿ ಎಂದು ಹಾರೈಸೋಣ.

ಪದ ತಾಂಬೂಲ : ಭೂಮಿಯ ಹುಟ್ಟಿಗೆ ಧರ್ಮಗಳು ಕಾರಣವಾಗಿಲ್ಲ,
ಆದರೆ ಭೂಮಿಯ ನಾಶಕ್ಕೆ ಧರ್ಮಗಳು ಕಾರಣವಾಗಬಹುದು.

ದಸರಾ ಮುಗಿದರೂ ಮೈಸೂರಿಗೆ ಹರಿದು ಬಂದ ಜನ ಸಾಗರ



ಮೈಸೂರು, ಅ.29(ಎಸ್‌ಬಿಡಿ)– ದಸರಾ ಮಹೋತ್ಸವ ಮುಗಿದರೂ ಮೈಸೂರಿನಲ್ಲಿ ಜನಜಾತ್ರೆ ಇಂದೂ ಕೂಡ ಮುಂದುವರೆದಿದೆ.

ಆಕರ್ಷಕ ವಿದ್ಯುತ್ ದೀಪಾಲಂಕಾರ ವಿಸ್ತರಿಸಿರುವ ಹಿನ್ನೆಲೆಯಲ್ಲಿ ಸುತ್ತಮುತ್ತಲ ಜಿಲ್ಲೆಗಳಿಂದಲೂ ಹೆಚ್ಚು ಜನ ಮೈಸೂರಿಗೆ ಭೇಟಿ ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಾರಾಂತ್ಯ ದಿನ ಭಾನುವಾರ ರಾತ್ರಿ ನಗರದ ಹೃದಯ ಭಾಗದಲ್ಲಿ ಭಾರಿ ವಾಹನ ದಟ್ಟಣೆ ಉಂಟಾಗಿತ್ತು.

ವಿದ್ಯುತ್ ದೀಪಗಳಲ್ಲಿ ಕಂಗೊಳಿಸುವ ಅಂಬಾವಿಲಾಸ ಅರಮನೆ ಕಣ್ತುಂಬಿಕೊಳ್ಳಲು ಸಹಸ್ರಾರು ಮಂದಿ ಲಗ್ಗೆ ಇಟ್ಟಿದ್ದರಿಂದ ಇಲ್ಲಿ ಜನದಟ್ಟಣೆ ಹೆಚ್ಚಾಗಿತ್ತು. ಜೊತೆಗೆ ದಸರಾ ವಿದ್ಯುತ್ ದೀಪಾಲಂಕಾರ ನೋಡಲು ರಸ್ತೆಗಿಳಿದಿದ್ದರಿಂದ ಎಲ್ಲೆಡೆ ವಾಹನ ದಟ್ಟಣೆ ಉಂಟಾಗಿತ್ತು. ಜೊತೆಗೆ ದಸರಾ ವಸ್ತು ಪ್ರದರ್ಶನ ವೀಕ್ಷಣೆಗೂ ಸಾವಿರಾರು ಜನ ಬಂದಿದ್ದರು. ಹಾಗಾಗಿ ಅರಮನೆ ಸುತ್ತಲಿನ ರಸ್ತೆಗಳಲ್ಲಿ ವಾಹನಗಳ ಏಕಮುಖವಾಗಿ ಇರುವ ಸಾಲಿನಂತೆ ಒಂದರ ಹಿಂದೊಂದು ನಿಧಾನವಾಗಿ ಸಾಗುತ್ತಿದ್ದವು. ಇದರಿಂದ ವಾಹನ ಸವಾರರು ರೋಸಿಹೋದರೆ, ಪಾದಚಾರಿಗಳು ರಸ್ತೆ ದಾಟಲು ಹರಸಾಹಸಪಟ್ಟರು.

ಅರಮನೆ ಸುತ್ತಲಿನ ರಸ್ತೆಗಳ ಜೊತೆಗೆ ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜ ಅರಸು ರಸ್ತೆ, ವಿನೋಬಾ ರಸ್ತೆ, ಜೆಎಲ್‌ಬಿ ರಸ್ತೆ, ಅಶೋಕ ರಸ್ತೆ, ಚಾಮರಾಜ ಜೋಡಿ ರಸ್ತೆ, ಮೃಗಾಲಯ ರಸ್ತೆ ಸೇರಿದಂತೆ ಹಲವು ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ಕಾರುಗಳ ಸಂಚಾರ ಹೆಚ್ಚಾಗಿತ್ತು. ಪ್ರಮುಖ ಜಂಕ್ಷನ್ ಹಾಗೂ ವೃತ್ತಗಳಲ್ಲಿ ಸಂಚಾರ ಪೊಲೀಸರು ಧ್ವನಿವರ್ಧಕದ ಮೂಲಕ ವಾಹನ ಸವಾರರಿಗೆ ನಿರಂತರವಾಗಿ ಸೂಚನೆ ನೀಡುತ್ತಿದ್ದರು. ಸಂಚಾರ ನಿರ್ವಹಿಸುವಷ್ಟರಲ್ಲಿ ಹೈರಾಣಾದರು.

ಚಂದ್ರ ಗ್ರಹಣವಿದ್ದ ಕಾರಣ ಶನಿವಾರ ಸಂಜೆ ಚಾಮುಂಡಿಬೆಟ್ಟದ ದೇವಾಲಯ ತೆರೆದಿರಲಿಲ್ಲ. ಹಾಗಾಗಿ ಭಾನುವಾರ ಭಕ್ತರ ಸಂಖ್ಯೆ ಜಾಸ್ತಿಯಾದಂತಿತ್ತು. ಬೆಟ್ಟದ ರಸ್ತೆ ಹಾಗೂ ಅಲ್ಲಿನ ಪಾರ್ಕಿಂಗ್ ಸ್ಥಳದಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ಮೃಗಾಲಯದಲ್ಲೂ ವೀಕ್ಷಕರು ಹೆಚ್ಚಿದ್ದರು. ಮೈಸೂರಿನಿಂದ ಕೆಆರ್‌ಎಸ್‌ಗೆ ಹೋಗಿ ಬರುವ ವಾಹನಗಳೂ ಹೆಚ್ಚಾಗಿದ್ದವು. ಒಟ್ಟಾರೆ ದಸರಾ ಮುಗಿದು ಮೂರು ದಿನವಾದರೂ ಜನಜಾತ್ರೆ ಕಟ್ಟತ್ತು ಮಕ್ಕಳ ಆಟಿಕೆಗಳು, ತಿಂಡಿ ತಿನಿಸು, ಫಾಸ್ಟ್‌ಫುಡ್ ಇನ್ನಿತರ ವ್ಯಾಪಾರ ವಹಿವಾಟು ಕೂಡ ಜೋರಾಗಿತ್ತು.

ಕನ್ನಡ ರಾಜ್ಯೋತ್ಸವ(ನ.1) ರಜೆಯಲ್ಲೂ ವಿಪರೀತ ವಾಹನ ದಟ್ಟಣೆ ಸೃಷ್ಟಿಯಾಗುವ ಸಾಧ್ಯತೆ ಇದೆ. ದಸರಾ ವಿದ್ಯುತ್ ದೀಪಾಲಂಕಾರವನ್ನು ನ.4 ರವರೆಗೆ ವಿಸ್ತರಿಸಲಾಗಿದ್ದು, ಸುಗಮ ಸಂಚಾರ ಉದ್ದೇಶದಿಂದ ಸಂಜೆ ವೇಳೆಗೆ ಅರಮನೆ ಸುತ್ತ ಏಕಮುಖ ವಾಹನ ಸಂಚಾರ ಜಾರಿಯಲ್ಲಿರಲಿದೆ.

ಗಡಿ ಕ್ಯಾತೆ: ನ.1ರಂದು 'ಕರಾಳ ದಿನ' ಆಚರಣೆಗೆ ಎಂಇಎಸ್ ನಿರ್ಧಾರ

ಬೆಳಗಾವಿ, ಅ.29– ಗಡಿ ಜಿಲ್ಲೆ ಬೆಳಗಾವಿಯಲ್ಲಿ ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದ ಹಳೆಯದು. ಪ್ರತಿ ವರ್ಷ ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವ ಆಗಮಿಸುತ್ತಿದ್ದಂತೆ ನೆರೆಯ ಮಹಾರಾಷ್ಟ್ರ ಗಡಿ ಜಿಲ್ಲೆ ವಿವಾದಕ್ಕೆ ಸಂಬಂಧಿಸಿದಂತೆ ಕ್ಯಾತೆ ತೆಗೆಯುತ್ತಲೇ ಇರುತ್ತದೆ. ಅದರಂತೆ ಈ ಬಾರಿಯು ಕೂಡ ಮಹಾರಾಷ್ಟ್ರ ಏಕೀಕರಣ ಸಮಿತಿ(ಎಂಇಎಸ್) ವತಿಯಿಂದ ನ.1 ರಂದು ಕರಾಳ ದಿನಾಚರಣೆ ಆಚರಿಸಲು ನಿರ್ಧರಿಸಿದ್ದು, ಇದಕ್ಕೆ ಮಹಾರಾಷ್ಟ್ರ ಸಿಎಂ ಏಕನಾಥ ಶಿಂಧೆ ಬೆಂಬಲ ಸೂಚಿಸಿದ್ದಾರೆ.

ಈ ಕರಾಳ ದಿನಾಚರಣೆಗೆ ಪ್ರತಿನಿಧಿಗಳನ್ನು ಕಳಿಸುವುದಾಗಿ ಮಹಾರಾಷ್ಟ್ರ ಸಿಎಂ ಏಕನಾಥ ಶಿಂಧೆ ಹೇಳಿಕೆ ನೀಡಿದ್ದಾರೆ.

ನ.1 ರಂದು ಕರಾಳ ದಿನ ಆಚರಣೆ ಮಾಡದಂತೆ ಎಂಇಎಸ್ ಕಾರ್ಯಕರ್ತರಿಗೆ ಈಗಾಗಲೇ ಎಚ್ಚರಿಕೆ ನೀಡಲಾಗಿದೆ. ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಡಿಸಿ ನಿತೀಶ್ ಎಚ್ಚರಿಕೆ ನೀಡಿದ್ದಾರೆ.

ಮಹಾರಾಷ್ಟ್ರ ನಾಯಕರನ್ನು ಕರಾಳ ದಿನಾಚರಣೆಗೆ ಕಳುಹಿಸುವುದಾಗಿ ಸಿಎಂ ಶಿಂಧೆ ಹೇಳಿರುವ ಹಿನ್ನೆಲೆಯಲ್ಲಿ ಎಂಇಎಸ್ ಮುಖಂಡರು ಸಭೆ ಕರೆದು ಕರಾಳ ದಿನಾಚರಣೆ ಕುರಿತು ಚರ್ಚೆ ನಡೆಸಿದ್ದಾರೆ. ಬೆಳಗಾವಿ ಜಿಲ್ಲೆಯೊಳಗೆ ಸಂಸದ ಧೈರ್ಯಶೀಲ ಮಾನೆ, ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವರನ್ನು ಕರೆತರಲು ಯೋಜನೆ ಮಾಡಿಕೊಂಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜಾತಿಗಣತಿ ವರದಿ ಪ್ರಕಟಿಸಲು ದಸಂಸ ಆಗ್ರಹ



ಮೈಸೂರು,ಅ.29(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಕೂಡಲೇ ಜಾತಿ ಗಣತಿ ವರದಿ ಬಿಡುಗಡೆ ಮಾಡಿ, ಅದರ ಆಧಾರದ ಮೇಲೆ ಯೋಜನೆ ರೂಪಿಸಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ)ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ನಡೆಸಿದ ಜಾತಿ ಗಣತಿ ವರದಿಯನ್ನು ಇನ್ನೂ ಜಾರಿಗೊಳಿಸಿಲ್ಲ. ಇದೀಗ ಎರಡನೇ ಬಾರಿ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಈ ಹಿಂದೆ ನಡೆಸಿದ ಜಾತಿ ಗಣತಿ ವರದಿಯನ್ನು ಸ್ವೀಕರಿಸಿ, ಬಿಡುಗಡೆ ಮಾಡಬೇಕು. ಇದಕ್ಕೆ ಕೆಲ ಬಲಿಷ್ಠ ಜಾತಿಗಳು ವಿರೋಧ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ. ಒಂದು ವೇಳೆ ಯಾವುದಾದರೂ ಜಾತಿಗೆ ವರದಿಯಲ್ಲಿ ಅನ್ಯಾಯ ಆಗಿದ್ದರೆ ಅದನ್ನು ನಂತರ ಸರಿಪಡಿಸಬಹುದು. ಅದನ್ನು ಬಿಟ್ಟು ವರದಿ ಬಿಡುಗಡೆ ಮಾಡದಂತೆ ಹುನ್ನಾರ ನಡೆಸುತ್ತಿರುವುದು ಖಂಡನೀಯ ಎಂದು ತಿಳಿಸಿದರು.

ಪರಿಶಿಷ್ಟ ಜಾತಿ, ಪಂಗಡಗಳಿಗೆ ಮೀಸಲಿಟ್ಟ ಅನುದಾನವನ್ನು ಅವುಗಳಿಗೇ ಬಳಸಬೇಕು. ಕೇಂದ್ರ ಮಟ್ಟದಲ್ಲೂ ಇದೇ ರೀತಿಯ ಕಾನೂನು ರೂಪಿಸಬೇಕು. ಸುಳ್ಳು ಜಾತಿ ಪ್ರಮಾಣಪತ್ರ ಪಡೆದು ಸೌಲಭ್ಯ ಗಿಟ್ಟಿಸಿಕೊಂಡಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇನ್ನು, ಕೇಂದ್ರ ಸರ್ಕಾರ ಜಾರಿಗೆ ತರುವುದಾಗಿ ತಿಳಿಸಿರುವ ಮಹಿಳಾ ಮೀಸಲಾತಿಯನ್ನು ಮುಂದಿನ ಲೋಕಸಭಾ ಚುನಾವಣೆ ಬಳಿಕ ಮಾತ್ರವೇ ಜಾರಿಗೊಳಿಸಲಾಗುವುದೆಂದು ಹೇಳುತ್ತಿರುವುದು ಹಾಸ್ಯಾಸ್ಪದ. ಬದ್ಧತೆ ಇದ್ದಲ್ಲಿ ಮುಂದಿನ ಲೋಕಸಭಾ ಚುನಾವಣೆಯಲ್ಲಿಯೇ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಸಮಿತಿ ಸದಸ್ಯ ಈರೇಶ್ ಹಿರೇಹಳ್ಳಿ, ಬನ್ನಳ್ಳಿ ಸೋಮಣ್ಣ, ಮಲ್ಲಹಳ್ಳಿ ನಾರಾಯಣ ಉಪಸ್ಥಿತರಿದ್ದರು.



ಮೈಸೂರಿನ ವಿಜಯನಗರದ ಯೋಗಾ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ವಿಜಯದಶಮಿ ಕೊನೇ ದಿನ ನಡೆದ ಶಯನೋತ್ಸವದಲ್ಲಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸ್ ಭಕ್ತಾದಿಗಳಿಗೆ ಪ್ರಸಾದ ವಿತರಿಸಿದರು.

ಆರ್.ರಮೇಶ್ ನಿಧನ



ಮೈಸೂರು, ಅ.29– ಮೈಸೂರಿನ ಹೆಬ್ಬಾಳ್ 1ನೇ ಹಂತದ ನಿವಾಸಿ ಆರ್.ರಮೇಶ್(62) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗೋಕುಲಂನ ರುದ್ರಭೂಮಿಯಲ್ಲಿ ಇಂದು ಸಂಜೆ 7 ಗಂಟೆಗೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ನೆಕ್ಸಸ್ ಮಾಲ್ ಮೈಸೂರಿನಲ್ಲಿರುವ ಜಾಕಿ (Jockey) ಶೋರೂಂನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. (Part Time & Full Time) ಉತ್ತಮ ವೇತನ ಸೌಲಭ್ಯವಿರುತ್ತದೆ. ವಯಸ್ಸಿನ ಮಿತಿ–18 ರಿಂದ 30 ವರ್ಷ ಆಸಕ್ತರು ಸಂಪರ್ಕಿಸಿ:
8431588337

WANTED
KRISHI AAVISHKAAR
Pure Veg Restaurant, Mysore
* Chefs for Chinese, Indian, North and Organic dishes,
* Helping Assistants * House Keeping
Interested candidates please contact or whatsapp your resume to
Call : 8431344535

ಗೋವಾ ಪ್ರವಾಸ
ಹೊರಡುವ ದಿನಾಂಕ: 24–11–2023 (03 ದಿನಗಳು). ವೀಕ್ಷಿಸುವ ಸ್ಥಳಗಳು: ಭಾಗ ಬೀಚ್, ದೂಧ್ ಸಾಗರ್ ಜಲಪಾತ, ಕಲಂಗುಟ್ ಬೀಚ್, ಬಾಸಲಿಕ ಚರ್ಚ್, ಅಗೊಡ ಕೋಟೆ, ಮಂಗೇಶಿ ದೇವಸ್ಥಾನ ಮತ್ತು ನಾಗೇಶಿ ದೇವಸ್ಥಾನ, ಡಾಲ್ಫಿನ್ ಬೋಟ್, ಡಿಜೆ ಬೋಟ್. ಫ್ಯಾಮಿಲಿಗೆ ಪ್ರತ್ಯೇಕ ಎ.ಸಿ. ರೂಂ * ತಿಂಡಿ ಮತ್ತು ಊಟ * ಕಾಫೀ / ಟೀ, ಸ್ನಾಕ್ಸ್ * ಸ್ವಿಮ್ಮಿಂಗ್ ಪೂಲ್ * ಸೆಮಿ ಲಕ್ಷುರಿ ಬಸ್ಸಲ್ಲಿ ಪ್ರಯಾಣ * ಪುಶ್‌ಬ್ಯಾಕ್ ಸೀಟ್ಸ್, ವಿಡಿಯೋ ಕೋಚ್ ಮತ್ತು ಮ್ಯೂಸಿಕ್. ಮೇಲಿನ ಈ ಎಲ್ಲಾ ಸೌಲಭ್ಯಗಳು ಸೇರಿ ಒಬ್ಬರಿಗೆ 8,000 ರೂಪಾಯಿಗಳು ಮಾತ್ರ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 7022271023

ಬೇಕಾಗಿದ್ದಾರೆ
Receptionist ಹುದ್ದೆಗೆ ಕನ್ನಡ, ಇಂಗ್ಲೀಷ್, ಹಿಂದಿ ಹಾಗೂ ಕಂಪ್ಯೂಟರ್ ಗೊತ್ತಿರುವವರು ಮತ್ತು ಅನುಭವ ಇರುವ ರೂಂ ಬಾಯ್ಸ್ ತಕ್ಷಣ ಬೇಕಾಗಿದ್ದಾರೆ.
NEW SK Residency
ನಾಗನಹಳ್ಳಿ ಕ್ರಾಸ್, ಕೃಷಿ ವಿಶ್ವವಿದ್ಯಾನಿಲಯದ ಹತ್ತಿರ, ಮೈಸೂರು–ಬೆಂಗಳೂರು ರಸ್ತೆ, ಸರ್ವಿಸ್ ರಸ್ತೆ.
9611443107

ಸೈಟುಗಳು ಬೇಕಾಗಿದೆ
ಎಲ್ಲಾ ಅಳತೆಯ (MUDA) ಸೈಟುಗಳು ದಟ್ಟಗಳ್ಳಿ (ಕನಕದಾಸನಗರ) ವಿಜಯನಗರ, ದೇವನೂರು, ಪೊಲೀಸ್ ಬಡಾವಣೆ, ಲಾಲ್ ಬಹದ್ದೂರು ಶಾಸ್ತ್ರಿ ನಗರ, ಶಾಂತವೇರಿ ಗೋಪಾಲಗೌಡ ಹಾಗೂ ಜೆ.ಪಿ.ನಗರದಲ್ಲಿ ಬೇಕಾಗಿದ್ದಾರೆ.
ಗಾಂಜಾಂ ಪ್ರಾಪರ್ಟೀಸ್
ಮಾಲೀಕರು ಸಂಪರ್ಕಿಸಿ:
7411501819

ಬೇಕಾಗಿದ್ದಾರೆ
ಸ್ಕೀಲ್ ಪ್ರೋ ಸಲ್ಯೂಷನ್ಸ್ ಕಂಪನಿಯಲ್ಲಿ ಫೀಲ್ಡ್ ಆಫೀಸರ್ ಹುದ್ದೆಗೆ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಮೊಬೈಲ್ ಮತ್ತು ದ್ವಿಚಕ್ರ ವಾಹನ ಹೊಂದಿರಬೇಕು ಆಸಕ್ತರು ಸಂಪರ್ಕಿಸಬೇಕಾದ ವಿಳಾಸ: ಒಂಟಿಕೊಪ್ಪಲ್, ಮೈಸೂರು
9008604416
9880604416

HOUSE FOR RENT
(Vegetarians Only) 2BHK House First Floor available for Rent at Krishnamurthipuram, Mysore Near Krishnamurthipuram Post Office. Contact:
9448939404
9353561720

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

Rooms for Rent
With attached bath-rooms on monthly basis near Suburban Bus Stand. Contact:
Mob: 7619249709

WANTED
ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ.
Mob: 9845028614

ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಪುರುಷರು ಹಾಗೂ ಮಹಿಳೆಯರು ಉತ್ತಮ ವೇತನ ಹಾಗೂ ESI & PF ಸೌಲಭ್ಯವಿರುತ್ತದೆ. ಮೇಟಗಳ್ಳಿ, ಬೋಗಾದಿ, ಬೆಳವಾಡಿ ಸುತ್ತಮುತ್ತ ವಯೋಮಿತಿ– 30 ರಿಂದ 48 ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ ಪಾಸ್/ಪಿಯುಸಿ
9538886326,9538886328
9035269781,0821-4852002

SITE FOR SALE
Site No. 103, 30x40 North Face Mahalaxmi Layout Hebbal Industrial Area, Mysore (Bank Loan available)
9980898999

ಪೂರ್ವ ದಿಕ್ಕಿನ ಹೊಸ ಮನೆ ಮಾರಾಟಕ್ಕಿದೆ ಹಾಗೂ ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರಸ್ತೆ ಮತ್ತು ಶ್ರೀನಗರ ಹಿಂಭಾಗ, ಮೈಸೂರು
8050345574

V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

HOUSE FOR LEASE
Newly Built 2BHK Independent House, Fully Furnished with Solar @ Lalithadri Nagar, Near Ring Road, Behind Indian Oil Petrol Bunk
9964414484

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

Star Solar
Renewable Energy
JUST Easy EMI 19,499/- 200 Ltr
5/15 Years Guaranty
ಎಲ್ಲಾ ಕಂಪನಿಯ ಹಳೆಯ ಸೋಲಾರನ್ನು ಸರ್ವಿಸ್ ಮಾಡಿಕೊಡಲಾಗುವುದು.
Old system Exchange offer available
Manufacturing : Belawadi Industrial Sub,Mysore
9945616293 / 9449966293

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

ಹೋಲ್‌ಸೇಲ್ ದರದಲ್ಲಿ
ಜೀವಂತ ನಾಟಿ ಕೋಳಿ ಕೆ.ಜಿ. ರೂ. 260, ರೂ. 350, ರೂ. 580
ಗೌಡ್ರು ನಾಟಿಕೋಳಿ ಅಂಗಡಿ
ನಂ. 198/1, ಪಿ&ಟಿ ಕ್ವಾಟ್ರಸ್ ಮೇನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪ ಪಕ್ಕ, ಎನ್.ಆರ್. ಮೊಹಲ್ಲಾ, ಮೈಸೂರು–570 007
9448048576, 9632378020

ಬೇಕಾಗಿದ್ದಾರೆ
7ನೇ ಕ್ಲಾಸ್/ಫೇಲ್ ಆಗಿರುವ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
ಸಂಬಳ 12000/-
Ph.9380142144

ಬೇಕಾಗಿದ್ದಾರೆ
ಮೈಸೂರಿನ ಮೆಟಗಳ್ಳಿ ಹಾಗೂ ಹೆಬ್ಬಾಳ್ ಇಂಡಸ್ಟ್ರೀಯಲ್ ಏರಿಯಾದಲ್ಲಿ ಕೆಲಸ ಮಡಲು ITI ಪಾಸಗಿರುವ ಅನುಭವವಿರುವ Welder, Fittar, Electrician ಹಾಗೂ ಹೆಲ್ಪರ್ ಹುಡುಗರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 35 ವರ್ಷಗಳು
6361201110,6360469984
9731976148,9008912479

ನಿವೇಶನಕ್ಕೆ ಜಮೀನು ಮಾರಾಟಕ್ಕಿದೆ
ಕೊಡಗು ಜಿಲ್ಲೆ ಪೊನ್ನಂಪೇಟೆ ತಾಲ್ಲೂಕಿನ ಪೊನ್ನಂಪೇಟೆಯಲ್ಲಿ 4 ಎಕರೆ ಜಮೀನು ನಿವೇಶನಕ್ಕೆ ಮಾರಾಟಕ್ಕಿದೆ.
6363862247

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ನೇಮಕಾತಿ
ಖಾಲಿ ಹುದ್ದೆಗಳು
ಡಾಟಾ ಎಂಟ್ರಿ ಆಪರೇಟರ್ಸ್
Full time / Part time. ಸಂದರ್ಶನ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 3.00 ಹುದ್ದೆ–100
ವಿಠಲ್ ರೆಕಾರ್ಡ್ಸ್ ಪ್ರೈ.ಲಿ.
#42, ಜೆಸಿಕೆ ಇಂಡಸ್ಟ್ರಿಯಲ್ ಪಾರ್ಕ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ, ಮೈಸೂರು
8867064586

RV CONSTRUCTIONS
Sanction Plans, Sanction Plans Upload (E-submission)
Construction Plans (As per Vastu), Estimations
REASONABLE RATES
Office : 0821-2002063
7975110915
D.Subbaiah Road, Mysore-04

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT
Housekeeping	7th Standard

0821-2499188 / 9880186386

ಕಾರ್ನರ್ ಸೈಟ್ ಸೇಲ್
30x40 ಈಸ್ಟ್, ಫೇಸಿಂಗ್ ಏರ್‌ಪೋರ್ಟ್ ಹಿಂಭಾಗದ ರಸ್ತೆ ಮುಡಾ ಖಾತೆ, 32 ಲಕ್ಷ
ಡೈರೆಕ್ಟ್ ಓನರ್
9342123373

ಬಾಡಿಗೆಗೆ & ಭೋಗ್ಯಕ್ಕೆ
ಜೆ.ಪಿ.ನಗರದಲ್ಲಿ ಒಂದೇ ಕಟ್ಟಡದಲ್ಲಿ (ಬಿಲ್ಡಿಂಗ್) ಅಟ್ಯಾಚ್ ಬಾತ್ರೂಮ್ ಹೊಂದಿರುವ 8 ರೂಂಗಳು ಬಾಡಿಗೆಗೆ ಅಥವಾ P.G ನಡೆಸಲು ಬಾಡಿಗೆಗೆ ದೊರೆಯುತ್ತದೆ. 2BHK ಮನೆ ಬಾಡಿಗೆಗೆ/ಭೋಗ್ಯಕ್ಕೆ ದೊರೆಯುತ್ತದೆ. ಸ್ಥಳ: ಜೆ.ಪಿ.ನಗರ ಮೈಸೂರು
8296695765,7348843351

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
Mob: 7676844160

ಬೇಕಾಗಿದ್ದಾರೆ
1) ಹೌಸ್‌ಕೀಪಿಂಗ್ ಸೂಪರ್‌ವೈಸರ್ – 3 ಹುದ್ದೆ
2) ಹೋಟೆಲ್ ಇಂಡಸ್ಟ್ರೀಗೆ ಹೌಸ್‌ಕೀಪಿಂಗ್ ಸ್ಟಾಫ್ (ಮಹಿಳೆಯರು / ಪುರುಷರು) – 4 ಹುದ್ದೆ (ಹೋಟೆಲ್ ಇಂಡಸ್ಟ್ರೀಯಲ್ಲಿ ಅನುಭವವುಳ್ಳವರಿಗೆ ಮಾತ್ರ).
ದಿ ಕೋರಮ್ ಹೋಟೆಲ್
#2257/1, ವಿನೋಭಾ ರಸ್ತೆ, ಕಲಾಮಂದಿರದ ಹತ್ತಿರ, ಮೈಸೂರು.
9620274629, 9620274630

ಬೇಕಾಗಿದ್ದಾರೆ
ಹಿರಿಯ ಲೆಕ್ಕಾಧಿಕಾರಿ
ಹೆಸರಾಂತ ಸರ್ವಿಸ್ ಇಂಡಸ್ಟ್ರೀಗೆ ಕನಿಷ್ಠ 5–10 ವರ್ಷಗಳ ಅನುಭವ ಇರಬೇಕು. ಆಕರ್ಷಕ ವೇತನ.
8660685101 / 9611246016
Email: fhps2019@gmail.com

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
Mob: 7676844160

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
ಚಿಕ್ಕ ಮಗಳೂರಿನಲ್ಲಿ ಇರುವ ಬ್ಯಾಂಕ್ ಒಂದಕ್ಕೆ ಗನ್ ಮ್ಯಾನ್‌ಗಳಾಗಿ ಕೆಲಸ ಮಾಡಲು 3 ಜನ ಗನ್ ಮ್ಯಾನ್‌ಗಳು ತಕ್ಷಣ ಬೇಕಾಗಿದ್ದಾರೆ 8 ಗಂಟೆ ಪಾಳಿ 23 ಸಾವಿರ ಸಂಬಳವಿರುತ್ತದೆ. ತಕ್ಷಣ ಸಂಪರ್ಕಿಸಿ:
ಶ್ರೀಲತಾ: 9972130101
ಹರೀಶ್: 9663311557

ಮೈತ್ರಿ ಟ್ರಾವೆಲ್ಸ್
ಶಿರಡಿ ಪ್ರವಾಸ: 5 ದಿನಗಳು 22–11–2023 ಕೊಲ್ಹಾಪುರ, ಪಂಡರಾಪುರ, ತುಳಜಾ ಭವಾನಿ, ಶಿರಡಿ, ಶನಿಸಿಂಗಪುರ, ಎಲ್ಲೋರ ಮತ್ತು 3 ಜ್ಯೋತಿರ್ಲಿಂಗ ದರ್ಶನ
6360422209

ಕೊಳ್ಳೇಗಾಲದ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು.

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಸಂಪು, ಟ್ಯಾಂಕ್ ಕ್ಲೀನಿಂಗ್
ಸಂಪರ್ಕಿಸಿ:
8861612486

HOUSE FOR SALE
T. Narasipura Main Road, K.S.R.T.C. Badavane, near Chandrakantha Layout, #42, 30x40 site in MUDA approved. East door, 2 BHK one attached bedroom, with 12 pillars construction and borewell facility and quality materials construction. Bank loan available. Interested only call
8971379542, 9480421332

ಸೈಟು ಮಾರಾಟಕ್ಕಿದೆ
ಫಾರಂ ನಂ.3 ಖಾತ ಹೊಂದಿರುವ ನಿವೇಶನ ಕೆಬಿಎಲ್ ಬಡಾವಣೆಗೆ ಹೊಂದಿಕೊಂಡಿರುವ ಅಳತೆ 36x54 ದಿಕ್ಕು–ದಕ್ಷಿಣ, ದೇವೇಗೌಡ ಸರ್ಕಲ್ ಹತ್ತಿರ, ಮೈಸೂರು–ಬನ್ನೂರು ರಸ್ತೆ
9113991509
8123776343

DASARA OFFER
BUY 30x40 Sites @ Just Rs. 299/- Sqft and get IPHONE Free
7892027414

Turn Your Dream into Reality with LAVANYA CONSTRUCTION
Experience Unmatched Live Benefits;
- Absolute transparency in our work process
- Punctuality Guaranted; No Delay in work Completion
- Only Top-Tier quality Materials used
- Remarkably Competative Pricing
- Our ultimate Goal: Your complete Satisfaction

choose LAVANYA CONSTRUCTION for a Home that Exceeds Expectations!
8747808636

HOUSE FOR LEASE
1 BHK @ JP NAGARA
9972945638

100% TEAK WOOD FACTORY FINISH DOORS
@ DEPOT RATES
10 YEARS WARRANTY
www.ssbuildmart.com
9901291267
9845426862

ಶ್ರೀ ಗಣೇಶ್ ಗೋಲ್ಡ್ ಲೋನ್
ಸರ್ಕಾರದಿಂದ ನೋಂದಾಯಿತ ಸಂಸ್ಥೆ ನಮ್ಮಲ್ಲಿ ಎಲ್ಲಾ ವಿಧವಾದ ಚಿನ್ನಾಭರಣಗಳ ಮೇಲೆ ತಿಂಗಳಿಗೆ 1% ಬಡ್ಡಿದರಲ್ಲಿ ಲೋನ್ ಕೊಡಲಾಗುತ್ತದೆ. ಆಸಕ್ತರು ಸಂಪರ್ಕಿಸಿ: ವಿಳಾಸ: ಪೊಲೀಸ್ ಬೂತ್ ಸರ್ಕಲ್, ಜೆ.ಪಿ.ನಗರ, ಮೈಸೂರು
9743660797

ಸುವರ್ಣ ಅವಕಾಶ
ಮನೆಯಿಂದಲೇ ಕುಳಿತು ನಿಮ್ಮ ಬಿಡುವಿನ ಸಮಯದಲ್ಲಿ ಪಾರ್ಟ್ ಟೈಂ/ಫುಲ್ ಟೈಂ ಕೆಲಸ ಮಾಡುವ ಮೂಲಕ ಗಳಿಸಿ ವಾರಕ್ಕೆ ರೂ. 7000/–ರಿಂದ–9000/– ನಿವೃತ್ತಿ ಹೊಂದಿದವರಿಗೆ ಗೃಹಿಣಿಯರಿಗೆ, ವಿದ್ಯಾರ್ಥಿಗಳಿಗೆ ಯಾವುದೇ ವಯಸ್ಸಿನ ಮಿತಿ ಇಲ್ಲ, ಟೆಲಿ ಕಾಲಿಂಗ್, ಮೆಟೀರಿಯಲ್ ಪಿಕಪ್, ಪುಸ್ತಕ ಬರವಣಿಗೆ, ಫಾರಂ ಫಿಲ್ಲಿಂಗ್ ಪ್ಯಾಕಿಂಗ್ ಕೆಲಸ ಲಭ್ಯವಿದೆ.
9945788826

SITE WITH HOUSE FOR SALE
East facing site measuring 50x80, S/F MUDA Site "B" Block, J.P.Nagar, Near Vidyaranyapura Police Station for Sale. No brokers, Cheque Payment Only Contact B/W 10 am to 8 pm Only
9379322274
8762013549

SITES FOR SALE
MUDA Approved Sites 30x50- 50 Lakhs
Bank Loan Upto 75%
Near JSS/Police Layout T.Narasipura Road, Mysore
1.5 Kms from Ring Road
9900363084
8660105902

ಬೇಕಾಗಿದ್ದಾರೆ
ಹೋಂ ನರ್ಸಿಂಗ್ ಕೆಲಸ ಮೈಸೂರಿನ ಹೆಲ್ತ್ ಕೇರ್ ಸಂಸ್ಥೆಗೆ ಮಹಿಳೆಯರು, ಪುರುಷರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ: ಊಟ, ವಸತಿ, ಉಚಿತದೊಂದಿಗೆ ಸಂಬಳ: 12000–18000 (ಮೊದಲು ಬಂದವರಿಗೆ ಆದ್ಯತೆ)
9035113222

WANTED
2BHK House For Rent in around sspuram Jayanagar, K.M.Puram
9448048415

ಶ್ರೀ ನವಚೇತನ ಬಸವೇಶ್ವರ ಟ್ರಸ್ಟ್ (ರಿ)
ವಿಶೇಷ ಚೇತನರ ಶಾಲೆಗೆ ನುರಿತ ಶಿಕ್ಷಕರು ಬೇಕಾಗಿದ್ದಾರೆ. ಮಹಿಳಾ ಅಭ್ಯರ್ಥಿ. 1) ವಿದ್ಯಾರ್ಹತೆ ಮತ್ತು ಅನುಭವ ಉಳ್ಳವರು, ವಿಶೇಷ ಚೇತನ ಮಕ್ಕಳನ್ನು ನೋಡಿಕೊಳ್ಳಲು ಹಾಗೂ ಕಛೇರಿ ಕೆಲಸ ನಿರ್ವಹಿಸಲು MSW ಹಾಗೂ NGO ಹಾಗೂ ವಿಶೇಷ ಮಕ್ಕಳ ಸೇವೆ ಅನುಭವ ಇರುವವರಿಗೆ ಪ್ರಥಮ ಆದ್ಯತೆ
9845781727, 9886014851
ಸ್ಥಳ: ಶ್ರೀರಾಂಪುರ ನಿರ್ಮಲ ಶಾಲೆಯ ಪಕ್ಕ

Commercial Space Available
2500 Sqft Commercial Space in Bannimantap Hudco 1st Stage
9880554198
6360969400
Landmark : JSS Dental College

FOR SALE
1) 30x40 16 lakhs Hd kote road ready to registration bank loan 80%
2) 30x40 sites TNarasipura road saptamatruke layout attch
3) 30x40 east site Preethi layout srirampura
4) 40x60 N police layout
5) 40x60 N ring road facing uttanahalli near
6) 20x30 g+1 house srirampura

Prakruthi Properties
9538690359,9035990359

ಬೇಕಾಗಿದ್ದಾರೆ
LASSI SHOP ಭಾನವಿ ಆಸ್ಪತ್ರೆ ಎದುರು ಕುವೆಂಪುನಗರ ಮೈಸೂರು ಹುಡುಗರು Part Time/Full Timeಗೆ ಸ್ಯಾಂಡ್‌ವಿಚ್, ಜ್ಯೂಸ್ ಮಾಡಲು ಖುದ್ದಾಗಿ ಬನ್ನಿ ಮಂಗಳವಾರ ಬೆಳಿಗ್ಗೆ 11–30 ರಿಂದ ಸಂಜೆ 6ರವರೆಗೆ
9448054151

WANTED
Computer Faculty
MS OFFICE
TALLY, DTP,
PROGRAMMING
HARDWARE
Place: Nazerbad, Mysore
9686447743

HOUSE FOR SALE
30X40 Duplex at Srirampura
25x40 & 40x60 G & F at Ramakrishnanagar
30x40 & 30x50 Site at K.Hemmanahalli, Bogadi Road
9663136318

COMMERCIAL BUILDING FOR SALE
1st, 2nd, 3rd & 4th Floor 1200 Sq. Ring Road Ananda Nagar
9844713445
9066637156

ತಕ್ಷಣ ಬೇಕಾಗಿದ್ದಾರೆ
Experienced PHARMA AIDE
ಔಷಧಿಗಳ ಬಗ್ಗೆ ಅನುಭವವುಳ್ಳ ಸಹಾಯಕರು
For Medical Shop
9880587586

WANTED
2BHK House For Rent in Anand Nagar, Nivedita Nagar, T.K.Layout
8197310113

ಕೆಲಸಕ್ಕೆ ಬೇಕಾಗಿದ್ದಾರೆ
ಹೌಸ್ ಕೀಪಿಂಗ್, ಸೂಪರ್‌ವೈಸರ್, ಹೌಸ್‌ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಮತ್ತು ಹುಡುಗರು, ಸೆಕ್ಯೂರಿಟಿ ಗಾರ್ಡ್, ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. ಯಾವುದೇ ಶುಲ್ಕ ಇರುವುದಿಲ್ಲ ಉತ್ತಮ ಸಂಬಳ: +ESI+EPF
9482142207
8884286321,8884286123

ಶ್ರೀಮೂರ್ತಿ ಟೂರಿಸ್ಟ್
05–11–23 ಭಾನುವಾರ ತಲಕಾವೇರಿ ಭಾಗಮಂಡಲ, ಅಬ್ಬಿಫಾಲ್ (ತಿಂಡಿ, ಕಾಫೀ 1 ಊಟ ಸೇರಿದೆ)
ಮನೆ ಬಾಡಿಗೆಗೆ ಇದೆ
20x30 (Ground Floor) ರಾಮಕೃಷ್ಣನಗರ E&F Blockನಲ್ಲಿ (Veg Only)
9480733069

ಶಾದಿಗುರೂಜಿ.ಕಾಂ
ಎಲ್ಲಾ ಜಾತಿಯ ಸುಂದರ ಶ್ರೀಮಂತ ವಿದ್ಯಾವಂತ ವಧು–ವರರಿಗೆ ನೇರ ಸಂಪರ್ಕಿಸಿ:
6361740552

ಅಂಗಡಿಗೆ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸು – 18 ರಿಂದ 30 ವರ್ಷ
ಸಂಬಳ: ರೂ. 10000/– ರಿಂದ 14000/–
R.G. Royal Form Pvt.
2383, K-16, 6th Cross, Madhavachar Road, Nanjumalige, K.R.Mohalla, Mysore-04
8660132695

WANTED
Wanted Female Graduates for Montessori Pre-school in Bogadi
9113257683

ಕೇರಳ ಪ್ರವಾಸ
ಒಟ್ಟು 4 ದಿನಗಳು,
ಹೊರಡುವ ದಿನಾಂಕ: 25 November 2023
ನೋಡುವ ಸ್ಥಳಗಳು:
ಅನಂತ ಪದ್ಮನಾಭ ದೇವಸ್ಥಾನ, ಕೋವಲಂ ಬೀಚ್, ಜಟಾಯು ಅರ್ತ್ ಸೆಂಟರ್, ಗುರುವಾಯೂರು, ಅಲ್ಲಪೆ, ಕೊಚ್ಚಿನ್ ಮರಿನ್ ಡ್ರೈವ್, ಅತಿರಪಿಲ್ಲಿ ವಾಟರ್ ಫಾಲ್ಸ್, ಊಟ, ತಿಂಡಿ, ಕಾಫೀ/ಟೀ ಮತ್ತು ಮಿನರಲ್ ವಾಟರ್ ಸೇರಿರುತ್ತದೆ. ಫ್ಯಾಮಿಲಿಗೆ ಪ್ರತ್ಯೇಕ ರೂಮ್ ಇರುತ್ತದೆ.
ಎಲ್ಲಾ ಸೇರಿ ಒಬ್ಬರಿಗೆ 8000/– ರೂಪಾಯಿಗಳು
7022271023

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ ಸೋಮವಾರ 30 ಅಕ್ಟೋಬರ್ 2023

ರಾಜಕಾರಣದಲ್ಲಿ ಅದೃಷ್ಟವಿದ್ದರೆ ಏನಾದರೂ ಆಗಬಹುದು

ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್



ಮಂಡ್ಯ, ಅ.29– ರಾಜಕಾರಣದಲ್ಲಿ ಅದೃಷ್ಟ, ಅವಕಾಶ ಸಿಕ್ಕಿದರೆ ಏನಾದರೂ ಆಗಬಹುದು ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದರು.

ಭಾನುವಾರ ನಗರದ ರೈತ ಸಭಾಂಗಣದಲ್ಲಿ ಬಿ.ಬಸವರಾಜು ಅಭಿಮಾನಿ ಬಳಗದಿಂದ ನಡೆದ ಬಿ.ಬಸವರಾಜು ಅವರಿಗೆ ಅಭಿನಂದನೆ ಹಾಗೂ ಮೌನ ಚಿಂತಕ ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಬಸವರಾಜು ಅವರು ವಿದ್ಯಾರ್ಥಿ ದೆಸೆಯಲ್ಲೇ ನಾಯಕತ್ವ ಗುಣ ಬೆಳೆಸಿಕೊಂಡವರು. ಅವರಿಗೆ ರಾಜಕೀಯದ ತಿರುಳು ಇದ್ದಿದ್ದರಿಂದ ಹಾಗೂ ಜಿ.ಮಾದೇಗೌಡರ ಆಶೀರ್ವಾದ ಸಿಕ್ಕಿದ್ದರಿಂದ ರಾಜಕಾರಣದಲ್ಲಿ ಬೆಳೆಯುವ ಅವಕಾಶ ದೊರೆಯಿತು ಎಂದರು. ಭಾರತದಲ್ಲಿ ರಾಜಕಾರಣ ಸಾಮಾನ್ಯ ಜನರಲ್ಲಿ ಹಾಸು ಹೊಕ್ಕಿದೆ. ಆದ್ದರಿಂದ ರಾಜಕಾರಣ ನಿಲ್ಲುವುದಲ್ಲ. ರಾಜಕಾರಣದಲ್ಲಿ ಯಾವ ಸಂದರ್ಭದಲ್ಲಿ ಯಾರು ಏನು ಆಗುತ್ತಾರೋ ಗೊತ್ತಿಲ್ಲ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಾತನಾಡಿ, ಜಿ.ಮಾದೇಗೌಡರು ಬೆಳೆಸಿದ ನಾಯಕರಲ್ಲಿ ಬಿ.ಬಸವರಾಜು ಒಬ್ಬರು. ಜಿಲ್ಲಾ ಪರಿಷತ್ ಅಧ್ಯಕ್ಷರಾಗಿ ಬಸವರಾಜು ಅವರು ಜಿಲ್ಲೆಯಲ್ಲಿ ಸಾಕ್ಷರತಾ ಆಂದೋಲನ ಕೆಲಸ ಮಾಡಿದ್ದಾರೆ. ಮಂಡ್ಯಕ್ಕೆ ಕೃಷಿ ಕಾಲೇಜು ಹಾಗೂ ಪೆರಿಫರಲ್ ಕ್ಯಾನ್ಸರ್ ಕೇಂದ್ರ ತರುವಲ್ಲಿ ಕೆಲಸ ಮಾಡಿದ್ದಾರೆ. ಈ ರೀತಿಯಾಗಿ ಬಿ.ಬಸವರಾಜು ಕಾರ್ಯ ತತ್ಪರತೆ ಇಟ್ಟು ಕೆಲಸ ಮಾಡಿರುವ ಮೌನ ಸಾಧಕ ಎಂದ ಅವರು, ಜಿ.ಮಾದೇಗೌಡರು ಪ್ರೀತಿಸುತ್ತಿದ್ದ ಕೆಲವು ಮಂದಿಗಳಲ್ಲಿ ಬಿ.ಬಸವರಾಜು ಅವರು ಸಹ ಒಬ್ಬರು ಎಂದು ಬಣ್ಣಿಸಿದರು.

ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಮಾತನಾಡಿ, ಜಿಲ್ಲೆಯ ಜನ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡುತ್ತಿಲ್ಲ. ಈ ಬಾರಿ ಮಳೆ ಇಲ್ಲ. ನೀರು ಇಲ್ಲ. ಹೀಗಾಗಿ ಕೃಷಿ ಮಾಡಲು ಸಾಧ್ಯವಿಲ್ಲ. ಜಿಲ್ಲೆಯ ಜನ ದುಃಖದಲ್ಲಿದ್ದೇವೆ. ಇಂತಹ ಸನ್ನಿವೇಶಗಳಲ್ಲಿ ಮಂಡ್ಯ ಜಿಲ್ಲೆ ಜನ ಜೀವನ ಪ್ರಕ್ರಿಯೆಯನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂದರು.

ಕೃಷಿಯಲ್ಲಿ ಬದಲಾವಣೆ ತರದೆ ಹೋದರೆ ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲ. ಹೊಸ ಚಿಂತನೆಗಳನ್ನು ಕಂಡುಕೊಳ್ಳಬೇಕು. ಆದ್ದರಿಂದ ಇಂತಹ ಸಾಹಿತ್ಯದ ಕೃತಿಗಳನ್ನು ಓದುವುದರಿಂದ ವಿಚಾರಗಳು ಸಿಗುತ್ತವೆ ಎಂದರು. ಇದೇ ವೇಳೆ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಬಿ.ಬಸವರಾಜು ಹಾಗೂ ಲಲಿತಮ್ಮ ಬಸವರಾಜು ಅವರನ್ನು ಅಭಿನಂದಿಸಲಾಯಿತು.

ವೇದಿಕೆಯಲ್ಲಿ ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಶಾಸಕ ಕೆ.ಎಂ.ಉದಯ್‌ಗೌಡ, ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಮೌನ ಚಿಂತಕ ಕೃತಿ ಕರ್ತೃ, ಮಹಿಳಾ ಸರ್ಕಾರಿ ಕಾಲೇಜು ಸಹಾಯಕ ಪ್ರಾಧ್ಯಾಪಕ ಡಾ.ಎಸ್.ಶಿವರಾಮು ಸೇರಿದಂತೆ ಇತರರಿದ್ದರು.

ಕೆ.ಆರ್.ಪೇಟೆಯಲ್ಲಿ ಪುನೀತ್ ಪುಣ್ಯಸ್ಮರಣೆ



ಕೆ.ಆರ್.ಪೇಟೆ, ಅ.29– ಕರ್ನಾಟಕ ರತ್ನ ಪವರ್‌ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಅವರ 2ನೇ ಪುಣ್ಯಸ್ಮರಣೆಯನ್ನು ಪಟ್ಟಣದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪಟ್ಟಣದ ಶಿಕ್ಷಕರ ಭವನದ ಆವರಣದಲ್ಲಿ ರೇಣುಕಾ ಎಲ್ಲಮ್ಮದೇವಿ ಟ್ರಸ್ಟ್ ಹಾಗೂ ಆರ್ಯ ಈಡಿಗರ ಸಂಘದ ಸದಸ್ಯರು 15 ಅಡಿ ಎತ್ತರದ ಪುನೀತ್ ಭಾವಚಿತ್ರಕ್ಕೆ ಹೂ, ಹಣ್ಣು ಸಮರ್ಪಿಸಿ ಗೌರವ ಸಲ್ಲಿಸಿದರು.

ಈ ವೇಳೆ ಟ್ರಸ್ಟ್ ಅಧ್ಯಕ್ಷ ಡಾ.ವೆಂಕಟಾಚಲ, ಗೌರವಾಧ್ಯಕ್ಷ ರಾಮಸ್ವಾಮಿ, ಗೌರವ ಸಲಹೆಗಾರ ನಂಜುಂಡಪ್ಪ, ಶಿಕ್ಷಕ ಅನಂತು, ಮೂರ್ತಿ, ಮಂಜುನಾಥ್, ಪ್ರಕಾಶ್, ಚಂದ್ರೇಗೌಡ, ವಾರ್ಡನ್ ಚಂದ್ರು ಸೇರಿದಂತೆ ಹಲವರು ಸಾರ್ವಜನಿಕರಿಗೆ ಅನ್ನದಾನ ಮಾಡುವ ಮೂಲಕ ಪುನೀತ್ ಸೇವೆಯನ್ನು ಗುಣಗಾನ ಮಾಡಿದರು.

ಟ್ರಸ್ಟ್ ಗೌರವಾಧ್ಯಕ್ಷ ರಾಮಸ್ವಾಮಿ ಮಾತನಾಡಿ, ಪುನೀತ್ ಅವರು ಕೋಟ್ಯಾಂತರ ಅಭಿಮಾನಿಗಳ ಮನ, ಮನೆಗಳಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಯುವಕರು ಪುನೀತ್ ಅವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕು ಎಂದರು.



ಅಪ್ಪು ಯುವ ಸಾಮ್ರಾಜ್ಯ ಘಟಕ: ಪುನೀತ್ ಯುವ ಸಾಮ್ರಾಜ್ಯ ವತಿಯಿಂದ ಪಟ್ಟಣದ ಎಂ.ಕೆ.ಬೊಮ್ಮೇಗೌಡ ವೃತ್ತದಲ್ಲಿರುವ ಪುನೀತ್ ಕಂಚಿನ ಪ್ರತಿಮೆಗೆ ಬೃಹತ್ ಹಾರ ಹಾಕಿ ನಮನ ಸಲ್ಲಿಸಲಾಯಿತು.

ಬಳಿಕ ಅಭಿಮಾನಿಗಳು ಹಾಗೂ ಸಾರ್ವಜನಿಕರಿಗೆ ಡಾ.ಪುನೀತ್ ರಾಜ್‌ಕುಮಾರ್ ಅವರಿಗೆ ಪ್ರಿಯವಾದ ಕೋಳಿ ಸಾಂಬಾರ್ ಊಟ ವಿತರಿಸಲಾಯಿತು. ಈ ವೇಳೆ ಅಪ್ಪು ಯುವ ಸಾಮ್ರಾಜ್ಯ ತಾಲೂಕು ಘಟಕದ ಅಧ್ಯಕ್ಷ ಕೆಎನ್.ಮಹೇಶ್, ಪದಾಧಿಕಾರಿಗಳಾದ ಯೋಗೇಶ್, ರಾಘು, ದಿಲೀಪ್, ಮೋನಿಕಾ, ದಿಲೀಪ್, ಹರೀಶ್, ಬೇಕರಿ ಹರೀಶ್, ಅಶೋಕ್, ಗೋವರ್ಧನ್, ರೋಹಿತ್, ಕಾಂತರಾಜು, ಜಗದೀಶ್, ದೇವರಾಜು, ತಾಲೂಕು ಜಯ ಕರ್ನಾಟಕ ಸಂಘಟನೆ ಅಧ್ಯಕ್ಷ ಹೆಚ್.ಆರ್. ಸೋಮಶೇಖರ್, ನಿವೃತ್ತ ಶಿಕ್ಷಕ ಶಿವಣ್ಣ, ಗ್ಯಾಸ್ ರಾಜ ಶೇಖರ್, ಲೆನಿನ್ ಲೋಕೇಶ್ ಇನ್ನಿತರರಿದ್ದರು.



ಶ್ರೀರಂಗಪಟ್ಟಣದ ಕಾವೇರಿ ನದಿ ಸ್ನಾನಘಟ್ಟದ ಬಳಿ ಯುವ ಬ್ರಿಗೇಡ್ ವತಿಯಿಂದ ಆಯೋಜಿಸಿದ್ದ ಕಾವೇರಿ ಆರತಿ ವಿಜೃಂಭಣೆಯಿಂದ ನಡೆಯಿತು.

ಪಾಂಡವಪುರದಲ್ಲಿ ವಾಲ್ಮೀಕಿ ಜಯಂತಿ

ಪಾಂಡವಪುರ, ಅ.29– ಪಟ್ಟಣದ ಹಳೇ ಬಸ್ ನಿಲ್ದಾಣದಲ್ಲಿರುವ ಗಣಪತಿ ಪೆಂಡಾಲ್‌ನಲ್ಲಿ ಶ್ರೀಸಿದ್ಧಿ ವಿನಾಯಕ ಸೇವಾ ಸಮಿತಿ ಹಾಗೂ ಕಸಾಪ ವತಿಯಿಂದ ಶನಿವಾರ ರಾತ್ರಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಶ್ರೀಸಿದ್ಧಿ ವಿನಾಯಕ ಸೇವಾ ಸಮಿತಿ ಅಧ್ಯಕ್ಷ ಸುಬ್ರಹ್ಮಣ್ಯ, ಕಸಾಪ ಅಧ್ಯಕ್ಷ ಮೇನಾಗರ ಪ್ರಕಾಶ್, ಉಪಾಧ್ಯಕ್ಷ ಶಿವರಾಜು ಇನ್ನಿತರರಿದ್ದರು.

ನಾಳೆ ಪತ್ರಕರ್ತರ ಅಂತರ ಜಿಲ್ಲಾ ಸಮ್ಮೇಳನ

ಮಂಡ್ಯ, ಅ.29– ಶ್ರೀಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಮಂಡ್ಯ ಜಿಲ್ಲಾ ಘಟಕದ ಸಹಯೋಗದಲ್ಲಿ ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ತುಮಕೂರು ಹಾಗೂ ರಾಮನಗರ ಜಿಲ್ಲೆಗಳ ಕಾರ್ಯನಿರತ ಪತ್ರಕರ್ತರ ಅಂತರ ಜಿಲ್ಲಾ ಸಮ್ಮೇಳನ ಅ.31ರಂದು ಬೆಳಿಗ್ಗೆ 10 ಗಂಟೆಗೆ ನಗರದ ಎಂ.ಸಿ.ರಸ್ತೆಯ ಸಮರವ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ನಡೆಯುವ ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಮಂಡ್ಯ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಸಿ.ಮಂಜುನಾಥ್ ವಹಿಸಲಿದ್ದಾರೆ ಎಂದು ಸಂಘದ ಜಿಲ್ಲಾಧ್ಯಕ್ಷ ಕೆ.ಸಿ.ಮಂಜುನಾಥ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಜೀವ ವಿಮಾ ಪಾಲಿಸಿ ಬಾಂಡ್‌ಗಳ ವಿತರಿಸಲಿದ್ದು, ಹಿರಿಯ ಪತ್ರಕರ್ತರಾದ ಹೆಚ್.ಆರ್.ರಂಗನಾಥ್ ಮತ್ತು ಸುದರ್ಶನ ಚೆನ್ನಂಗಿಹಳ್ಳಿ ಅವರು ಹಿತನುಡಿ ನುಡಿಯಲಿದ್ದಾರೆ. ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ರಾಜ್ಯ ಕಾರ್ಯದರ್ಶಿ ಜಯರಾಮ್, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಪಿ.ರವಿಕುಮಾರ್ ಗಣಿಗ, ರಮೇಶ್ ಬಾಬು ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ವಾರ್ತಾ ಮತ್ತು ಸಂಪರ್ಕ ಇಲಾಖೆ ಕಾರ್ಯದರ್ಶಿ ಎನ್.ಜಯರಾಮ್, ಸಂಘದ ರಾಜ್ಯ ಕಾರ್ಯದರ್ಶಿ ಸೋಮಶೇಖರ್ ಕೆರಗೋಡು, ರಾಷ್ಟ್ರೀಯ ಸಮಿತಿ ಅಧ್ಯಕ್ಷ ಹೆಚ್.ಬಿ.ಮದನ್‌ಗೌಡ, ಸದಸ್ಯ ಪಿ.ಜೆ.ಚೈತನ್ಯ ಕುಮಾರ್, ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ, ರವಿ ಬೋಜೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಎನ್.ಯತೀಶ್ ಹಾಗೂ ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್ ಭಾಗವಹಿಸಲಿದ್ದಾರೆ ಎಂದರು.

ಬೆಳಿಗ್ಗೆ 11 ಗಂಟೆಗೆ ಕೃಷಿ ಕುರಿತು ಉಪನ್ಯಾಸ ನಡೆಯಲಿದ್ದು, ಜನತಾ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಕೆ.ಎಸ್.ವಿಜಯ್ ಆನಂದ್ ಉದ್ಘಾಟಿಸುವರು. ಬಾಗಲಕೋಟೆ ತೋಟಗಾರಿಕೆ ಇಲಾಖೆ ಮತ್ತು ಕೃಷಿ ಕಾಲೇಜು ನಿವೃತ್ತ ರಿಜಿಸ್ಟ್ರಾರ್ ಎ.ಬಿ.ಪಾಟೀಲ್ ಅವರು ವಿಷಯ ಮಂಡನೆ ಮಂಡಿಸಲಿದ್ದು, ವಿಷಯ ಮಂಡನೆಯನ್ನು ರಾಣಿ ಚಂದ್ರಶೇಖರ್ ಪ್ರಸ್ತಾವನೆ ಮಾಡುವರು ಎಂದರು. ಮಧ್ಯಾಹ್ನ 3 ಗಂಟೆಗೆ ಮಾಧ್ಯಮ ಕ್ಷೇತ್ರದಲ್ಲಿ ಮೌಲ್ಯವೃದ್ಧಿಯಲ್ಲಿ ಪತ್ರಕರ್ತರ ಪಾತ್ರ ಕುರಿತು ಮಾಧ್ಯಮ ಉಪನ್ಯಾಸ ನಡೆಯಲಿದ್ದು, ಪತ್ರಕರ್ತ ಕೆ.ಎನ್.ಚನ್ನೇಗೌಡ ಉದ್ಘಾಟಿಸಿ ವಿಷಯ ಮಂಡಿಸುವರು. ಸಂಘದ ರಾಜ್ಯ ಕಾರ್ಯದರ್ಶಿ ಜಿ.ಸಿ.ಲೋಕೇಶ್, ಪತ್ರಕರ್ತ ಕೆ.ನರಸಿಂಹಮೂರ್ತಿ ವಿಷಯ ಮಂಡನೆ ಮಾಡುವರು ಎಂದರು.

ಸಮಾರೋಪ: ಸಂಜೆ 4 ಗಂಟೆಗೆ ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಮಾರೋಪ ಸಮಾರಂಭ ನಡೆಯಲಿದ್ದು, ಸಂಘದ ಜಿಲ್ಲಾಧ್ಯಕ್ಷ ಕೆ.ಸಿ.ಮಂಜುನಾಥ್ ಅಧ್ಯಕ್ಷತೆ ವಹಿಸುವರು. ಪತ್ರಕರ್ತ ಕೆ.ಎನ್.ಚನ್ನೇಗೌಡ ಸಮಾರೋಪ ನುಡಿಯನ್ನಾಡುವರು. ಹಿರಿಯ ಪತ್ರಕರ್ತ ಪಿ.ರಾಮಯ್ಯ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ಅವರನ್ನು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅಭಿನಂದಿಸುವರು ಎಂದರು. ಶಾಸಕ ಹೆಚ್.ಟಿ.ಮಂಜು, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ ಮಾಜಿ ಶಾಸಕರಾದ ಎ.ಎಸ್.ರವೀಂದ್ರ ಶ್ರೀಕಂಠಯ್ಯ, ಸುರೇಶ್‌ಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ ಇತರರು ಭಾಗವಹಿಸುವರು ಎಂದರು. ಗೋಷ್ಠಿಯಲ್ಲಿ ಸಂಘದ ರಾಜ್ಯ ನಿರ್ದೇಶಕ ಸಿ.ಎನ್.ಮಂಜುನಾಥ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ನವೀನ್‌ಕುಮಾರ್, ಉಪಾಧ್ಯಕ್ಷ ರವಿ, ಕಾರ್ಯದರ್ಶಿ ಮಂಜುಳಾ, ಖಜಾಂಚಿ ನಂಜುಂಡಸ್ವಾಮಿ ಹಾಜರಿದ್ದರು.

ನದಿಗೆ ಹಾರಿ ಮಹಿಳೆ ಆತ್ಮಹತ್ಯೆ



ಶ್ರೀರಂಗಪಟ್ಟಣ, ಅ.29– ನದಿಗೆ ಹಾರಿ ಮಹಿಳೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕೆಆರ್‌ಎಸ್‌ನ ಬೃಂದಾವನ ಬಳಿ ಭಾನುವಾರ ನಡೆದಿದೆ. ಮೈಸೂರಿನ ನಂಜು ನಗರದ ನಿವಾಸಿ ನೂರ್ ಎಂಬುವರ ಪತ್ನಿ ಸಾದ(49) ಆತ್ಮಹತ್ಯೆ ಮಾಡಿಕೊಂಡವರು. ಇತ್ತೀಚೆಗೆ ಸಾದ ಅವರ ತಂದೆ ಮೃತಪಟ್ಟಿದ್ದರು. ಇದರಿಂದ ಖಿನ್ನತೆಗೆ ಒಳಗಾಗಿದ್ದರು ಎನ್ನಲಾಗಿದೆ. ಭಾನುವಾರ ಬೆಳಿಗ್ಗೆ ಮೈಸೂರಿನಿಂದ ಕೆಆರ್‌ಎಸ್‌ಗೆ ಆಗಮಿಸಿದ್ದ ಅವರು ಬೃಂದಾವನದಲ್ಲಿ ಸುತ್ತಾಡಿ ಬಳಿಕ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜಶೇಖರ ಮೂರ್ತಿ ನಿಧನ



ಕೆ.ಆರ್.ಪೇಟೆ, ಅ.29– ಪಟ್ಟಣದ ಚೆಸ್ಕಾಂ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರಾಜಶೇಖರ ಮೂರ್ತಿ(55) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಸಿಂಗಮಾರನಹಳ್ಳಿ ಪಿಡಿಓ ಮಂಜುಳಾ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೈಸೂರಿನ ಆಲನಹಳ್ಳಿಯಲ್ಲಿ ಅ.30ರಂದು ಸೋಮವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

2023ನೇ ಸಾಲಿನ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ



ಬೆಂಗಳೂರು, ಅ.29–2023ನೇ ಸಾಲಿನ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಆಯ್ಕೆಯಾಗಿದ್ದ 8 ಮಂದಿ ಸಾಧಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಮುಖ್ಯಮಂತ್ರಿಗಳು, ಮಹರ್ಷಿ ವಾಲ್ಮೀಕಿ ಪ್ರಶಸ್ತಿಗಳನ್ನು ಸಾಧಕರಿಗೆ ಪ್ರದಾನ ಮಾಡಿದರು.

ನ್ಯಾಯಾಂಗ ಕ್ಷೇತ್ರದಿಂದ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎನ್.ವೈ ಹನುಮಂತಪ್ಪ, ಧಾರ್ಮಿಕ ಕ್ಷೇತ್ರದಿಂದ ಮಹಾದೇವಮ್ಮ, ಶಿಕ್ಷಣ ಕ್ಷೇತ್ರದಿಂದ ರಾಮಣ್ಣ ಮಹಾದೇವ ಗಸಿ, ಸಮಾಜ ಸೇವೆ ಕ್ಷೇತ್ರದಿಂದ ಜಿ.ಓ.ಮಹಾಂತಪ್ಪ, ಸಾಮಾಜಿಕ ಸಂಘಟನೆ ವಲಯದಿಂದ ಸೋಮಣ್ಣ, ವೈದ್ಯಕೀಯ ಕ್ಷೇತ್ರದಿಂದ ಶಾರದ ಪ್ರಭು ಹುಲಿ ನಾಯಕ, ಸಾಹಿತ್ಯ ಕ್ಷೇತ್ರದಿಂದ ಸುಕನ್ಯಾ ಮಾರುತಿ ಹಾಗೂ ರಂಗಭೂಮಿಯಿಂದ ಸುಜಾತಮ್ಮ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ರಾಜನಹಳ್ಳಿ ಗುರು ಪೀಠದ ವಾಲ್ಮೀಕಿ ಪ್ರಸನ್ನಾನಂದಪುರಿ ಸ್ವಾಮೀಜಿ, ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಕೆ.ಎನ್.ರಾಜಣ್ಣ, ಸತೀಶ್ ಜಾರಕಿಹೊಳಿ, ಬಿ.ನಾಗೇಂದ್ರ, ಸಿಎಂ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಮಾಜಿ ಸಚಿವ ಆಂಜನೇಯ, ಮಾಜಿ ಸಂಸದ ಉಗ್ರಪ್ಪ ಹಾಗೂ ವಾಲ್ಮೀಕಿ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಎ.ಆರ್. ಯಶಸ್ವಿನಿಗೆ ಪಿಎಚ್.ಡಿ



ಮೈಸೂರು, ಅ.29– ಡಾ. ಡಿ.ಆರ್. ಸರ್ವಮಂಗಳ ಅವ'ರ' ಮಾರ್ಗದರ್ಶನದಲ್ಲಿ ಎ.ಆರ್. ಯಶಸ್ವಿನಿ ಅವರು ಸಾರ್ವಜನಿಕ ಶಿಕ್ಷಣ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧ'ವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಒಂದನೇ ಪುಟದಿಂದ

ವೆಬ್‌ಸೈಟ್ ಸದ್ಯದಲ್ಲೇ ಆರಂಭ

ಇಂದಿರಾ ಗಾಂಧಿ ಪುಣ್ಯತಿಥಿ: ಪ್ರಧಾನಿ ಮೋದಿಯವರು ಅಕ್ಟೋಬರ್ 31 ರಂದು ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಪುಣ್ಯತಿಥಿ ಕೂಡ ಆಗಿದೆ, ಅವರಿಗೆ ನನ್ನ ಭಾವಪೂರ್ಣ ಶ್ರದ್ಧಾಂಜಲಿಯನ್ನೂ ಸಲ್ಲಿಸುತ್ತೇನೆ. ಭಾರತವು ತನ್ನ ಸಂಸ್ಕೃತಿಯನ್ನು ಉಳಿಸುವ ಪ್ರತಿಯೊಂದು ಪ್ರಯತ್ನದ ಬಗ್ಗೆ ಹೆಮ್ಮೆಪಡುತ್ತದೆ, ಇದು ನಮ್ಮ ರಾಷ್ಟ್ರೀಯ ಏಕತೆಯನ್ನು ಬಲಪಡಿಸುತ್ತದೆ ಮಾತ್ರವಲ್ಲದೆ ದೇಶದ ಹೆಸರು, ದೇಶದ ಗೌರವ, ಎಲ್ಲವನ್ನೂ ಹೆಚ್ಚಿಸುತ್ತದೆ ಎಂದು ಹೇಳಿದರು.

MYBharat ಸಂಸ್ಥೆ: ವಿವಿಧ ರಾಷ್ಟ್ರ ನಿರ್ಮಾಣ ಕಾರ್ಯಕ್ರಮಗಳಲ್ಲಿ ಸಕ್ರಿಯ ಪಾತ್ರ ವಹಿಸಲು ಯುವಕರಿಗೆ ಅವಕಾಶವನ್ನು ಒದಗಿಸಲು ಮೈ ಭಾರತ್ ಸಂಸ್ಥೆಯನ್ನು ಪ್ರಾರಂಭಿಸಲಾಗುವುದು ಎಂದು ಪಿಎಂ ಘೋಷಿಸಿದರು. ಅಕ್ಟೋಬರ್ 31 ರಂದು ಅತ್ಯಂತ ದೊಡ್ಡ ರಾಷ್ಟ್ರವ್ಯಾಪಿ ಸಂಘಟನೆಯ ಅಡಿಪಾಯವನ್ನು ಹಾಕಲಾಗುತ್ತದೆ. ಅದು ಕೂಡ ಸರ್ದಾರ್ ಸಾಹೇಬ್ ಅವರ ಜನ್ಮದಿನದಂದು. ಈ ಸಂಸ್ಥೆಯ ಹೆಸರು – ಮೈ ಯಂಗ್ ಇಂಡಿಯಾ, ಅಂದರೆ MYBharat. MYBharat ಸಂಸ್ಥೆಯು ಭಾರತದ ಯುವಜನರಿಗೆ ವಿವಿಧ ರಾಷ್ಟ್ರ ನಿರ್ಮಾಣ ಕಾರ್ಯಕ್ರಮಗಳಲ್ಲಿ ಸಕ್ರಿಯ ಪಾತ್ರ ವಹಿಸಲು ಅವಕಾಶವನ್ನು ಒದಗಿಸುತ್ತದೆ ಎಂದು ಅವರು ಹೇಳಿದರು.

ನ.15ರಂದು ಭಾರತವು ಬುಡಕಟ್ಟು ಹೆಮ್ಮೆಯ ದಿನವನ್ನು ಆಚರಿಸಲಿದೆ ಎಂದು ಮೋದಿ ಘೋಷಿಸಿದರು. ಈ ವಿಶೇಷ ದಿನವು ಲಾರ್ಡ್ ಬಿರ್ಸಾ ಮುಂಡಾ ಅವರ ಜನ್ಮ ವಾರ್ಷಿಕೋತ್ಸವವಾಗಿದೆ. ಭಗವಾನ್ ಬಿರ್ಸಾ ಮುಂಡಾ ನಮ್ಮೆಲ್ಲರ ಹೃದಯದಲ್ಲಿ ನೆಲೆಸಿದ್ದಾರೆ. ಅವರ ಜೀವನದಿಂದ ನಾವು ನಿಜವಾದ ಧೈರ್ಯ ಮತ್ತು ಒಬ್ಬರ ನಿರ್ಣಯದ ಮೇಲೆ ದೃಢವಾಗಿ ನಿಲ್ಲುವುದರ ಅರ್ಥವೇನು ಎಂದು ಕಲಿಯಬಹುದು ಎಂದರು.

ಗೋವಿಂದ ಗುರೂಜಿ: ಅಕ್ಟೋಬರ್ 30 ಗೋವಿಂದ ಗುರೂಜಿಯವರ ಪುಣ್ಯತಿಥಿ, ಅವರು ಗುಜರಾತ್ ಮತ್ತು ರಾಜಸ್ಥಾನದ ಬುಡಕಟ್ಟು ಮತ್ತು ವಂಚಿತ ಸಮುದಾಯಗಳ ಜೀವನದಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸಿದ್ದಾರೆ. ಗೋವಿಂದ ಗುರುಗಳಿಗೆ ನನ್ನ ಶ್ರದ್ಧಾಂಜಲಿ ಅರ್ಪಿಸುತ್ತೇನೆ ಎಂದು ಪ್ರಧಾನಿ ಮೋದಿ ಹೇಳಿದರು.

ಭಾರತದ ಪ್ಯಾರಾ ಕ್ರೀಡಾಪಟುಗಳ ಸಾಧನೆ: ಪ್ಯಾರಾ ಏಷ್ಯನ್ ಗೇಮ್ಸ್ ಭಾರತದ ಆಟಗಾರರು ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿಯೂ ಅದ್ಭುತ ಯಶಸ್ಸನ್ನು ಸಾಧಿಸಿದ್ದಾರೆ. ಈ ದೇಶಗಳಲ್ಲಿ ಭಾರತ 111 ಪದಕಗಳನ್ನು ಗೆದ್ದು ಹೊಸ ಇತಿಹಾಸ ನಿರ್ಮಿಸಿದ್ದು ಎಲ್ಲಾ ಆಟಗಾರರಿಗೆ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸಲ್ಲಿಸಿದರು.



ಪುನೀತ್ ರಾಜಕುಮಾರ್‌ರವರ ಎರಡನೇ ವರ್ಷದ ಸವಿನೆನಪಿನ ಅಂಗವಾಗಿ ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಶಾಸಕ ಕೆ.ಹರೀಶ್‌ಗೌಡ ಸಾರ್ವಜನಿಕರಿಗೆ ಚಿಕನ್ ಪಲಾವ್, ಚಿಕನ್ ಚಾಪ್ಸ್ ವಿತರಿಸಿದರು. ಈ ಸಂದರ್ಭದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ, ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ವಿನಯ್ ಕುಮಾರ್, ರಾಜೀವ್, ಗುರುರಾಜ, ಪ್ರಶಾಂತ್, ನಿತಿನ್, ರವಿಚಂದ್ರನ್, ಮಂಜುನಾಥ್, ಸಂದೀಪ್, ನಂಜುಂಡಿ, ನವೀನ್ ಉಪಸ್ಥಿತರಿದ್ದರು.

ಚಿತ್ರಗೀತೆಗಳಲ್ಲಿಯೂ ಜೀವನ ಮೌಲ್ಯಗಳ ದರ್ಶನವಿದೆ



ಮೈಸೂರು, ಅ.29– 'ಭಾವವೆಂಬ ಹೂವು ಅರಳಿ..' ಶೀರ್ಷಿಕೆಯಡಿ ನಗರದ ನಾದಬ್ರಹ್ಮ ಸಭಾಂಗಣದಲ್ಲಿ ಡಾ ರಾಜ್‌ಕುಮಾರ್ ಕಲಾಸೇವಾ ಟ್ರಸ್ಟ್‌ನಿಂದ ಮಹಿಳಾ ಪ್ರಧಾನ ಗೀತೆಗಳ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ವೇಳೆ ಶಿಕ್ಷಣ ತಜ್ಞರಾದ ಡಾ ಎಲ್. ಸವಿತಾ ಮಾತನಾಡಿ, ಕನ್ನಡ ಚಲನಚಿತ್ರ ಗೀತೆ ರಚನೆಕಾರರಾದ ಚಿ.ಉದಯಶಂಕರ್, ವಿಜಯನಾರಸಿಂಹ.ಆರ್.ಎನ್. ಜಯಗೋಪಾಲ್, ಕಣಗಾಲ್ ಪ್ರಭಾಕರ ಶಾಸ್ತ್ರಿಯಂತವರು ಕನ್ನಡ ಚಿತ್ರಗೀತೆಗಳಲ್ಲಿ ಬದುಕಿನ ಹಲವು ಆಯಾಮಗಳನ್ನು ಸಾಹಿತ್ಯದ ಮೂಲಕ ಪ್ರೇಕ್ಷಕರ ಮನಸಿಗೆ ನಾಟುವಂತೆ ಗೀತೆಗಳನ್ನು ರಚಿಸಿದ್ದಾರೆ.ಅವರ ಗೀತೆಗಳ ಸಾಲುಗಳಲ್ಲಿ ಜೀವನ ಮೌಲ್ಯಗಳ ದರ್ಶನ ವಿದೆ. ಯುವಜನತೆ ಹಳೆಯ ಕನ್ನಡ ಚಿತ್ರಗೀತೆಗಳನ್ನು ಆಲಿಸಿದಲ್ಲಿ ಖಂಡಿತಾ ಪ್ರಭಾವಿ ತರಾಗುತ್ತಾರೆ ಎಂದು ಅಭಿಪ್ರಾಯಪಟ್ಟರು.

ಭಾವವೆಂಬ ಹೂವು ಅರಳಿ... ಶೀರ್ಷಿಕೆಯಡಿ ಎಸ್ ಜಾನಕಿ. ವಾಣಿ ಜಯರಾಂ ಪಿ.ಸುಶೀಲರಂತಹ ಶ್ರೇಷ್ಠ ಗಾಯಕಿಯರು ಹಾಡಿರುವ ಗೀತೆಗಳು ನಮ್ಮೊಳಗೆ ಭಾವಪರವಶತೆ ತಂದಿವೆ.

ಇದೇ ಪ್ರಥಮ ಬಾರಿಗೆ ಇಡೀ ಸಂಗೀತ ಸಂಜೆ ಕಾರ್ಯಕ್ರಮ ಪೂರ್ಣ ಪ್ರಮಾಣದಲ್ಲಿ ಮಹಿಳಾ ಗಾಯಕಿಯರೇ ಹಾಡುತ್ತಿರುವುದು ಗಾಯನ ಲೋಕದಲ್ಲೆ ವಿಶೇಷವೆನಿಸಿದೆ. ಇಂತಹ ಆಲೋಚನೆ ಮತ್ತು ಆಯೋಜನೆ ಮಾಡಿರುವ ಗಾಯಕ ಮೈಸೂರು ಜಯರಾಂ ರವರ ಪರಿಕಲ್ಪನೆ ಶ್ಲಾಘನೀಯ ಎಂದರು.

ಹಿರಿಯ ಗಾಯಕಿ ಸರ್ವಮಂಗಳಾ ಅವರ ಕರ್ಪೂರದಾ ಗೊಂಬೆ ನಾನು. "ಸುಖದಾ ಸ್ವಪ್ನಗಾನಾ.. ವಿರಹಾ ನೂರು ನೂರು ತರಹ... ಭಾವವೆಂಬ ಹೂವು ಅರಳಿ... ಗಾಯಕಿ ಇಂದ್ರಾಣಿ ಅವರು ಹಾಡಿದ ಎಲ್ಲೇ ಇರು ಹೇಗೆ ಇರು...ನಾ ಮೆಚ್ಚಿದ ಹುಡುಗನಿಗೆ..ಗಗನವು ಎಲ್ಲೋ ಭೂಮಿಯು ಎಲ್ಲೋ...ಗಾಯಕಿ ನಾಗಲಕ್ಷ್ಮಿ ದೇವರ ಆಟ ಬಲ್ಲವರಾರು... ಗಾಯಕಿ ರಾಣಿ ಹಾಡಿದ ನವರಾತ್ರಿ ಸಂಜೆಯಲಿ..ನಿನ್ನೆಗಿಂತ ಇಂದು ಚೆನ್ನ .ಮುಂತಾದ ಗೀತೆಗಳ ಮನೋಜ್ಞ ಗಾಯನ ಪ್ರೇಕ್ಷಕರ ಮನಸೂರೆಗೊಂಡವು.

ಮುಖ್ಯ ಅತಿಥಿಗಳಾಗಿ ಕಲ್ಪನಾ ರಾಮಚಂದ್ರು, ಡಿಎಫ್‌ಆರ್‌ಎಲ್ ಅಧಿಕಾರಿ ಸುಕನ್ಯ, ವಿದುಷಿ ಎಂಸಿ ನಾಗಲಕ್ಷ್ಮಿ, ಕಮಲಾ ಉದಯಕುಮಾರ್, ಉಪನ್ಯಾಸಕಿ ನಿವೇದಿತಾ ಲೇಖಕಿ ಹಾಗೂ ಗಾಯಕರಾದ ಶ್ರೀಲತಾ ಮನೋಹರ್ ಭಾಗವಹಿಸಿದ್ದರು. ಡಾ ರಾಜಕುಮಾರ್ ಕಲಾ ಸೇವಾ ಟ್ರಸ್ಟ್ ಗೌರವಾಧ್ಯಕ್ಷ ಡಾ.ವೈ.ಡಿ.ರಾಜಣ್ಣ ಹಾಗೂ ಗಾಯಕರಾದ ಮೈಸೂರು ಜಯರಾಂ, ಗಾಯಕ ಹಾಗೂ ನಿರೂಪಕ ಸುಧೀಂದ್ರ ಮತ್ತು ಇತರರು ಉಪಸ್ಥಿತರಿದ್ದರು.

ನಾಲೆಯಲ್ಲಿ ಮುಳುಗಿ ವೈದ್ಯಕೀಯ ವಿದ್ಯಾರ್ಥಿ ಸಾವು

ಹೆಚ್.ಡಿ.ಕೋಟೆ, ಅ.29(ಬಿಎಲ್‌ಯು)– ನಾಲೆಯಲ್ಲಿ ಮುಳುಗಿ ವೈದ್ಯಕೀಯ ವಿದ್ಯಾರ್ಥಿ ಸಾವನ್ನಪ್ಪಿರುವ ಘಟನೆ ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿ ಎಡದಂಡೆ ನಾಲೆಯಲ್ಲಿ ಸಂಭವಿಸಿದೆ. ಬೆಂಗಳೂರಿನ ಅಂಬೇಡ್ಕರ್ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ಕಿಶನ್(21) ಮೃತಪಟ್ಟ ವೈದ್ಯಕೀಯ ವಿದ್ಯಾರ್ಥಿಯಾಗಿದ್ದು, ಈತ ಬೆಂಗಳೂರಿನ ಬಾಣಾವರ ವಾಸಿ ಶೈಲೇಂದ್ರ ಪುತ್ರನಾಗಿದ್ದಾನೆ. ಅಂಬೇಡ್ಕರ್ ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕಿಶನ್, ಸರಗೂರಿನ ವಿವೇಕಾನಂದ ಸ್ಮಾರಕ ಆಸ್ಪತ್ರೆಗೆ ತರಬೇತಿಗಾಗಿ ಬಂದಿದ್ದನು. ಇವನ ಜೊತೆ ಅದೇ ಕಾಲೇಜಿನಿಂದ ಐವರು ವೈದ್ಯ ವಿದ್ಯಾರ್ಥಿಗಳು ಕೂಡ ಬಂದಿದ್ದರು. ಇಂದು ಭಾನುವಾರದ ರಜಾ ಇದ್ದ ಕಾರಣ ಸ್ನೇಹಿತರ ಜೊತೆ ಬೀಚನಹಳ್ಳಿ ಎಡದಂಡೆ ನಾಲೆಗೆ ಈಜಲು ಇಳಿದಾಗ ನೀರಿನಲ್ಲಿ ಮುಳುಗಿ ಕಿಶನ್ ಸಾವನ್ನಪ್ಪಿದ್ದಾನೆ. ತರುವಾಯ ಮೃತ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಸರಗೂರು ಆಸ್ಪತ್ರೆಗೆ ಸಾಗಿಸಲಾಯಿತು. ಈ ಸಂಬಂಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾರಿಗೆ ಇಲಾಖೆಗೆ ಸರ್ಕಾರಿ ಆ್ಯಪ್

ಮೋಟಾರು ವಾಹನ ರಂಗವನ್ನು ಕಾರ್ಪೋರೇಟೀಕರಣ ಮಾಡುವ, ಸಾರ್ವಜನಿಕ ಸಾರಿಗೆಯನ್ನು ನಾಶ ಮಾಡುವ, ದುಬಾರಿ ದಂಡ, ಶುಲ್ಕ ವಿಧಿಸುವ ಮೋಟಾರು ವಾಹನ (ತಿದ್ದುಪಡಿ) ಕಾಯ್ದೆ 2019 ಅನ್ನು ಒಕ್ಕೂಟ ಸರ್ಕಾರ ವಾಪಸ್ ಪಡೆಯಬೇಕೆಂದು ರಾಜ್ಯ ಸರ್ಕಾರ ನಿರ್ಣಯ ಅಂಗೀಕರಿಸಬೇಕು. ಎಲೆಕ್ಟ್ರಿಕ್ ಬಸ್‌ಗಳನ್ನು ನಿಗಮಗಳೇ ಖರೀದಿಸಬೇಕು. ಪೆಟ್ರೋಲ್, ಡೀಸೆಲ್, ಅನಿಲದ ಮೇಲೆ ವಿಧಿಸುವ ತೆರಿಗೆ ಕಡಿಮೆ ಮಾಡಬೇಕು. ಸಾರಥಿ ಸೂರು ಯೋಜನೆಯನ್ನು ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ಕೆಎಸ್‌ಆರ್‌ಟಿಸಿ ನಿಗಮಗಳ ನೌಕರರ ಫೆಡರೇಶನ್ ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಮಿಕ ಇಲಾಖೆ ಉಪಆಯುಕ್ತ ಗುರುಪ್ರಸಾದ್, ವಿವಿಧ ಸಂಘಟನೆಗಳ ಪ್ರಮುಖರಾದ ಕುಪ್ಪುಸ್ವಾಮಿ, ಎನ್.ವಿ.ಪ್ರಸಾದ್, ಚಿದಾನಂದ, ಬಿ.ವಿ.ರಾಘವೇಂದ್ರ, ಎಚ್.ಡಿ.ರೇವಪ್ಪ, ಆರ್.ಮಂಜುನಾಥ್, ನೀಲಕಂಠಪ್ಪ, ರಘು, ಚೇತನ್ ಎಂ.ಆರ್., ಮುರಳಿ ಕೃಷ್ಣರಾಜು, ಕೆ.ಎಂ.ಸಂತೋಷ್‌ಕುಮಾರ್, ಸಿ.ಎನ್.ಶ್ರೀನಿವಾಸ್, ರಾಜು ದೇವಾಡಿಗ ಮಾತನಾಡಿದರು.

ಚಿತ್ರರಂಗಕ್ಕೆ ನಟ ಪುನೀತ್ ಕೊಡುಗೆ ಅಪಾರ: ಎಡಿಸಿ



ಮಂಡ್ಯ, ಅ.29– ಚಿತ್ರರಂಗಕ್ಕೆ ನಟ ಪುನೀತ್ ರಾಜಕುಮಾರ್ ಕೊಡುಗೆ ಅಪಾರ ಎಂದು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ತಿಳಿಸಿದರು.

ಭಾನುವಾರ ನಗರದ ಎಸ್.ಬಿ.ಸಮುದಾಯ ಭವನದಲ್ಲಿ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಬಳಗ, ಮಿಮ್ಸ್ ಜಿಲ್ಲಾ ರಕ್ತನಿಧಿ ಕೇಂದ್ರ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಜಿಲ್ಲೆಯ ಎಲ್ಲಾ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ನಡೆದ ಡಾ.ಪುನೀತ್ ರಾಜ್‌ಕುಮಾರ್ ಅವರ 2ನೇ ಪುಣ್ಯಸ್ಮರಣೆ ಅಂಗವಾಗಿ ಏರ್ಪಡಿಸಿದ್ದ ಬೃಹತ್ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪುನೀತ್ ರಾಜಕುಮಾರ್ ಕಲೆ, ಸಂಸ್ಕೃತಿ ಹಾಗೂ ಸಿನಿಮಾ ರಂಗವನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದರು. ನಟರಾಗಿ ಮಾತ್ರವಲ್ಲದೇ ಸಮಾಜಮುಖಿಯಾಗಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಆದರೆ ಅವರು ಚಿಕ್ಕವಯಸ್ಸಿನಲ್ಲಿ ನಿಧನರಾಗಿರುವುದು ಇಡೀ ರಾಜ್ಯಕ್ಕೆ ತುಂಬಲಾರದ ನಷ್ಟ ಎಂದ ಅವರು, ರಕ್ತದಾನ ಮಹಾದಾನ. ಹೀಗಾಗಿ ಎಲ್ಲರೂ ರಕ್ತದಾನ ಮಾಡಿ ಒಂದು ಜೀವ ಉಳಿಸುವ ಕೆಲಸ ಮಾಡಬೇಕು ಎಂದರು. ರೆಡ್‌ಕ್ರಾಸ್ ಸಂಸ್ಥೆ ಅಧ್ಯಕ್ಷೆ ಮೀರಾ ಶಿವಲಿಂಗಯ್ಯ ಮಾತನಾಡಿದರು. ಈ ವೇಳೆ ಪುನೀತ್ ರಾಜಕುಮಾರ್ ಅಭಿಮಾನಿ ಬಳಗದ ರಾಜು, ಹೇಮಂತ್, ಜೀವಧಾರೆ ಟ್ರಸ್ಟ್ ನಟರಾಜು, ರೆಡ್‌ಕ್ರಾಸ್ ಸಂಸ್ಥೆ ನಿರ್ದೇಶಕರಾದ ಕೆ.ಟಿ.ಹನುಮಂತು, ರಂಗಸ್ವಾಮಿ, ಮಿಮ್ಸ್ ರಕ್ತನಿಧಿ ಕೇಂದ್ರದ ಮುರುಳೀಧರ್ ಭಾಗವಹಿಸಿದ್ದರು.

ಆಂಧ್ರದಲ್ಲಿ ರೈಲುಗಳ ಡಿಕ್ಕಿ: 8 ಸಾವು

ರೈಲುಗಳ ಡಿಕ್ಕಿಯಿಂದಾಗಿ ಸ್ಥಳದಲ್ಲಿ ವಿದ್ಯುತ್ ತಂತಿಗಳು ತುಂಡಾಗಿವೆ. ಇದರಿಂದಾಗಿ ಪ್ರದೇಶ ಕತ್ತಲೆಯಲ್ಲಿ ಮುಳುಗಿತು. ರಾತ್ರಿಯಾಗಿರುವುದರಿಂದ ರಕ್ಷಣಾ ಕಾರ್ಯಾಚರಣೆಗೆ ತೊಂದರೆಯಾಗಿದೆ.



ಈ ಅಪಘಾತದಲ್ಲಿ ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಆದಾಗ್ಯೂ, ಪೂರ್ವ ಮಧ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಪ್ರಕಾರ, ಕೆಲವು ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂಬ ಸುದ್ದಿ ಇದೆ ಆದರೆ ಅಂತಿಮ ಅಂಕಿಅಂಶಗಳು ಇನ್ನೂ ದೃಢಪಟ್ಟಿಲ್ಲ. ಅಪಘಾತದ ಸುದ್ದಿ ತಿಳಿದ ಮುಖ್ಯಮಂತ್ರಿಗಳು ಗಾಯಗೊಂಡಿರುವ ಎಲ್ಲ ಪ್ರಯಾಣಿಕರಿಗೆ ಸೂಕ್ತ ಚಿಕಿತ್ಸೆ ನೀಡಲು ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೈಸೂರು ಮಿತ್ರ ಸೋಮವಾರ 30 ಅಕ್ಟೋಬರ್ 2023

ಒಗ್ಗಟ್ಟಿನಿಂದ ಮಾತ್ರ ವೀರಶೈವ ಸಮಾಜ ಉಳಿಯಲು ಸಾಧ್ಯ

ವೀರಶೈವ ಧಾರ್ಮಿಕ ಜನಜಾಗೃತಿ ಸಭೆಯಲ್ಲಿ ಶಂಕರ ಬಿದರಿ ಅಭಿಪ್ರಾಯ

ಕುಶಾಲನಗರ, ಅ.29– ವೀರಶೈವ, ಲಿಂಗಾಯತ ಅಂತ ಪ್ರತ್ಯೇಕ ಧರ್ಮ ಅಥವಾ ಜಾತಿಯಿಲ್ಲ. ವೀರಶೈವ, ಲಿಂಗಾಯತ ಎರಡೂ ಒಂದೇ ಎಂದು ತಿಳಿಸಿದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷರೂ ಆದ ನಿವೃತ್ತ ಪೊಲೀಸ್ ಅಧಿಕಾರಿ ಶಂಕರ ಮಹದೇವ ಬಿದರಿ, ಎಲ್ಲರ ಒಗ್ಗಟ್ಟಿನಿಂದ ಮಾತ್ರ ವೀರಶೈವ ಸಮಾಜ ಉಳಿಯಲು ಸಾಧ್ಯ ಎಂದರು.

ಅಖಿಲ ಭಾರತ ವೀರಶೈವ– ಲಿಂಗಾಯತ ಮಹಾಸಭಾದ ಕೊಡಗು ಜಿಲ್ಲಾ ಘಟಕದ ವತಿಯಿಂದ ಕುಶಾಲನಗರ ರೈತ ಸಹಕಾರ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಹಾನಗಲ್ ಶ್ರೀ ಕುಮಾರಸ್ವಾಮಿಗಳ 156 ನೇ ಜಯಂತಿ, ಸಿದ್ದಗಂಗಾ ಮಠದ ಡಾ ಶಿವಕುಮಾರ ಸ್ವಾಮೀಜಿಯವರ ಸ್ಮರಣೋತ್ಸವ ಹಾಗೂ ವೀರಶೈವ ಧಾರ್ಮಿಕ ಜನಜಾಗೃತಿ ಸಭೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವೀರಶೈವ ಲಿಂಗಾಯತ ಸಮಾಜವು ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಅಭಿವೃದ್ಧಿ ಹೊಂದಲು ಪ್ರಯತ್ನಿಸಬೇಕಿದೆ. ಎಲ್ಲರ ಒಗ್ಗಟ್ಟಿನಿಂದ ಮಾತ್ರ ಸಮಾಜ ಉಳಿಯಲು ಸಾಧ್ಯ ಎಂದ ಅವರು, ಪ್ರತಿಯೊಬ್ಬರೂ ಸಮಾಜದ ಸುಧಾರಣೆಗೆ ಕಂಕಣಬದ್ಧರಾಗಿ ದುಡಿಯುವ ಮೂಲಕ ದುರ್ಬಲ ಸಮಾಜದ ಅಭಿವೃದ್ಧಿಗೆ ಸಂಘಟಿತರಾಗಿ ಶ್ರಮಿಸಬೇಕು ಎಂದರು. ಲೇಖಕ ಸುಳ್ಯದ ಡಾ ಬಿ.ಪ್ರಭಾಕರ ಶಿಶಿಲ ರಚಿತ ಐತಿಹಾಸಿಕ ಕಾದಂಬರಿ 'ಕೊಡಗಿನ ಲಿಂಗರಾಜ



ಎಂಬ ಕೃತಿ ಹಾಗೂ ಸೋಮವಾರಪೇಟೆಯ ನಿವೃತ್ತ ಮುಖ್ಯ ಶಿಕ್ಷಕಿ ಜಲಜಾ ಶೇಖರ್ ಅವರ ' ನೆಲ ಮುಗಿಲು' ಕವನ ಸಂಕಲನವನ್ನು ಬಿಡುಗಡೆ ಮಾಡಿದ ಕೊಡಗು ವಿಶ್ವ ವಿದ್ಯಾಲಯದ ಕುಲಪತಿ ಪ್ರೊ. ಅಶೋಕ ಸಂ.ಆಲೂರು ಮಾತನಾಡಿ, ವೀರಶೈವ ಸಮಾಜವು ಕಾಯಕ ಹಾಗೂ ದಾಸೋಹ ಕಾರ್ಯಕ್ಕೆ ಮಾದರಿಯಾಗಿದೆ ಎಂದರು.

ಶಾಸಕ ಡಾ ಮಂಥರ್ ಗೌಡ ಮಾತನಾಡಿ, ಎಲ್ಲರೂ ಜತೆಗೂಡಿ ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು. ತಾವು ವೈಯಕ್ತಿಕವಾಗಿ ಹಾಗೂ ಸರ್ಕಾರದ ವತಿಯಿಂದ ವೀರಶೈವ ಸಮಾಜದ ಅಭಿವೃದ್ಧಿಗೆ ಪ್ರಯತ್ನಿಸುವುದಾಗಿ ತಿಳಿಸಿದರು. ಲೇಖಕ ಸುಳ್ಯದ ಡಾ ಬಿ.ಪ್ರಭಾಕರ ಶಿಶಿಲ, ರಾಜರ ಕಾಲದಲ್ಲಿ ಕೊಡಗು ರಾಜ್ಯದ ಆಳ್ವಿಕೆ ಕುರಿತು ಸಂಕ್ಷಿಪ್ತವಾಗಿ ವಿವರಿಸಿದರು. ಅರಮೇರಿ ಕಳಂಚೇರಿ ಶಾಂತಮಲ್ಲಿಕಾರ್ಜುನ ಸ್ವಾಮಿಜಿ, ಮಾತನಾಡಿ, ಸಮಾಜದಲ್ಲಿ ಎಲ್ಲರೂ ಸತ್ಕಾರ್ಯಗಳನ್ನು ಮಾಡುವ ಮೂಲಕ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು ಎಂದರು.

ಹೈಕೋರ್ಟ್ ವಕೀಲ ಎಚ್.ಎಸ್. ಚಂದ್ರಮೌಳಿ, ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ ಮಾತನಾಡಿದರು. ಕಲ್ಮಠದ ಮಹಾಂತ ಸ್ವಾಮೀಜಿ, ಕಲ್ಲಳ್ಳಿ ಮಠದ ರುದ್ರಮುನಿ ಸ್ವಾಮೀಜಿ, ಮಹಾಸಭಾದ ರಾಜ್ಯ ಘಟಕದ ಕಾರ್ಯದರ್ಶಿ ರಾಜೇಶ್ವರಿ ನಾಗರಾಜ್, ಮಹಾಸಭಾದ ಮಹಿಳಾ ಘಟಕದ ಅಧ್ಯಕ್ಷೆ ಮಮತಾ ಸತೀಶ್ ಇದ್ದರು.

ಮಹಾಸಭಾದ ಜಿಲ್ಲಾಧ್ಯಕ್ಷ ಎಚ್.ವಿ.ಶಿವಪ್ಪ ಅಧ್ಯಕ್ಷತೆ ವಹಿಸಿದ್ದರು. ಅಂತರರಾಷ್ಟ್ರೀಯ ರಸಾಯನಶಾಸ್ತ್ರ ವಿಜ್ಞಾನಿಯಾದ ಮಡಿಕೇರಿ ಎಫ್‌ಎಂಸಿ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಜೆ.ಜಿ.ಮಂಜು ನಾಥ್, ಮಹಾಸಭಾದ ರಾಜ್ಯ ಸಮಿತಿ ಕಾರ್ಯದರ್ಶಿ ರಾಜೇಶ್ವರಿ ನಾಗರಾಜ್, ಮಹಾಸಭಾದ ಮಹಿಳಾ ಘಟಕದ ಅಧ್ಯಕ್ಷೆ ಮಮತಾ ಸತೀಶ್, ಯುವ ಘಟಕದ ನಿರ್ದೇಶಕ ವಿರೂಪಾಕ್ಷ, ಜಿಲ್ಲಾ ಮಹಾಸಭಾದ ಮಾಜಿ ಅಧ್ಯಕ್ಷ ಡಿ.ಬಿ.ಧರ್ಮಪ್ಪ, ಉಪಾಧ್ಯಕ್ಷ ಜಿ.ಎಂ. ಕಾಂತರಾಜು, ಎಸ್.ಎಸ್.ಸುರೇಶ್, ಪ್ರಧಾನ ಕಾರ್ಯದರ್ಶಿ ಟಿ.ಎಸ್.ಶಾಂಭ ಶಿವಮೂರ್ತಿ, ಖಜಾಂಚಿ ಎಚ್.ಪಿ. ಉದಯಕುಮಾರ್, ಕಾರ್ಯದರ್ಶಿ ಜೆ.ಸಿ.ಶೇಖರ್, ಮಹಾಸಭಾದ ತಾಲೂಕು ಅಧ್ಯಕ್ಷ ಕೆ.ಬಿ.ಹಾಲಪ್ಪ, ಕೆ.ಎಸ್.ಸಂದೀಪ್, ರುದ್ರಪ್ರಸನ್ನ, ವಿವಿಧ ಘಟಕಗಳ ಪ್ರಮುಖರಾದ ಎಚ್.ಎಂ.ಮಧುಸೂದನ್, ಎಸ್.ನಂದೀಶ್, ಮೋಕ್ಷಿತ್ ರಾಜ್, ಆದರ್ಶ್, ಪ್ರದೀಪ್, ಕಟ್ಟಡದ ದಾನಿಗಳಾದ ಸುಶೀಲಮ್ಮ ಮತ್ತು ಎಂ.ಬಿ. ಬಸವರಾಜ್, ಮಹಾಸಭಾದ ನಿರ್ದೇಶಕ ಎಂ.ಮಹದೇವಪ್ಪ, ವೀರಶೈವ ಸಮಾಜದ ವಿವಿಧ ಘಟಕಗಳ ಪದಾಧಿಕಾರಿಗಳು ಇತರರು ಇದ್ದರು.

ಶಿಕ್ಷಕಿಯರಾದ ಬಿ.ಬಿ.ಹೇಮಲತಾ, ಡಿ.ಎಂ.ಮಹಾದೇವಿ ಕಾರ್ಯಕ್ರಮ ನಿರೂಪಿಸಿದರು. ಮಹಾಸಭಾದ ಉಪಾಧ್ಯಕ್ಷ ಜಿ.ಎಂ.ಕಾಂತರಾಜು ಸ್ವಾಗತಿಸಿದರು. ಕುಶಾಲನಗರ ಅಕ್ಕನ ಬಳಗದ ಸದಸ್ಯರು ಪ್ರಾರ್ಥಿಸಿದರು.

ಸಾಧಕರಿಗೆ ಸನ್ಮಾನ

ರಸಾಯನಶಾಸ್ತ್ರದಲ್ಲಿ ಉತ್ತಮ ಸಾಧನೆ ಮಾಡಿರುವ ಅಂತರರಾಷ್ಟ್ರೀಯ ವಿಜ್ಞಾನಿಯಾದ ಮಡಿಕೇರಿ ಎಫ್‌ಎಂಸಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ ಜೆ.ಜಿ.ಮಂಜುನಾಥ್, ಸಮಾಜ ಸೇವಕರಾದ ಶಿರಂಗಾಲ ಗ್ರಾ.ಪಂ.ಮಾಜಿ ಅಧ್ಯಕ್ಷ ಎಸ್.ವಿ.ನಂಜುಂಡಪ್ಪ, ಕುಟ್ಟದ ಹಿರಿಯ ನಾಗರಿಕ ಮಹದೇವಪ್ಪ, ಜೆಸಿಐ ಸಂಸ್ಥೆಯ ವಲಯ ಉಪಾಧ್ಯಕ್ಷ ಕೂಡು ಮಂಗಳೂರಿನ ಕೆ.ಡಿ.ಪ್ರಶಾಂತ್, ಹೆಬ್ಬುಲುಸೆ ಪಟೇಲ್ ತಮ್ಮಯ್ಯ, ಹೊಸ ಪಟ್ಟಣದ ಪೂರ್ಣಿಮ ಶಿವಕುಮಾರ್, ಸೋಮವಾರ ಪೇಟೆಯ ನಿವೃತ್ತ ಮುಖ್ಯ ಶಿಕ್ಷಕಿ ಜಲಜಾ ಶೇಖರ್ ಅವರನ್ನು ಮಹಾಸಭಾದ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ಗಮನ ಸೆಳೆದ ಮೆರವಣಿಗೆ

ಇದಕ್ಕೂ ಮುನ್ನ ಕುಶಾಲನಗರ ಪಟ್ಟಣದ ಬಸವೇಶ್ವರ ದೇವಾಲಯದ ಬಳಿಯಿಂದ ಪಟ್ಟಣದ ಮುಖ್ಯ ರಸ್ತೆಯ ಮೂಲಕ ಬೆಳ್ಳಿರಥದ ಮೂಲಕ ಮೆರವಣಿಗೆ ನಡೆಸಲಾಯಿತು. ಹಾನಗಲ್ ಶ್ರೀ ಕುಮಾರಸ್ವಾಮಿಗಳ 156 ನೇ ಜಯಂತಿ ಹಾಗೂ ಡಾ ಶಿವಕುಮಾರ ಸ್ವಾಮೀಜಿ ಜಯಂತಿ ಅಂಗವಾಗಿ ಬೆಳ್ಳಿರಥದಲ್ಲಿ ಸ್ವಾಮೀಜಿಗಳ ಭಾವಚಿತ್ರವನ್ನು ಇಟ್ಟು ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಮಹಿಳೆಯರು ಕಳಶ ಹೊತ್ತು ಸಾಗಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಚಾಮರಾಜನಗರದ ಬೆಟ್ಟಹಳ್ಳಿ ಮಾರಮ್ಮನ ಕಲಾವಿದ ಬಾಲು ನೇತೃತ್ವದಲ್ಲಿ ಪ್ರದರ್ಶಿಸಿದ ಡೊಳ್ಳು ಕುಣಿತ ಗಮನ ಸೆಳೆಯಿತು. ಎಚ್.ಡಿ.ಕೋಟೆ ತಾಲೂಕಿನ ಹಳೆ ಹೆಗ್ಗುಡಿಲು ಗ್ರಾಮದ ಕಲಾವಿದ ನೀಲಕಂಠ ನೇತೃತ್ವದಲ್ಲಿ ಪ್ರದರ್ಶಿಸಿದ ವೀರಗಾಸೆ ನೃತ್ಯ ಪ್ರದರ್ಶನ ಜನರ ಗಮನ ಸೆಳೆಯಿತು.

ಗೋಣಿಕೊಪ್ಪದಲ್ಲಿ ಕಾವೇರಿ ತೀರ್ಥ ಪೂಜೆ

ಗೋಣಿಕೊಪ್ಪ, ಅ.29– ಕಾವೇರಿ ಅಮ್ಮಕೊಡವ ಮಹಿಳಾ ಸಂಘದ ವತಿಯಿಂದ ಅಮ್ಮಕೊಡವ ಸಭಾಂಗಣದಲ್ಲಿ ಕಾವೇರಿ ತೀರ್ಥಪೂಜೆ ಕಾರ್ಯಕ್ರಮ ನಡೆಯಿತು.

ಕಾವೇರಿಗೆ ಬಳೆ ತೊಡಿಸಿ ಗೌರವ ಸೂಚಿಸಲಾಯಿತು. ಕಾವೇರಿ ಹಾಡಿನ ಮೂಲಕ ಭಕ್ತಿ ಮೂಡಿಸಲಾಯಿತು. ಸಾಂಪ್ರದಾಯಿಕ ಸೀರೆ ತೊಟ್ಟು ಮಹಿಳೆಯರು ಭಾಗವಹಿಸಿದ್ದರು. ಕಾವೇರಿ ತೀರ್ಥ ಸೇವಿಸಿ ಸಂಭ್ರಮಿಸಿದರು.

ಅತಿಥಿಯಾಗಿ ಹಿರಿಯರಾದ ಡಾ. ಹೆಮ್ಮಚ್ಚಿನಮನೆ ಸರಸ್ವತಿ ಸೋಮೇಶ್ ಪಾಲ್ಗೊಂಡು ಸಂಘಟನೆಗೆ ಒತ್ತು ನೀಡುವಂತೆ ಸಲಹೆ ನೀಡಿದರು. ಸಹಭಾಗಿತ್ವದೊಂದಿಗೆ ಚಟುವಟಿಕೆ ಮುಖ್ಯ. ಮಹಿಳೆಯರು ಒಂದಾಗಿ ಶಿಕ್ಷಣ, ಸಮಾಜ ಸೇವೆ, ರಕ್ತದಾನಕ್ಕೆ ಮಹತ್ವ ಕಲ್ಪಿಸಬೇಕು ಎಂದರು.

ಕಾರ್ಯದರ್ಶಿ ಅಶ್ವಿನಿ ನಂದಾ ವರದಿ ವಾಚಿಸಿದರು. ಸಂಘದ ಅಧ್ಯಕ್ಷೆ ಅಮ್ಮತ್ತಿರ ರೇವತಿ ಪರಮೇಶ್ವರ್, ಹಿರಿಯರಾದ ಅಮ್ಮತ್ತಿರ ಯಮುನಾ ಕೃಷ್ಣಕುಮಾರ್ ಇದ್ದರು.

ವಿಕಲಚೇತನರ ಗುಂಪಿನ ಸಂಜೀವಿನಿ ಒಕ್ಕೂಟದ ಸದಸ್ಯರಿಗೆ 1.5 ಲಕ್ಷ ರೂ. ಚೆಕ್ ವಿತರಣೆ



ವಿರಾಜಪೇಟೆ, ಅ.29– ವಿಕಲಚೇತನ ಒಕ್ಕೂಟದ ಸದಸ್ಯರಿಗೆ ಸಮುದಾಯ ಬಂಡವಾಳ ನಿಧಿಯಿಂದ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಂಘದ ಗುಂಪುಗಳ ಸದಸ್ಯರಿಗೆ ಸ್ವ ಉದ್ಯೋಗದಲ್ಲಿ ಸ್ವಾವಲಂಬಿ ಜೀವನ ನಡೆಸಲು ಸರಕಾರ 1.5 ಲಕ್ಷ ರೂ. ಅನುದಾನ ನೀಡಲಾಗುತ್ತಿದೆ ಎಂದು ವಿರಾಜಪೇಟೆ ತಾಲೂಕು ಪಂಚಾಯಿತಿ ಎನ್‌ಆರ್‌ಎಲ್‌ಎಂ ಸಂಯೋಜಕ ಎಸ್.ಸೋಮಶೇಖರ್ ತಿಳಿಸಿದ್ದಾರೆ.

ವಿರಾಜಪೇಟೆ ನಗರದ ಮೀನುಪೇಟೆಯಲ್ಲಿರುವ ಸೌಭಾಗ್ಯ ವಿಕಲಚೇತನ ಪತ್ತಿನ ಸಹಕಾರ ಸಂಘ, ಉದ್ಯೋಮಶೀಲತೆ ಜೀವನೋಪಾಯ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಸಮೀಪದ ಆರ್ಜಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ 'ವಿಕಲ ಚೇತನರ ಗುಂಪಿನ ಸಂಜೀವಿನಿ ಒಕ್ಕೂಟದ ಸದಸ್ಯರಿಗೆ 1.5 ಲಕ್ಷ ರೂ.ಗಳ ಚೆಕ್ ವಿತರಣಾ ಕಾರ್ಯಕ್ರಮ'ದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು ಇಲಾಖೆ ವತಿಯಿಂದ ಸಂಘದ ಮಹಿಳಾ ಸದಸ್ಯರಿಗೆ ಜೇನು ಸಾಕಾಣಿಕೆ, ಹೈನುಗಾರಿಕೆ, ಅಣಬೆ ಬೇಸಾಯ, ಟೈಲರಿಂಗ್, ಮೇಣದಬತ್ತಿ, ಸೋಪು ಇತ್ಯಾದಿಗಳ ತಯಾರಿಕಾ ತರಬೇತಿ ನೀಡಿ ಬಳಿಕ ಉದ್ಯೋಗದಲ್ಲಿ ಸಮಾಜದ ಮುಖ್ಯವಾಹಿನಿಗೆ ಬರುವಂತೆ ಅವರಿಗೆ ಬ್ಯಾಂಕ್ ಮೂಲಕ ಸಾಲ ಸೌಲಭ್ಯಗಳನ್ನು ನೀಡಲಾಗುವುದು ಎಂದರು.

ಈ ಹಿನ್ನೆಲೆ ಈಗಾಗಲೇ 18 ಕೋಟಿ ರೂ. ಅನುದಾನ ನೀಡುವಂತೆ ಸರಕಾರಕ್ಕೆ ವರದಿ ನೀಡಲಾಗಿದೆ ಎಂದು ತಿಳಿಸಿದ ಅವರು, ಈಗಾಗಲೇ ಸ್ತ್ರೀ ಶಕ್ತಿ ಸಂಘಗಳು ಸಂಜೀವಿನಿ ಸಂಘದ ವ್ಯಾಪ್ತಿಗೆ ಬರುತ್ತದೆ ಎಂದರು. ಆರ್ಜಿ ಗ್ರಾಪಂ ಅಧ್ಯಕ್ಷೆ ಫಾತಿಮಾ ವಿಕಲಚೇತನರ ಒಕ್ಕೂಟದ ಸದಸ್ಯರಿಗೆ ಚೆಕ್ ವಿತರಣೆ ಮಾಡಿದ ಬಳಿಕ ಮಾತನಾಡಿ, ಸರಕಾರದ ಅನುದಾನವನ್ನು ಉತ್ತಮ ಕಾರ್ಯಗಳಿಗೆ ಬಳಸುವಂತಾಗಬೇಕು ಎಂದರು. ಚೆಕ್ ವಿತರಣೆ ಸಂದರ್ಭ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಿ.ಮಣಿ, ಸೌಭಾಗ್ಯ ವಿಕಲಚೇತನರ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷೆ ಆಯಿಶಾ ಹಾಗೂ ವ್ಯವಸ್ಥಾಪಕ ಟಿ.ಯು. ವಿದ್ಯಾಶ್ರೀ, ಆರ್ಜಿ ಗ್ರಾಪಂ ಉಪಾಧ್ಯಕ್ಷೆ ಹೆಚ್.ಕೆ.ಕವಿತಾ, ಸಂಜೀವಿನಿ ಸಂಘದ ಅಧ್ಯಕ್ಷೆ ಕೆ.ಕೆ.ಜಾನ್ಸಿ ಮತ್ತು ಪಂಚಾಯಿತಿ ಸದಸ್ಯರು ಸಂಜೀವಿನಿ ಒಕ್ಕೂಟದ ಸದಸ್ಯರು ಹಾಜರಿದ್ದರು.

ಕಾಡಾನೆಗಳ ದಾಳಿಯಿಂದ 3 ಎಕರೆ ಬೆಳೆ ನಾಶ



ಗೋಣಿಕೊಪ್ಪ, ಅ.29– ಬಿ. ಶೆಟ್ಟಿಗೇರಿ ಗ್ರಾಮದಲ್ಲಿ ಮುಂಜಾನೆ ಕಾಡಾನೆ ಹಿಂಡು ದಾಳಿ ನಡೆಸಿ ಸುಮಾರು 3 ಎಕರೆ ಬೆಳೆ ನಾಶವಾಗಿ, ಸುಮಾರು 6 ಲಕ್ಷ ರೂ. ನಷ್ಟವಾಗಿದೆ.

ಗ್ರಾಮದ ಕಾಳೇಂಗಡ ಮಧು ಮಂದಣ್ಣ ಕಣಿಯರ ಪೆಮ್ಮಯ್ಯ, ಕಾಳೇಂಗಡ ಬೋಪಣ್ಣ, ಬಂಟರ ರವಿಗೆ ಸೇರಿದ ಗದ್ದೆ ಮತ್ತು ತೋಟಕ್ಕೆ ನುಗ್ಗಿರುವ ಆನೆಗಳು ಭತ್ತ, ಕಾಫಿ, ಅಡಕೆ ನಾಶ ಮಾಡಿವೆ. ಕೊಯ್ಲಿಗೆ ಬಂದಿರುವ ಸುಮಾರು 3 ಎಕರೆ ಭತ್ತ ಬೆಳೆ ನಾಶವಾಗಿದೆ. ಸ್ಥಳಕ್ಕೆ ಭೇಟಿ ನೀಡಿದ ಉಪವಲಯ ಅರಣ್ಯ ಅಧಿಕಾರಿ ಸಚಿನ್ ಮಾತನಾಡಿ, ಪರಿ ಹಾರಕ್ಕೆ ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಬೆಳೆಗಾರ ಮಧು ಮಂದಣ್ಣ ಮಾತನಾಡಿ, ಶನಿವಾರ ಸಮೀಪದ ಬೇಗೂರು– ಹರಿಹರ ಗ್ರಾಮದಲ್ಲಿ ಸೇರಿಕೊಂಡಿದ್ದ ಆನೆಗಳನ್ನು ಅರಣ್ಯ ಇಲಾಖೆ ವತಿಯಿಂದ ಕಾಡಿಗಟ್ಟುವ ಕಾರ್ಯಾಚರಣೆ ನಡೆಸಿತ್ತು. ಅಲ್ಲಿ ಸೇರಿಕೊಂಡಿದ್ದ ಆನೆಗಳು ನಮ್ಮ ಗ್ರಾಮಕ್ಕೆ ಬಂದು ನಾಶ ಮಾಡಿವೆ. ಸರ್ಕಾರ ನಷ್ಟ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಮನೆಯ ಹಿಂಭಾಗ ಗಾಂಜಾ ಬೆಳೆದಿದ್ದ ವ್ಯಕ್ತಿ ಬಂಧನ



ಗೋಣಿಕೊಪ್ಪ, ಅ.29– ಅಕ್ರಮವಾಗಿ ಗಾಂಜಾ ಗಿಡಗಳನ್ನು ಮನೆಯ ಹಿಂಭಾಗದಲ್ಲಿ ಬೆಳೆಸಿದ್ದ ಆರೋಪಿಯನ್ನು ಗೋಣಿಕೊಪ್ಪಲಿನ ಒಂದನೇ ಬ್ಲಾಕ್‌ನಲ್ಲಿ ಬಂಧಿಸಲಾಗಿದೆ. ರಿಷಿ ಕಾವೇರಪ್ಪ ಬಂಧಿತ ಆರೋಪಿಯಾಗಿದ್ದು, ಮನೆಯ ಹಿಂಭಾಗದಲ್ಲಿ ಸುಮಾರು 13 ಗಾಂಜಾ ಗಿಡಗಳನ್ನು ಬೆಳೆಸಿದ್ದು ಮತ್ತು ಹಸಿ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ. ಭಾನುವಾರ ಬೆಳಗ್ಗೆ ಎಸ್ಪಿ ರಾಮರಾಜನ್ ಮಾರ್ಗದರ್ಶನದಲ್ಲಿ ದಾಳಿ ನಡೆಸಿದ ಸಿಪಿಐ ಗೋವಿಂದ ರಾಜ್, ಎಸ್‌ಐ ರೂಪದೇವಿ ಬೀರಾದಾರ್ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದರು.

ಕಾಡಂಚಿನ ಗ್ರಾಮದ ರೈತರಿಗೆ ಸಮರ್ಪಕ ವಿದ್ಯುತ್ ಪೂರೈಸಲು ಸೂಚನೆ



ಚಾಮರಾಜನಗರ, ಅ.29– ಕಾಡಂಚಿನ ಗ್ರಾಮದ ರೈತರಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡಬೇಕೆಂದು ಪುಣಜನೂರು ಗ್ರಾ.ಪಂ ಅಧ್ಯಕ್ಷೆ ಶಿವಿಬಾಯಿ ಗಣೇಶ್ ನಾಯ್ಕ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕಿನ ಪುಣಜನೂರು ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ನಡೆದ ಮೊದಲನೇ ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ (ಕೆಡಿಪಿ ಸಭೆ) ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಭಾಗದ ಕಾಡಂಚಿನಲ್ಲಿ ವಾಸಿಸುವ ರೈತರಿಗೆ ಸಮರ್ಪಕ ವಿದ್ಯುತ್ ಪೂರೈಕೆಯಾಗದೆ ಫಸಲುಗಳು ಒಣಗಿ ನಷ್ಟ ಉಂಟಾಗಿದೆ ಎಂದರು.

ಸೆಸ್ಕಾಂ ಅಧಿಕಾರಿಗಳು ವಿದ್ಯುತ್ ಪೂರೈಕೆ ಮಾಡುತ್ತಿರುವ ಕುರಿತು ಸಮರ್ಪಕ ಮಾಹಿತಿ ನೀಡುತ್ತಿಲ್ಲ, ರೈತರು ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲದೆ ತೊಂದರೆಗೆ ಒಳಗಾಗಿದ್ದಾರೆ. ಹೀಗಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೆಸ್ಕ್ ಇಂಜಿನಿಯರ್ ಗೆ ಸೂಚಿಸಿದರು. ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಹಲವು ಗ್ರಾಮಗಳಿಗೆ ಬೀದಿ ದೀಪಗಳಿಗೆ ಕಂಬಗಳನ್ನು ಅಳವಡಿಸಬೇಕು. ಸರ್ಕಾರಿ ಶಾಲೆಗಳ ಶೌಚಾಲಯಗಳಲ್ಲಿ ಸ್ವಚ್ಛತೆಯ ಇಲ್ಲದೆ ಬಹಳಷ್ಟು ದೂರುಗಳು ಬಂದಿವೆ, ಶಿಕ್ಷಣ ಇಲಾಖೆ ಅಧಿಕಾರಿಗಳು ಗಮನಹರಿಸಿ ಸ್ವಚ್ಛತೆ ಕಾಪಾಡುವಂತೆ ತಿಳಿಸಿದರು. ಅಲ್ಲದೆ ಕೆಲವು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದು ಅದನ್ನು ನೀಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಅಲ್ಲದೆ ಕೆಲವೊಂದು ಶಾಲೆಗಳಲ್ಲಿ ವಿದ್ಯುತ್ ಸಂಪರ್ಕದ ವೈರಿಂಗ್ ಕಿತ್ತು ಹೋಗಿದ್ದು, ಅಪಾಯ ಉಂಟಾಗುವ ಮೊದಲೇ ಸರಿಪಡಿಸಬೇಕು ಎಂದು ತಿಳಿಸಿದರು.

ಗ್ರಾಪಂ ಉಪಾಧ್ಯಕ್ಷ ರಾಚಪ್ಪ ಮಾತನಾಡಿ, ಜಲಜೀವನ್ ಮೆಷಿನ್ ಯೋಜನೆ ಅಡಿಯಲ್ಲಿ ಅಳವಡಿಸಲಾಗಿರುವ ನಲ್ಲಿಗಳು ಕಿತ್ತು ಹೋಗಿವೆ. ಇದರಿಂದ ನೀರು ಪೋಲಾಗುತ್ತಿದೆ ಕೂಡಲೇ ನಲ್ಲಿಗಳನ್ನು ಬದಲಾವಣೆ ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಗ್ರಾ.ಪಂ.ಸದಸ್ಯರಾದ ಚಂದ್ರಶೇಖರ್ ಮಾತನಾಡಿ, ಜೆಜೆಎಂ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಯು ಕಳಪೆಯಿಂದ ಕೂಡಿದ್ದು, ನಿಗದಿತ ಅಳತೆ ಪ್ರಕಾರ ಪೈಪ್ ಅಳವಡಿಸುವ ಕಾರ್ಯ ನಡೆದಿಲ್ಲ ಹೀಗಾಗಿ ಪರಿಶೀಲನೆ ನಡೆಸಿ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ಕೆಡಿಪಿ ಸಭೆಗೆ ಗೈರಾದ ಇಲಾಖೆ ಅಧಿಕಾರಿಗಳಿಗೆ ನೋಟಿಸ್ ನೀಡುವಂತೆ ಗ್ರಾಂಪಂ ಅಧ್ಯಕ್ಷೆ ಶಿವಿಬಾಯಿ ಗಣೇಶ್ ನಾಯಕ್ ಗ್ರಾಪಂ ಅಧಿಕಾರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸಿದ್ದರಾಜು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಇಂಜಿನಿಯರ್ ಜಗದೀಶ್, ಪಿಆರ್‌ಇಡಿ ಇಂಜಿನಿಯರ್ ಪುರುಷೋತ್ತಮ್, ಸಹಾಯಕ ಕೃಷಿ ಅಧಿಕಾರಿ ವೀರಭದ್ರ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಿಇಒ ಜಯಶಂಕರ್, ಗಿರಿಜನ ಕಲ್ಯಾಣ ಇಲಾಖೆಯ ಬಸವಣ್ಣ, ಸೋಮಣ್ಣ, ಗ್ರಂಥಪಾಲಕ ವೆಂಕಟೇಶ್, ಗ್ರಾ.ಪಂ ಸದಸ್ಯರು ಹಾಗೂ ಕಾರ್ಯದರ್ಶಿ ಸೇರಿದಂತೆ ಇತರರು ಭಾಗವಹಿಸಿದ್ದರು.

ಮಹರ್ಷಿ ವಾಲ್ಮೀಕಿಯವರ ರಾಮಾಯಣದಿಂದ ವಿಶ್ವಕ್ಕೆ ಒಳ್ಳೆಯ ಸಂದೇಶ




ಚಾಮರಾಜನಗರ, ಅ. 29– ಆದಿಕವಿ ಮಹರ್ಷಿ ವಾಲ್ಮೀಕಿಯವರು ರಾಮಾಯಣ ಬರೆದು ಇಡೀ ವಿಶ್ವಕ್ಕೆ ಒಳ್ಳೆಯ ಸಂದೇಶ ಸಾರಿದ್ದಾರೆ ಎಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ಎಂ. ರಾಮಚಂದ್ರ ಹೇಳಿದರು.

ನಗರದ 16ನೇ ವಾರ್ಡ್‌ನ ರೈಲ್ವೆ ಬಡಾವಣೆಯಲ್ಲಿ ಮಹರ್ಷಿ ವಾಲ್ಮೀಕಿ ನಾಯಕರ ಬಡಾವಣೆಯ ನೂತನ ನಾಮ ಫಲಕ ಅನಾವರಣ ಮಾಡಿ ಪುಷ್ಪಾರ್ಚನೆ ಮಾಡಿ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಗ್ಗೆ ಅವರು ರಾಮಾಯಣದ ಮೂಲಕ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ತತ್ವಗಳನ್ನು ಶತಮಾನಗಳ ಹಿಂದೆನೇ ಪ್ರಪಂಚಕ್ಕೆ ಕೊಡುಗೆಯಾಗಿ ನೀಡಿದ್ದರು ಎಂದರು.

ರಾಮ, ಸೀತೆ, ಲಕ್ಷ್ಮಣ ತಂದೆ, ತಾಯಿ ಮಾತನ್ನು ಉಳಿಸುವುದಕೋಸ್ಕರ ಕಾಡಿಗೆ ಹೋದದನ್ನು ರಾಮಾಯಣದಲ್ಲಿ ನಾವು ಕಾಣುತ್ತೇವೆ. ನಾವೆಲ್ಲರೂ ಗುರು–ಹಿರಿಯರನ್ನು, ತಂದೆ–ತಾಯಿಯರನ್ನು ಗೌರವಿಸುವಂತ ಕೆಲಸವನ್ನು ಮಾಡಬೇಕು. ರಾಮಾಯಣದಲ್ಲಿ ಒಂದು ವಿಚಾರವನ್ನು ನಾವೆಲ್ಲರೂ ಗಮನಿಸಬೇಕು. ಲವ–ಕುಶರಿಗೆ ಒಳ್ಳೆಯ ಶಿಕ್ಷಣವನ್ನು ಕೊಟ್ಟು,ಅವರು ಬಿಲ್ವಿದ್ಯೆಯಲ್ಲಿ ತಂದೆಯನ್ನು ಮೀರಿಸುವಂತಹ ವಿದ್ಯೆಯನ್ನು ವಾಲ್ಮೀಕಿಯರು ಕಲಿಸಿಕೊಟ್ಟಿದ್ದರು. ಬಡಕುಟುಂಬದಲ್ಲಿ ಜನಿಸಿದ ವಾಲ್ಮೀಕಿಯರು ಕಠಿಣ ತಪಸ್ಸಿನ ಮೂಲಕ ಇಡೀ ವಿಶ್ವಕ್ಕೆ ಆದರ್ಶರಾಗಿದ್ದರು. ಅವರ ತತ್ವಾದರ್ಶಗಳನ್ನು ನಾವೆಲ್ಲರೂ ನಿತ್ಯಜೀವನದಲ್ಲಿ ಅಳವಡಿಸಿಕೊಂಡು ಸಾಗೋಣ ಎಂದರು. ಇದೇ ಸಂದರ್ಭದಲ್ಲಿ ಸಿಹಿ, ಅನ್ನಸಂತರ್ಪಣೆ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಕೃಷ್ಣನಾಯಕ, ವೆಂಕಟೇಶ್ ನಾಯಕ, ಗೋಪಾಲ್, ರವಿ ನಾಯಕ, ಆಟೋಮಂಜುನಾಥ, ಬುಲೆಟ್ ಚಂದ್ರ ಚಂದ್ರು ಚಂದ್ರಶೇಖರ್, ಅರ್ಜುನ್, ಮದನ್, ನವಿನ್, ಶಶಿ, ನಂದಿ, ಚೇತನ್, ಮಣಿ, ನಾಗ, ಸಾಗರ್, ರಾಘು, ಮಣಿಕಂಠ, ಭಕ್ತ, ರೈಲ್ವೆ ಬಡಾವಣೆ ಮುಖಂಡರು ಹಾಜರಿದ್ದರು.

ಮುಂದುವರೆದ ಕಾವೇರಿ ಪ್ರತಿಭಟನೆ



ಚಾಮರಾಜನಗರ, ಅ.29– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಕಳೆದ 47 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು, ಇಂದು ಬಾಯಿಗೆ ಪ್ಲಾಸ್ಟರ್ ಹಾಕಿಕೊಂಡು ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಬಾಯಿಗೆ ಪ್ಲಾಸ್ಟರ್ ಹಾಕಿ ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ . ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಪಣ್ಯದಹುಂಡಿ ರಾಜು, ನಿಜಧ್ವನಿಗೋವಿಂದರಾಜು, ನಂಜುಂಡಸ್ವಾಮಿ, ಲಿಂಗರಾಜು ರಾಜಪ್ಪ,ವೀರಭದ್ರ, ಮೂಡ್ಲಪುರ ಪ್ರಕಾಶ್, ಚಾ.ಸಿ.ಸಿದ್ದರಾಜು ಇತರರು ಭಾಗವಹಿಸಿದ್ದರು.

ನಗರದಲ್ಲಿ ಅಪ್ಪು 2ನೇ ವರ್ಷದ ಪುಣ್ಯಸ್ಮರಣೆ



ಚಾಮರಾಜನಗರ, ಅ. 29– ನಗರದ ಶ್ರೀ ವೆಂಕಟೇಶ್ವರ ಹಿಂದೂ ಮಿಲಿಟರಿ ಹೋಟೆಲ್, ವೆಂಕಟೇಶ್ವರ ಫ್ಯಾಷನ್ ವತಿಯಿಂದ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ 2 ನೇ ವರ್ಷ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು.

ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ ಅನ್ನಸಂತರ್ಪಣೆ ಮಾಡಲಾಯಿತು. ಪುಷ್ಪಾರ್ಚನೆ ಮಾಡಿದ ಹೋಟೆಲ್ ಮಾಲೀಕ ಶ್ರೀನಿವಾಸ ಮಾತನಾಡಿ, ಬಾಲನಟನಾಗಿ ಚಿತ್ರರಂಗ ಪ್ರವೇಶಿಸಿ, ಪವರ್ ಸ್ಟಾರ್ ಆಗಿ ಕನ್ನಡಿಗರ ಜನಮಾನಸದಲ್ಲಿ ಶಾಶ್ವತ ಸ್ಥಾನ ಪಡೆದಿರುವ ಪ್ರೀತಿಯ ಅಪ್ಪು, ಡಾ.ಪುನೀತ್ ರಾಜಕುಮಾರ್ ರವರ ಪುಣ್ಯಸ್ಮರಣೆಯಂದು ಅವರಿಗೆ ಪ್ರೀತಿ ಪೂರ್ವಕ ನಮನಗಳು.ಅತಿ ಚಿಕ್ಕ ವಯಸ್ಸಿನಲ್ಲಿ ಅವರು ಮಾಡಿದ ಸಾಧನೆ, ಗಳಿಸಿದ ಜನಪ್ರಿಯತೆ, ಕೈಗೊಂಡ ಜನಸೇವೆಯನ್ನು ವರ್ಣಿಸಲು ಪದಗಳೇ ಸಾಲದು. ನಮ್ಮ ಪ್ರೀತಿಯ ಅಪ್ಪು ಮತ್ತೆ ಹುಟ್ಟಿ ಬರಲಿ ಎಂದರು. ಕಾರ್ಯಕ್ರಮದಲ್ಲಿ ಲಕ್ಷ್ಮೀ, ವೆಂಕಟೇಶ್, ಬಾಲಾಜಿ, ಚೇತನ್, ಉಮೇಶ್, ಮಹೇಶ್ ಇತರರಿದ್ದರು.

ಗ್ರಾಹಕರಿಗೆ ನೇರವಾಗಿ ಪರಿಶುದ್ಧ, ಗುಣಮಟ್ಟದ ಮೀನು ಮಾರಾಟ

ಶ್ರೀ ಚಾಮರಾಜೇಶ್ವರ ರೈತ ಮೀನು ಉತ್ಪಾದಕರ ಕಂಪನಿಯಿಂದ ನೂತನ ಮೀನು ಮಾರಾಟ ಮಳಿಗೆಗೆ ಶಂಕುಸ್ಥಾಪನೆ



ಚಾಮರಾಜನಗರ, ಅ.29– ಜಿಲ್ಲೆಯ ವ್ಯಾಪ್ತಿಯಲ್ಲಿರುವ ಕೆರೆಗಳಿಂದ ನೇರವಾಗಿ ಗುಣಮಟ್ಟದ ಹಾಗೂ ಪರಿಶುದ್ಧವಾದ ಮೀನುಗಳನ್ನು ಮಾರಾಟ ಮಾಡುವ ಉದ್ದೇಶವನ್ನು ನಮ್ಮ ಸಂಘ ಹೊಂದಿದೆ ಎಂದು ಶ್ರೀ ಚಾಮರಾಜೇಶ್ವರ ರೈತ ಮೀನು ಉತ್ಪಾದಕರ ಕಂಪನಿಯ ಅಧ್ಯಕ್ಷ ಕೆ. ಲಿಂಗರಾಜು ತಿಳಿಸಿದರು.

ನಗರದ ಸಂತೇಮರಹಳ್ಳಿ ರಸ್ತೆಯಲ್ಲಿರುವ ನೂತನ ಪಟ್ಟಣ ಪೊಲೀಸ್ ಠಾಣೆ ಎದುರು ಶ್ರೀ ಚಾಮ ರಾಜೇಶ್ವರ ರೈತ ಮೀನು ಉತ್ಪಾದಕರ ಕಂಪನಿಯ ಮೀನು ಮಾರಾಟ ಮಳಿಗೆ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಮೀನು ಮಾರಾಟಗಾರರು ಹಾಗೂ ಗ್ರಾಹಕರಿಗೆ ಉತ್ತಮವಾದ ವಾತಾವರಣ ಕಲ್ಪಿಸುವ ಜೊತೆಗೆ ಸಕಾಲದಲ್ಲಿ ಗ್ರಾಹಕರಿಗೆ ಗುಣಮಟ್ಟದ ಮತ್ತು ಪರಿಶುದ್ಧವಾದ ಕೆರೆಯ ಮೀನುಗಳನ್ನು ತಲುಪಿಸಲು ನಮ್ಮ ರೈತ ಮೀನು ಉತ್ಪಾದಕರ ಕಂಪನಿಯು ಶ್ರಮಿಸುತ್ತಿದೆ. ಈಗಾಗಲೇ ಮೀನುಗಾರಿಕೆಯಲ್ಲಿರುವವರನ್ನು ಸದಸ್ಯರನ್ನಾಗಿಸಿಕೊಂಡು ಆ ಮೂಲಕ ಅವರಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲು ಶ್ರೀ ಚಾಮರಾಜೇಶ್ವರ ರೈತ ಮೀನು ಉತ್ಪಾದಕರ ಕಂಪನಿ ಮುಂದಾಗಿದೆ ಎಂದು ಅವರು ಹೇಳಿದರು. ಜಿಲ್ಲಾ ಕೇಂದ್ರದಲ್ಲಿ ಮೀನು ಮಾರಾಟ ಮಳಿಗೆಯನ್ನು ಆರಂಭಿಸುವ ಉದ್ದೇಶದಿಂದ ನಗರಸಭೆಯಿಂದ ನಿವೇಶನವನ್ನು ಪಡೆದುಕೊಂಡು ಸಂತೇಮರಹಳ್ಳಿ ಮುಖ್ಯ ರಸ್ತೆಯಲ್ಲಿರುವ ಹಳೇ ರೇಷ್ಮೆ ಮಾರುಕಟ್ಟೆ ಮುಂಭಾಗದಲ್ಲಿ ಮಳಿಗೆಯನ್ನು ನಿರ್ಮಾಣ ಮಾಡಲಾಗುತ್ತಿದೆ. ಗ್ರಾಹಕರು ಗುಣಮಟ್ಟದ ಮೀನು ಖರೀದಿ ಮಾಡುವ ಮೂಲಕ ರೈತ ಮೀನು ಉತ್ಪಾದಕರ ಕಂಪನಿಗೆ ಹೆಚ್ಚಿನ ಬೆಂಬಲ ನೀಡಬೇಕು ಎಂದು ಲಿಂಗರಾಜು ಮನವಿ ಮಾಡಿದರು.

ಕಂಪನಿಯ ನಿರ್ದೇಶಕ ಹಾಗೂ ಹಾಪ್‌ಕಾಮ್ಸ್ ನಿರ್ದೇಶಕ ಎಸ್. ಬಸವಶೆಟ್ಟಿ ಮಾತನಾಡಿ, ಆರಂಭದಲ್ಲಿ ಜಿಲ್ಲಾ ಕೇಂದ್ರದಲ್ಲಿ ಮೀನು ಮಾರಾಟ ಮಳಿಗೆಯನ್ನು ತೆರೆಯಲಾಗುತ್ತದೆ. ಆಯಾ ತಾಲೂಕು ವ್ಯಾಪ್ತಿಯಲ್ಲಿರುವ ಮೀನು ಉತ್ಪಾದಕ ಸದಸ್ಯರ ಕೋರಿಕೆ ಮತ್ತು ಗ್ರಾಹಕರ ಬೇಡಿಕೆಗೆ ತಕ್ಕಂತೆ ಕಂಪನಿಯಿಂದ ತಾಲೂಕು ಕೇಂದ್ರಗಳಲ್ಲಿಯೂ ಮೀನು ಮಾರಾಟ ಮಳಿಗೆಗಳನ್ನು ತೆರೆಯಲಾಗುತ್ತದೆ. ರೈತ ಮೀನು ಉತ್ಪಾದಕರ ಕಂಪನಿಯು ಮೀನುಗಾರರ ಹಿತರಕ್ಷಣೆಗಾಗಿ ಕಾರ್ಯ ಯೋಜನೆಗಳನ್ನು ರೂಪಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯ ಬಸವಣ್ಣ, ಸಂಘದ ನಿರ್ದೇಶಕರಾದ ಎಸ್. ಬಸವಶೆಟ್ಟಿ, ಆರ್. ಕೆಂಪರಾಜು, ಗುರುಸಿದ್ದಶೆಟ್ಟಿ, ಪುಟ್ಟರಾಜನಾಯಕ, ಸಿದ್ದರಾಜು, ಚಿಕ್ಕಣ್ಣ, ಕೆ.ಕೆ.ರಂಗರಾಜು, ಸಿ.ಕೆ. ಉಷಾ, ಸಣ್ಣಮ್ಮ, ಕಂಪನಿ ಮುಖ್ಯ ಕಾರ್ಯನಿರ್ವಾಹಕ ಪಿ. ನಂಜುಂಡಸ್ವಾಮಿ, ಸದಸ್ಯರಾದ ಕೃಷ್ಣರಾಜು, ಅಂಕಶೆಟ್ಟಿ, ಮಾದಶೆಟ್ಟಿ, ಚನ್ನಿಂಗಶೆಟ್ಟಿ ಮೊದಲಾದವರು ಇದ್ದರು.

ಉಡಿಗಾಲ ಪುಟ್ಟಲಿಂಗಮ್ಮ ನಿಧನ



ಚಾಮರಾಜನಗರ, ಅ.29– ತಾಲೂಕಿನ ಉಡಿಗಾಲ ಗ್ರಾಮದ ನಿವಾಸಿ ನಂಜುಂಡಸ್ವಾಮಿ ಅವರ ಪತ್ನಿ ಪುಟ್ಟಲಿಂಗಮ್ಮ (80) ಶನಿವಾರ ನಿಧನರಾಗಿದ್ದಾರೆ. ಮೃತರು ಪತಿ ನಂಜುಂಡಸ್ವಾಮಿ, ಮಕ್ಕಳಾದ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಉಡಿಗಾಲ ನಂಜಪ್ಪ, ಉಡಿಗಾಲ ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಶಿವಕುಮಾರ್ ಸೇರಿದಂತೆ ನಾಲ್ವರು ಪುತ್ರರು ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ. ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ದಿ. ಉಡಿಗಾಲ ಪಾಪಣ್ಣ ಅವರ ತಾಯಿಯಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ತೋಟದಲ್ಲಿ ಭಾನುವಾರ ಮಧ್ಯಾಹ್ನ ನೆರವೇರಿತು.

ಸೋಮವಾರದಿಂದ ಮೋದಿ ಗುಜರಾತ್ ಪ್ರವಾಸ



ಅಹಮದಾಬಾದ್: ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರದಿಂದ ಎರಡು ದಿನಗಳ ಕಾಲ ತಮ್ಮ ತವರು ರಾಜ್ಯ ಗುಜರಾತ್ ಪ್ರವಾಸ ಕೈಗೊಳ್ಳಲಿದ್ದಾರೆ. ಈ ವೇಳೆ ಅವರು 5,950 ಕೋಟಿ ವೆಚ್ಚದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಕೆಲವು ಯೋಜನೆಗಳ ಉದ್ಘಾಟನೆ ನೆರವೇರಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೋಮವಾರ ಬೆಳಿಗ್ಗೆ ಬನಸ್ಕಾಂತ ಜಿಲ್ಲೆಯಲ್ಲಿ ರುವ ಅಂಬಾಜಿ ದೇವಸ್ಥಾನಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಲಿದ್ದಾರೆ. ಮೆಹಸಾನ ಜಿಲ್ಲೆಯ ದಭೋಡಾ ಗ್ರಾಮದಲ್ಲಿ ಆಯೋಜಿಸಲಾಗಿರುವ ಸಾರ್ವಜನಿಕ ಕಾರ್ಯಕ್ರಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ. ಮೆಹಸಾನ ಮತ್ತು ಅಹಮಬಾದ್ ಜಿಲ್ಲೆಗಳ ನಡುವಿನ ಎರಡು ರೈಲ್ವೆ ಯೋಜನೆಗಳು, ಗುಜರಾತ್ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಕಾರ್ಪೊರೇಷನ್ ಯೋಜನೆ ಸೇರಿ ಇನ್ನಿತರ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಗುಜರಾತ್ ಸರ್ಕಾರ ತಿಳಿಸಿದೆ.

ಅಕ್ಟೋಬರ್ 31ರಂದು ಮೋದಿ ಅವರು ನರ್ಮದಾ ಜಿಲ್ಲೆಯಲ್ಲಿರುವ ಏಕತಾ ನಗರದಲ್ಲಿ ಸರ್ದಾರ್ ವಲ್ಲಭಬಾಯ್ ಪಟೇಲ್ ಅವರ ಜಯಂತಿ ಪ್ರಯುಕ್ತ ಆಯೋಜಿಸಲಾದ ರಾಷ್ಟ್ರೀಯ ಏಕತಾ ದಿನಾಚರಣೆಯಲ್ಲಿ ಭಾಗವಹಿಸಲಿದ್ದು, ಏಕತಾ ಪ್ರತಿಮೆಗೆ ಗೌರವ ಸಲ್ಲಿಸಲಿದ್ದಾರೆ.

ಅಲ್ಲದೆ, ಏಕತಾ ನಗರದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ ಎಂದು ಏಕತಾ ಪ್ರತಿಮೆ ಪ್ರದೇಶದ ಅಭಿವೃದ್ಧಿ ಮತ್ತು ಪ್ರವಾಸೋದ್ಯಮ ಆಡಳಿತದ ಪ್ರಾಧಿಕಾರ ತಿಳಿಸಿದೆ.

ಇದರಲ್ಲಿ 30 ಇ-ಬಸ್‌ಗಳು, ಸಾರ್ವಜನಿಕ ಬೈಕ್ ಹಂಚಿಕೆ ಕಾರ್ಯಕ್ರಮ, ಏಕತಾ ನಗರಕ್ಕೆ ಬರುವ ಪ್ರವಾಸಿಗರಿಗಾಗಿ ನಿರ್ಮಿಸಲಾಗಿರುವ ಪ್ರವಾಸಿಗರ ಕೇಂದ್ರ ಸೇರಿದಂತೆ ಇನ್ನಿತರ ಯೋಜನೆಗಳು ಒಳಗೊಂಡಿವೆ ಎಂದು ಪ್ರಾಧಿಕಾರ ತಿಳಿಸಿದೆ.

ಒಂದನೇ ಪುಟದಿಂದ

ಸರಣಿ ಸ್ಫೋಟ



ವಿವರ: ಕ್ರಿಶ್ಚಿಯನ್ ಸಮುದಾಯದ ಒಂದು ಪಂಗಡವಾದ ಯಹೋವನ ಪಂಗಡವು ಕಲಸ್ಸೇರಿಯ ಝುಮ್ರಾ ಇಂಟರ್ ನ್ಯಾಷನಲ್ ಕನ್‌ವೆನ್ಷನ್ ಸೆಂಟರ್‌ನಲ್ಲಿ 'ಯಹೋವನ ಸತ್ಯಗಳು' ಎಂಬ ಹೆಸರಿನಲ್ಲಿ 3 ದಿನಗಳ ಧಾರ್ಮಿಕ ಸಮಾವೇಶವನ್ನು ಆಯೋಜಿಸಿತ್ತು. ಕೊನೆಯ ದಿನವಾದ ಭಾನುವಾರ ಈ ಸಮಾವೇಶದಲ್ಲಿ 2500ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಬೆಳಗ್ಗೆ 9.40ರ ಸುಮಾರಿನಲ್ಲಿ ಭಾರೀ ಶಬ್ದದೊಂದಿಗೆ ಮೊದಲ ಸ್ಫೋಟ ಸಂಭವಿಸಿದೆ. ಇದರಿಂದಾಗಿ ಸಭೆಯಲ್ಲಿದ್ದವರು ದಿಕ್ಕಾಪಾಲಾಗಿ ಓಡಿದ್ದಾರೆ. ಈ ಸ್ಫೋಟದಲ್ಲಿ ಮಹಿಳೆ ಸೇರಿ ಇಬ್ಬರು ಸಾವನ್ನಪ್ಪಿ, 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುವ ಕಾರ್ಯ ನಡೆಯುತ್ತಿದ್ದಾಗಲೇ ಮತ್ತೆ 2 ಸ್ಫೋಟಗಳು ಸಂಭವಿಸಿದ್ದು, ಸ್ಫೋಟದ ಸ್ಥಳದಲ್ಲಿ ಯಾರೂ ಇಲ್ಲದ ಕಾರಣ ಈ ಎರಡು ಸ್ಫೋಟಗಳಿಂದ ಪ್ರಾಣಹಾನಿಯಾಗಿಲ್ಲ ಎಂದು ಹೇಳಲಾಗಿದೆ.

ಐಇಡಿ ಸ್ಫೋಟಕಗಳನ್ನು ಬಾಕ್ಸ್‌ಗಳಲ್ಲಿ ಮುಚ್ಚಿಟ್ಟು ಸ್ಫೋಟಿಸಲಾಗಿದೆ ಎಂದು ಹೇಳಲಾಗಿದೆ. ಸ್ಫೋಟದ ತೀವ್ರತೆ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆಯೇ ಎನ್‌ಐಎ ಕೊಚ್ಚಿ ಘಟಕದ ಅಧಿಕಾರಿಗಳು ಕೇರಳ ಪೊಲೀಸರ ಸಮನ್ವಯದೊಂದಿಗೆ ತನಿಖೆ ಆರಂಭಿಸಿದ್ದಾರೆ. ಎನ್‌ಐಎ ತಂಡ ಹಾಗೂ ಎಸ್‌ಎಸ್‌ಜಿ ಕಮಾಂಡೋಗಳು ಘಟನಾ ಸ್ಥಳಕ್ಕೆ ದೌಡಾಯಿಸಿ ತನಿಖೆ ಆರಂಭಿಸಿದ್ದಾರೆ.

ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಕೇರಳದ ಡಿಜಿಪಿ ಡಾ. ಶೇಖ್ ದರ್ವೇಶ್ ಸಾಹೇಬ್, ಪ್ರಾಥಮಿಕ ತನಿಖೆಯ ಆಧಾರದ ಮೇರೆಗೆ ಸುಧಾರಿತ ಸ್ಫೋಟಕವಾದ ಐಇಡಿ ಬಳಸಿ ಕೃತ್ಯ ನಡೆಸಿರುವುದು ತಿಳಿದು ಬಂದಿದೆ. ಕೆಲವು ಸ್ಫೋಟಕ ವಸ್ತುಗಳು ದೊರೆತಿದ್ದು, ಅವುಗಳನ್ನು ಪರಿಶೀಲನೆ ಮಾಡಲಾಗುತ್ತಿದೆ. ಘಟನಾ ಸ್ಥಳಕ್ಕೆ ಬಾಂಬ್ ನಿಷ್ಕ್ರಿಯ ದಳ, ವಿಶೇಷ ತನಿಖಾ ತಂಡ ಹಾಗೂ ಎನ್‌ಐಇ ಅಧಿಕಾರಿಗಳ ತಂಡ ಭೇಟಿ ನೀಡಿದೆ. ತನಿಖೆಗಾಗಿ ವಿಶೇಷ ತಂಡವನ್ನು ರಚಿಸಲಾಗಿದೆ ಎಂದು ತಿಳಿಸಿದರು.

ಸರಣಿ ಸ್ಫೋಟಕ್ಕೆ ಸಂಬಂಧಿಸಿದಂತೆ ತ್ರಿಶೂರ್ ಬಳಿಯ ಕೊಡಕರ ಪೊಲೀಸ್ ಠಾಣೆಗೆ 44 ವರ್ಷದ ಡೊಮೆನಿಕ್ ಮಾರ್ಟಿನ್ ಎಂಬಾತ ಶರಣಾಗಿದ್ದಾನೆ ಎಂದು ತಿಳಿಸಿರುವ ಕೇರಳ ಎಡಿಜಿಪಿ ಎಂ.ಆರ್.ಅಜೀತ್ ಕುಮಾರ್ ಅವರು, ಶರಣಾದ ವ್ಯಕ್ತಿಯು ತಾನು ಕ್ರಿಶ್ಚಿಯನ್ ಧಾರ್ಮಿಕ ಗುಂಪೊಂದರ ಅನುಯಾಯಿ ಎಂದು ಹೇಳಿಕೊಂಡಿದ್ದಾನೆ. ಅಲ್ಲದೇ ಆತ ತಾನು ಸ್ಫೋಟ ಕೃತ್ಯದಲ್ಲಿ ಭಾಗವಹಿಸಿದ್ದಕ್ಕೆ ಸಾಕ್ಷ್ಯವನ್ನೂ ಕೂಡ ನೀಡಿದ್ದಾನೆ. ಆತ ನೀಡಿರುವ ಸಾಕ್ಷ್ಯ ಹಾಗೂ ಸ್ಫೋಟ ನಡೆಸಲು ನೀಡಿರುವ ಕಾರಣದ ಬಗ್ಗೆ ಪರಿಶೀಲಿಸುತ್ತಿದ್ದೇವೆ ಎಂದರು.

ಮತ್ತೊಂದೆಡೆ ಕೇರಳ ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಅವರು ಘಟನೆಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಇದು ಅತ್ಯಂತ ದುರದೃಷ್ಟಕರ ಘಟನೆ. ಇದಕ್ಕೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳನ್ನು ಸಂಗ್ರಹಿಸುತ್ತಿದ್ದೇವೆ. ಎರ್ನಾಕುಲಂನ ಎಲ್ಲಾ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿದ್ದಾರೆ. ರಾಜ್ಯದ ಡಿಜಿಪಿ ಅವರೂ ಕೂಡ ಸ್ಥಳಕ್ಕೆ ತೆರಳಿದ್ದಾರೆ. ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದೇವೆ ಎಂದರು.

ಸ್ಫೋಟ ನಡೆಸಿದ್ದು ನಾನೇ...

ಸೇರಿದವನೆಂದು ವೀಡಿಯೋದಲ್ಲಿ ಹೇಳಿಕೊಂಡಿರುವ ಈತ, ಈ ಸಂಘಟನೆಯ ಬೋಧನೆಗಳು ದೇಶ ದ್ರೋಹ ಕೃತ್ಯಗಳಾಗಿತ್ತು. ಅದಕ್ಕೆ ಪ್ರತಿಭಟನಾರ್ಥವಾಗಿ ಸ್ಫೋಟದ ನಿರ್ಧಾರವನ್ನು ತೆಗೆದುಕೊಂಡಿದ್ದೇನೆ. ನಾನು ಯಾಕೆ ಸ್ಫೋಟಿಸಿದೆ ಎಂಬುದನ್ನು ಜನರಿಗೆ ತಿಳಿಸಲು ವೀಡಿಯೋ ಮಾಡುತ್ತಿದ್ದೇನೆ. ಕಳೆದ 16 ವರ್ಷದ ಹಿಂದೆ ಯಹೋವನ ವಿಟ್ನೆಸಸ್ ಕ್ರಿಶ್ಚಿಯನ್ ಧಾರ್ಮಿಕ ಗುಂಪಿನಲ್ಲಿ ಭಾಗಿಯಾಗಿದ್ದೇನೆ. ಈ ಸಂಘಟನೆಯ ದೇಶ ದ್ರೋಹ ಬೋಧನೆಗಳನ್ನು ಸರಿಪಡಿಸಿಕೊಳ್ಳುವಂತೆ ಹಲವಾರು ಬಾರಿ ಹೇಳಿದರೂ, ಅವರು ಅದನ್ನು ಸರಿಪಡಿಸಿಕೊಂಡಿಲ್ಲ. ಹೀಗಾಗಿ ನನಗೆ ಬೇರೆ ದಾರಿ ಕಾಣದೇ ಸಮಾವೇಶದಲ್ಲಿ ಸ್ಫೋಟ ನಡೆಸುವ ನಿರ್ಧಾರ ಕೈಗೊಂಡೆ ಎಂದು ಆತ ಹೇಳಿದ್ದಾನೆ.

ಈ ಸಂಬಂಧ ಯಹೋವನ ವಿಟ್ನೆಸಸ್ ಧಾರ್ಮಿಕ ಸಂಘಟನೆಯ ಸದಸ್ಯರೊಬ್ಬರು ಕೇರಳ ಸುದ್ದಿವಾಹಿನಿಯೊಂದರ ಜೊತೆ ಮಾತನಾಡಿ, ಡೊಮಾನಿಕ್ ಮಾರ್ಟಿನ್ ಎಂಬ ವ್ಯಕ್ತಿ ಪ್ರಸ್ತುತ ನಮ್ಮ ಸಂಘಟನೆಯಲ್ಲಿ ಇಲ್ಲ ಎಂದು ತಿಳಿಸಿದ್ದಾರೆ. ಅಲ್ಲದೇ ಸಮಾವೇಶದಲ್ಲಿ ಏನಾಯಿತು ಎಂಬುದು ನನಗೆ ನಿಖರವಾಗಿ ತಿಳಿದಿಲ್ಲ. ಆದರೆ ಸ್ಫೋಟ ಸಂಭವಿಸಿದೆ. ಡೊಮಾನಿಕ್ ಮಾರ್ಟಿನ್ ಎಂಬ ವ್ಯಕ್ತಿ ಅದರ ಸಂಪೂರ್ಣ ಜವಾಬ್ದಾರಿ ಹೊತ್ತು ವೀಡಿಯೋದಲ್ಲಿ ಮಾತನಾಡಿದ್ದಾನೆ ಎಂಬುದು ಮಾತ್ರ ನನಗೆ ಗೊತ್ತಿದೆ ಎಂದು ಹೇಳಿದ್ದಾರೆ.

ಮೈಸೂರಲ್ಲೂ ಪೊಲೀಸರ ಕಟ್ಟೆಚ್ಚರ

ನಡೆಸಲು ಪೊಲೀಸರು ಸಜ್ಜಾಗಿದ್ದಾರೆ. ಈ ಬಗ್ಗೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ, ಕಾನೂನು-ಸುವ್ಯವಸ್ಥೆ ಜೊತೆಗೆ ನಾಗರಿಕರ ಸುರಕ್ಷತೆ ದೃಷ್ಟಿಯಿಂದ ಪೊಲೀಸರ ಕಾರ್ಯಚಟುವಟಿಕೆ ನಿರಂತರವಾಗಿರುತ್ತದೆ. ಕೇರಳದಲ್ಲಿ ಸ್ಫೋಟ ಸಂಭವಿಸಿದ ಬಳಿಕ ಮತ್ತಷ್ಟು ನಿಗಾ ವಹಿಸಿದ್ದೇವೆ. ಹೊರಗಿನಿಂದ ಮೈಸೂರಿಗೆ ಬರುವವರ ಮೇಲೆ ಹೆಚ್ಚಿನ ಗಮನ ಇಟ್ಟಿದ್ದೇವೆ. ತಪಾಸಣೆ ತೀವ್ರಗೊಳಿಸಲಾಗಿದೆ. ಅರಮನೆ, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಹೆಚ್ಚಿನ ತಪಾಸಣೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಗಡಿಯಲ್ಲಿ ಕಟ್ಟೆಚ್ಚರ: ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆ ಕೇರಳ ಗಡಿಯಲ್ಲಿ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ. ಜಿಲ್ಲೆ ಪ್ರವೇಶಿಸುವ ಪ್ರತಿಯೊಂದು ವಾಹನಗಳನ್ನು ಕಡ್ಡಾಯವಾಗಿ ತಪಾಸಣೆ ನಡೆಸಲಾಗುತ್ತಿದೆ. ಈ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಪ್ರತಿಕ್ರಿಯಿಸಿ, ಅಂತರಸಂತೆ ಚೆಕ್ ಪೋಸ್ಟ್‌ನಲ್ಲಿ ವಾಹನ ತಪಾಸಣೆಯನ್ನು ನಿರಂತರವಾಗಿ ನಡೆಸಲಾಗುತ್ತಿದೆ. ಆದರೆ ಕೇರಳದಲ್ಲಿ ಸ್ಫೋಟ ಘಟಿಸಿದ ನಂತರ ಚೆಕ್‌ಪೋಸ್ಟ್‌ನಲ್ಲಿ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸಿ, ತೀವ್ರ ನಿಗಾ ವಹಿಸಲು ಸೂಚಿಸಲಾಗಿದೆ ಎಂದರು.

ಕರಾವಳಿ ಗಡಿಯಲ್ಲೂ ಕಟ್ಟೆಚ್ಚರ: ಕರಾವಳಿ ಭಾಗ ಮತ್ತು ಗಡಿ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ತೀವ್ರ ನಿಗಾ ವಹಿಸಲಾಗಿದೆ. ಕರ್ನಾಟಕದಲ್ಲಿ ಇಂತಹ ಘಟನೆ ನಡೆಯಲು ಅವಕಾಶ ನೀಡಲ್ಲ ಎಂದಿದ್ದಾರೆ.

ತೀವ್ರ ನಿಗಾ ಇರಿಸುವಂತೆ ಗುಪ್ತಚರ ಇಲಾಖೆಗೆ ಸೂಚಿಸಲಾಗಿದೆ. ಕೆಲ ಸಂಘಟನೆಗಳು ಸಕ್ರಿಯ ಆಗಬಹುದು ಅಥವಾ ಆಗದೇ ಇರಬಹುದು. ಎಲ್ಲ ಎಸ್‌ಪಿಗಳಿಗೆ ಸೂಚನೆ ನೀಡಲಾಗಿದೆ. ವ್ಯಕ್ತಿ ಹಾಗೂ ಸಂಘಟನೆ ಮೇಲೆ ಅನುಮಾನ ಬಂದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಸರ್ಕಾರದ ವಿವಿಧ ಇಲಾಖೆಗಳ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ


● ಪರೀಕ್ಷಾ ಅಕ್ರಮ ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ ● 12,627 ಅಭ್ಯರ್ಥಿಗಳ ನೋಂದಣಿ ● 9,565 ಅಭ್ಯರ್ಥಿಗಳು ಹಾಜರು ● ಪರೀಕ್ಷಾ ಕೇಂದ್ರದ ಸುತ್ತ ನಿಷೇಧಾಜ್ಞೆ

ಮೈಸೂರು, ಅ.29(ಬಿಎಲ್‌ಯು)- ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಮೈಸೂರಿನಲ್ಲಿ ಇಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿತು.

ಮೈಸೂರು ನಗರ, ಹುಣಸೂರು ಹಾಗೂ ನಂಜನಗೂಡಿನ 29 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಯಿತು. ಒಟ್ಟು 12,627 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದರು. ಇವರಲ್ಲಿ 9,565 ಅಭ್ಯರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗಿದ್ದರು.

ಆದರೆ 3,062 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದರೂ ಪರೀಕ್ಷೆಗೆ ಹಾಜರಾಗಿರಲಿಲ್ಲ. ನಿರುದ್ಯೋಗ ಸಮಸ್ಯೆ ಹೆಚ್ಚಾಗಿರುವ ಈ ಸಂದರ್ಭದಲ್ಲಿ ಸರ್ಕಾರದ ಕೆಲಸಕ್ಕೆ ಇವರು ಏಕೆ ನಿರಾಸಕ್ತಿ ತೋರಿದರು ಎಂಬ ಪ್ರಶ್ನೆ ಎದುರಾಗಿದೆ.

ಪರೀಕ್ಷಾ ಅಕ್ರಮಗಳಿಗೆ ಅವಕಾಶ ನೀಡದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬಹಳಷ್ಟು ಕಟ್ಟುನಿಟ್ಟಿನ ಕ್ರಮ ಕೈಗೊಂಡಿತ್ತು. ಪ್ರತಿಯೊಂದು ಪರೀಕ್ಷಾ ಕೇಂದ್ರದಲ್ಲಿ ಒಬ್ಬ ಸ್ಕ್ವಾಡ್, ಒಬ್ಬ ಚೀಫ್ ಕಸ್ಟೋಡಿಯನ್ ಹಾಗೂ ಒಬ್ಬ ಮೇಲ್ವಿಚಾರಕರನ್ನು ನಿಯೋಜಿಸಲಾಗಿತ್ತು. ಪರೀಕ್ಷೆಯಲ್ಲಿ ಯಾವುದೇ ಅಕ್ರಮ ನಡೆಯದಂತೆ ಇವರು ಹದ್ದಿನಕಣ್ಣಿಟ್ಟಿದ್ದರು.



ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣದ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು ಮತ್ತು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಯಿತು.

ದ್ವಿತೀಯ ದರ್ಜೆ ಸಹಾಯಕರು ಹಾಗೂ ಕಿರಿ ಸಹಾಯಕರು ಹುದ್ದೆಗಳಿಗೆ ಭರ್ತಿ ಮಾಡಲು ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಯಿತು. ಬೆಳಿಗ್ಗೆ 10.30 ಇಂದ 2.30 ಗಂಟೆ ತನಕ ಜನರಲ್ ನಾಲೆಡ್ಜ್ ಹಾಗೂ ಮಧ್ಯಾಹ್ನ 2.30 ರಿಂದ 4.30 ಗಂಟೆ ತನಕ ಕೆಇಸಿ ಪರೀಕ್ಷೆ ನಡೆಯಿತು.

ಪರೀಕ್ಷಾ ಕಾರ್ಯಗಳಿಗೆ ನೇಮಕಗೊಳ್ಳುವ ಅಧಿಕಾರಿಗಳ ಮಕ್ಕಳು ಅಥವಾ ಹತ್ತಿರ ಸಂಬಂಧಿಗಳು ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಿದ್ದಲ್ಲಿ, ಅಂತಹ ಅಧಿಕಾರಿಗಳು, ಸಿಬ್ಬಂದಿಗಳು ಸದರಿ ಪರೀಕ್ಷಾ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸಲು ಅನರ್ಹರಾಗಿರುತ್ತಾರೆ ಎಂದು ಸೂಚಿಸಲಾಗಿತ್ತು. ಇದರಿಂದ ಅಂತಹ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಿರಲಿಲ್ಲ.

ಸ್ಪರ್ಧಾತ್ಮಕ ಪರೀಕ್ಷೆ ನಡೆಯುತ್ತಿದ್ದ ಪ್ರತಿಯೊಂದು ಪರೀಕ್ಷಾ ಕೇಂದ್ರದ 200 ಮೀಟರ್ ಸುತ್ತ ಸೆಕ್ಷನ್ 144 ಪ್ರಕಾರ ನಿಷೇಧಾಜ್ಞೆ ವಿಧಿಸಲಾಗಿತ್ತು. ಪ್ರತಿಯೊಂದು ಪರೀಕ್ಷಾ ಕೇಂದ್ರಕ್ಕೆ ಪೊಲೀಸರನ್ನು ನಿಯೋಜಿಸಲಾಗಿತ್ತು. ಅಪರಿಚಿತ ವ್ಯಕ್ತಿಗಳನ್ನು ಒಳಗೆ ಬಿಡುತ್ತಿರಲಿಲ್ಲ. ಒಟ್ಟಾರೆ ಪರೀಕ್ಷಾ ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿತ್ತು.

ಮುಖ್ಯಮಂತ್ರಿ ಬದಲಾವಣೆ ವಿಚಾರ ಅಪ್ರಸ್ತುತ

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ



ಮೈಸೂರು,ಅ.29(ಎಂಟಿವೈ)- ಸಂವಿಧಾನಾತ್ಮಕ ಹುದ್ದೆಯಾದ ಮುಖ್ಯಮಂತ್ರಿ ಹುದ್ದೆ ಸದ್ಯಕ್ಕೆ ರಾಜ್ಯದಲ್ಲಿ ಖಾಲಿ ಇಲ್ಲ. ಸಿಎಂ ಹುದ್ದೆ ಬದಲಾವಣೆ ಪ್ರಶ್ನೆ ಈಗ ಅಪ್ರಸ್ತುತ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರಿನ ಸರ್ಕಾರಿ ಅತಿಥಿಗೃಹದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿ ವೇಳೆ ಎರಡೂವರೆ ವರ್ಷದ ನಂತರ ಮುಖ್ಯಮಂತ್ರಿ ಬದಲಾಗುತ್ತಾರೆ ಎಂದು ಕೆಲ ಕಾಂಗ್ರೆಸ್ ಶಾಸಕರು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಈಗ ಮುಖ್ಯಮಂತ್ರಿ ಹುದ್ದೆ ರಾಜ್ಯದಲ್ಲಿ ಖಾಲಿ ಇಲ್ಲ. ಸಿಎಂ ಸಿದ್ದರಾಮಯ್ಯ ಸಂವಿಧಾನದ ನಿಯಮಕ್ಕೆ ಅನುಗುಣವಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಅವರು ಉತ್ತಮ ಆಡಳಿತ ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ಬದಲಾವಣೆ ವಿಷಯ ಅಪ್ರಸ್ತುತ. ಯಾವುದೇ ಗೊಂದಲವಿಲ್ಲದೆ ಸರ್ಕಾರ ಉತ್ತಮ ಕಾರ್ಯಕ್ರಮ ಹಾಗೂ ಯೋಜನೆ ನೀಡುತ್ತಿದೆ ಎಂದು ಸ್ಪಷ್ಟಪಡಿಸಿದರು.

ಹುದ್ದೆ ವಿಚಾರವಲ್ಲ ಕೇವಲ ಮುದ್ದೆ ವಿಚಾರ ಚರ್ಚೆ: ಗೃಹ ಸಚಿವ ಡಾ.ಜಿ.ಪರಮೇಶ್ವರ್ ನಿವಾಸದಲ್ಲಿ ಡಿನ್ನರ್ ಪಾರ್ಟಿ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ದಸರಾ ವೇಳೆ ಮೈಸೂರಿಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಬಂದಿದ್ದಾಗ ಊಟಕ್ಕೆ ಕರೆದಿದ್ದರು. ಆ ವೇಳೆ ಹೋಗಲು ಆಗಲಿಲ್ಲ. ಅ.28ರಂದು ಊಟಕ್ಕೆ ಸೇರೋಣ ಎಂದುಕೊಂಡಿದ್ದೆವು. ಆದರೆ, ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಾಗಿದ್ದರಿಂದ ಅ.27ರಂದೇ ಬೆಂಗಳೂರಲ್ಲಿ ಡಾ.ಜಿ.ಪರಮೇಶ್ವರ್ ಅವರ ಆಹ್ವಾನದ ಮೇರೆಗೆ ಊಟಕ್ಕೆ ಸೇರಿದ್ದೆವು. ಈ ವೇಳೆ ಊಟದ ರುಚಿ ಬಗ್ಗೆ ಮಾತ್ರ ಚರ್ಚೆ ಮಾಡಿದ್ದೇವೆ ಹೊರತು ರಾಜಕೀಯದ ಬಗ್ಗೆ ಮಾತನಾಡಲಿಲ್ಲ. ಅಲ್ಲಿ ಮುದ್ದೆ ಬಿಟ್ಟು ಯಾವ ಹುದ್ದೆಯ ಬಗ್ಗೆಯೂ ಚರ್ಚೆಯಾಗಿಲ್ಲ ಎಂದು ಹಾಸ್ಯ ಚಟಾಕಿ ಆರಿಸಿದರು.

ಚರ್ಚೆಗೆ ವಿಷಯಗಳೇ ಇಲ್ಲದಿರುವಾಗ ಅಧಿಕಾರ ಹಂಚಿಕೆ, ನಾಯಕತ್ವ ಬದಲಾವಣೆ ವಿಚಾರಗಳು ಮುನ್ನೆಲೆಗೆ ಬರುತ್ತವೆ. ಎರಡೂವರೆ ವರ್ಷದ ನಂತರ ಮುಖ್ಯಮಂತ್ರಿ, ಸಚಿವ ಸಂಪುಟ ವಿಸ್ತರಣೆ ಬಗ್ಗೆ ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಸವ ಚಳವಳಿ ತೀವ್ರವಾಗಲಿ: ಸಚಿವ ಎಂ.ಬಿ.ಪಾಟೀಲ್ ಅವರು ಕರ್ನಾಟಕವನ್ನು ಬಸವನನಾಡು ಎಂದಾಗಬೇಕೆಂಬ ಅಭಿಪ್ರಾಯಕ್ಕೆ ಪ್ರತಿಕ್ರಿಯಿಸಿದ ಮಹದೇವಪ್ಪ ಅವರು ಕರ್ನಾಟಕದಲ್ಲಿ ಬಸವ ಚಳವಳಿ ತೀವ್ರವಾಗಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ವಿ.ಮಂಜುನಾಥ್, ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್, ಮುಖಂಡರಾದ ಎಂ.ಶಿವಣ್ಣ, ಬಿ.ಎಂ.ರಾಮು ಸೇರಿದಂತೆ ಇನ್ನಿತರರು ಇದ್ದರು.

ರಾಜ್ಯ ಮಟ್ಟದ ಕಾವ್ಯೋತ್ಸವ



ಮೈಸೂರು, ಅ.29(ಬಿಎಲ್‌ಯು)- ಮೈಸೂರಿನ ಕೆ.ಜಿ.ಕೊಪ್ಪಲ್‌ನಲ್ಲಿರುವ ನೇಗಿಲ ಯೋಗಿ ಮರುಳೇಶ್ವರ ಸೇವಾ ಭವನದಲ್ಲಿ ಇಂದು ದಸರಾ ಕವಿ-ಕಾವ್ಯ ಸಂಭ್ರಮ ರಾಜ್ಯ ಮಟ್ಟದ ಕಾವ್ಯೋತ್ಸವ ನಡೆಯಿತು.

ಮೈಸೂರಿನ ಸ್ಪಂದನ ಸಾಂಸ್ಕೃತಿಕ ಪರಿಷತ್ ಆಯೋಜಿಸಿದ್ದ ರಾಜ್ಯ ಮಟ್ಟದ ಕಾವ್ಯೋತ್ಸವವನ್ನು ಖ್ಯಾತ ಕವಯತ್ರಿಯೂ ಆದ ಗಾಯಕಿ ಹೆಚ್.ಆರ್.ಲೀಲಾವತಿ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಮಂಗಳೂರಿನ ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಅಧೀಕ್ಷಕ ಡಾ.ಎ.ಎನ್.ಪ್ರಕಾಶ್ ಗೌಡ, ಸಣ್ಣ ಬೀಜದಿಂದ ಮರವಾದಂತೆ ಒಂದೇ ದಿನಕ್ಕೆ ಯಾರೂ ದೊಡ್ಡ ವ್ಯಕ್ತಿಯಾಗಿ ರೂಪುಗೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಕವಿ ಕೂಡ ಏಕಾಏಕಿ ಪ್ರಖ್ಯಾತಿ ಗಳಿಸಲು ಸಾಧ್ಯವಿಲ್ಲ. ಸೃಜನಾತ್ಮಕ ಬರವಣಿಗೆ ಮೂಲಕ ಹಂತ ಹಂತವಾಗಿ ದೊಡ್ಡ ಕವಿಯಾಗಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಪರಿಶ್ರಮ ಹಾಗೂ ಅರ್ಪಣಾ ಮನೋಭಾವದಿಂದ ಸಾಹಿತ್ಯ ಕೃಷಿ ಮಾಡಬೇಕು ಎಂದು ಸಲಹೆ ನೀಡಿದರು.

ಮೈಸೂರಿನ ಶಾಸ್ತ್ರೀಯ ಕನ್ನಡ ಅತ್ಯುನ್ನತ ಕೇಂದ್ರದ ಯೋಜನಾ ನಿರ್ದೇಶಕ ಡಾ.ನೀಲಗಿರಿ ಎಂ.ತಳವಾರ್, ಸ್ಪಂದನ ಸಾಂಸ್ಕೃತಿಕ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಬಿ.ಸತೀಶ್ ಜವರೇಗೌಡ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಗೋಪಾಲಗೌಡ ಶಾಂತವೇರಿ ಆಸ್ಪತ್ರೆಯ ಮುಖ್ಯಸ್ಥ ಡಾ.ಶಶ್ರೂತ್ ಗೌಡ, ಸಂಜೆ ವಿಹಾರ ಕೃತಿ ಲೇಖಕ ಮೊಹಮ್ಮದ್ ಅಜರುದ್ದೀನ್, ಅಂಕಣಕಾರ ಮಿರ್ಲೆ ಚಂದ್ರಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಸತಿ ಶಾಲೆ ವಿದ್ಯಾರ್ಥಿ ನಾಪತ್ತೆ

ಮೈಸೂರು, ಅ.29-ದಸರಾ ರಜೆ ಮುಗಿಸಿ ವಸತಿ ಶಾಲೆಗೆ ಮರಳಬೇಕಿದ್ದ ಹತ್ತನೇ ತರಗತಿ ವಿದ್ಯಾರ್ಥಿ ಮನೆಯಿಂದ ನಾಪತ್ತೆಯಾಗಿರುವ ಪ್ರಕರಣ ಬನ್ನೂರು ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ದಾಖಲಾಗಿದೆ. ಮೈಸೂರು ಜಿಲ್ಲೆಯ ನರಸೀಪುರ ತಾಲೂಕಿನ ಜೈಭೀಮ್ ನಗರದ ನಿವಾಸಿ ಮಲ್ಲೇಶ್ ಪುತ್ರ ಪ್ರಬುದ್ಧ ಕಾಣೆಯಾಗಿರುವ ವಿದ್ಯಾರ್ಥಿ.



ಮುಡುಕುತೊರೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 10ನೇ ತರಗತಿ ವ್ಯಾಸಂಗ ಮಾಡುತ್ತಿದ್ದ. ಈತ ದಸರಾ ರಜೆ ಹಿನ್ನೆಲೆಯಲ್ಲಿ ಅ.8ರಂದು ಮನೆಗೆ ವಾಪಸ್ ಬಂದಿದ್ದ. ರಜೆ ಕಳೆದ ನಂತರ ಅ.25ರಂದು ಶಾಲೆಗೆ ಕರೆದುಕೊಂಡು ಹೋಗುತ್ತೀನಿ ಎಂದು ತಂದೆ ತಿಳಿಸಿದರು. ಆದರೆ, ಅಂದು ಮಧ್ಯಾಹ್ನ 2.10ಕ್ಕೆ ಮನೆಗೆ ಬಂದು ನೋಡಿದಾಗ ಮನೆಯಲ್ಲಿ ಕಾಣದಿದ್ದು, ಈವರೆಗೂ ವಾಪಸ್ಸಾಗಿಲ್ಲ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಬನ್ನೂರು ಪೊಲೀಸ್ ಠಾಣೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಿದ್ದಾರೆ.

ಪುನೀತ್ ಸ್ಮರಣಾರ್ಥ, ಪರಿಸರ ಕುರಿತು ಚಿತ್ರಕಲಾ ಸ್ಪರ್ಧೆ



ಮೈಸೂರು, ಅ.29(ಜಿಎ)-ನಟ ಪುನೀತ್ ರಾಜ್‌ಕುಮಾರ್ ಯುವ ಸಮೂಹವನ್ನು ಹೆಚ್ಚು ಪ್ರಭಾವಿಸಿದ್ದರು. ಅವರ ಸವಿನೆನಪಲ್ಲಿ ಎಳೆಯ ಮಕ್ಕಳಿಗೆ ನಮ್ಮ ನೆಲ, ಜಲ, ಕಾಡು ಮೇಡು, ಪರಿಸರ ಕುರಿತಂತೆ 'ಗಂಧದಗುಡಿ' ಶೀರ್ಷಿಕೆಯಡಿ ಸ್ಥಳದಲ್ಲೇ ಚಿತ್ರಕಲಾಸ್ಪರ್ಧೆ ಏರ್ಪಡಿಸಿರುವುದು ಶ್ಲಾಘನೀಯ. ಇದು ಪರಿಸರ ಸಂರಕ್ಷಣೆಗೆ ಪೂರಕವಾದ ಅರಿವನ್ನು ಮೂಡಿಸಲಿ ಎಂದು ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಅವರು ತಿಳಿಸಿದರು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ಭಾನುವಾರ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಚಿತ್ರಕಲಾ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ನಟನೆಯನ್ನೇ ಜೀವನದ ಸರ್ವಸ್ವವೆಂದು ತಿಳಿದು, ರಾಜ್ಯದ ಯುವಜನತೆಗೆ ಸಂವೇದನಾಶೀಲತೆಯ ಅಭಿಪ್ರಾಯವನ್ನು ಮೂಡಿಸಿದ ಪ್ರತಿಭಾನ್ವಿತ ನಟ. ಅವರ ಅಗಲಿಕೆಯು ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ ಎಂದರು.

ವನ್ಯಜೀವಿಗಳು ನಮ್ಮ ದೇಶಕ್ಕೆ ಅಮೂಲ್ಯವಾದ ಸಂಪತ್ತು. ಕಾಡಿನ ಪ್ರಾಣಿ, ಪಕ್ಷಿ ವಿವಿಧ ಜೀವ ಸಂಕುಲಗಳ ಬಗ್ಗೆ ತಿಳಿಯುವುದೇ ಒಂದು ಕೌತುಕ. ಈ ನಿಟ್ಟಿನಲ್ಲಿ ಮಕ್ಕಳು ಮನಸ್ಸಿನಲ್ಲಿ ಮೂಡಿದ ಪರಿಕಲ್ಪನೆಯಲ್ಲಿ ಕುಂಚದ ಮೂಲಕ ಬಿಡಿಸುವ ಚಿತ್ರಗಳು ಅವರ ಸೃಜನಶೀಲತೆಯ ಅಭಿವೃದ್ಧಿಗೆ ನೆರವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಅನೇಕ ಪರಿಕಲ್ಪನೆಯಡಿ ಬಿಡಿಸಿದ ಚಿತ್ರವು ವಿಶ್ವಖ್ಯಾತಿ ಪಡೆದಿವೆ. ಅದಕ್ಕೆ ರವಿವರ್ಮನ ಕುಂಚದಲ್ಲಿ ಅರಳಿದ ಚಿತ್ರಗಳೇ ಸಾಕ್ಷಿ. ಅವರ ಚಿತ್ರಕ್ಕೆ ಸರಿಹೊಂದುವ ಚಿತ್ರಗಳು ಇದುವರೆಗೂ ಮೂಡಿಬಂದಿಲ್ಲ. ಇದಕ್ಕೆ ಪ್ರಮುಖವಾಗಿ ಏಕಾಗ್ರತೆ, ಮನಸ್ಸಿನ ನಿಗ್ರಹ, ಅತ್ಯುತ್ತಮ ಕಲ್ಪನೆ ಅವಶ್ಯಕ. ಸಮಚಿತ್ತತೆಯು ಮನುಷ್ಯನನ್ನು ಸಾಧನೆಗೆ ಪ್ರೇರೇಪಿಸುತ್ತದೆ ಎಂದು ತಿಳಿಸಿದರು.

ಎಲ್ಲಾ ಸಮುದಾಯದ ಜನರು ಒಟ್ಟಾಗಿ ಸಾಗಿದರೆ ಎಲ್ಲರ ಸಾಂಸ್ಕೃತಿಕ ಬದುಕನ್ನು ವಿಶ್ಲೇಷಣೆ ಮಾಡಿ ದೇಶಕ್ಕೆ ಒಗ್ಗಟ್ಟಿನ ಸಂದೇಶ ಹೇಗೆ ನೀಡಬಹುದು ಎಂಬುದನ್ನು ನಾವೆಲ್ಲರೂ ಈ ದಸರೆಯಲ್ಲಿ ನಿರೂಪಿಸಿದ್ದೇವೆ. ದಸರಾ ಇಷ್ಟೊಂದು ಅಚ್ಚುಕಟ್ಟಾಗಿ ನೆರವೇರಲು ಸಹಕರಿಸಿದ ಮೈಸೂರಿನ ಸಮಸ್ತ ಜನತೆಗೆ, ಪಕ್ಷಾತೀತವಾಗಿ ಬೆಂಬಲ ನೀಡಿದ ಎಲ್ಲಾ ಜನಪ್ರತಿನಿಧಿಗಳಿಗೆ, ಜಿಲ್ಲಾಡಳಿತಕ್ಕೆ, ಅಧಿಕಾರಿ ವರ್ಗಕ್ಕೆ, ಸ್ವಚ್ಛತೆ ಕಾಪಾಡಿದ ಪೌರಕಾರ್ಮಿಕರಿಗೆ ಸರ್ಕಾರದ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಶ್ರೀವತ್ಸ, ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪ, ನಗರಪಾಲಿಕೆ ಸದಸ್ಯರಾದ ಛಾಯಾದೇವಿ, ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಒ ರಾಜೇಶ್ ಜಿ.ಗೌಡ ಜೀವಧಾರ ಗಿರೀಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಕಲಾಮಂದಿರದಲ್ಲಿ ನಡೆದ ವಾಲ್ಮೀಕಿ ಜಯಂತ್ಯುತ್ಸವದಲ್ಲಿ ನಾಯಕ ಸಮುದಾಯದ ಮುಖಂಡರು ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಉದ್ಬೂರು ಮಹಾದೇವಸ್ವಾಮಿ, ವೀರನಗೆರೆ ದೇವರಾಜ್, ಕ್ಯಾತಮಾರನಹಳ್ಳಿ ವೆಂಕಟೇಶ್, ಟೆನಿಸ್ ಗೋಪಿ, ಕುಮಾರಬೀಡು ಮರಿಸ್ವಾಮಿ, ಕಡಕೊಳ ಕುಮಾರಸ್ವಾಮಿ, ಸಾಹುಕಾರ್ ಹುಂಡಿ ಮಹಾದೇವ, ವಿನೋದ್ ನಾಗವಾಲ, ಹಿನಕಲ್ ಚಂದ್ರು ಉಪಸ್ಥಿತರಿದ್ದರು.

ರೈತರ ಬಾಕಿ ಬಿಡುಗಡೆ ಮಾಡಿಸದಿದ್ದರೆ ಸಿಎಂ ಮನೆ ಮುಂದೆ ಪ್ರತಿಭಟನೆ

ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಭೆಯಲ್ಲಿ ತೀರ್ಮಾನ

ಮೈಸೂರು, ಅ.29(ಬಿಎಲ್‌ಯು)- ಮೈಸೂರಿನ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಬಾಕಿ ಬರಬೇಕಿರುವ 24 ಕೋಟಿ ರೂಪಾಯಿ ಕೂಡಲೇ ಬಿಡುಗಡೆ ಮಾಡಿಸುವಂತೆ ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರು ಮುಖ್ಯಮಂತ್ರಿ ಸಿದ್ದರಾಮಯ್ಯ ಮನೆ ಮುಂದೆ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದಾರೆ.

ಮೈಸೂರಿನ ನಜರ್‌ಬಾದ್‌ನ ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹದಲ್ಲಿ ನಡೆದ ರೈತರ ಸಭೆಯಲ್ಲಿ ಸಂಘ ಈ ತೀರ್ಮಾನ ಕೈಗೊಂಡಿತು.



ಒಂದು ಟನ್ ಕಬ್ಬಿಗೆ 150 ರೂಪಾಯಿ ನೀಡುವಂತೆ ಸರ್ಕಾರ ಆದೇಶ ನೀಡಿತ್ತು. ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಕೂಡ ಒಪ್ಪಿತ್ತು. ಆದರೆ ಈ ತನಕ ಹಣ ನೀಡಿಲ್ಲ. ಈ ಹಿನ್ನೆಲೆ ಒಂದು ವಾರದೊಳಗೆ ಸಕ್ಕರೆ ಕಾರ್ಖಾನೆಗೆ ಆದೇಶ ಮಾಡಿ ಹಣ ಕೊಡಿಸಲು ಗಡುವು ನೀಡಲಾಗಿದೆ ಎಂದು ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ಒಂದು ವೇಳೆ ವಾರದೊಳಗೆ ಹಣ ಬರದಿದ್ದರೆ ಮೈಸೂರಿನ ಸಿದ್ದರಾಮಯ್ಯ ಮನೆ ಮುಂದೆ ಪ್ರತಿಭಟನೆ ನಡೆಸುತ್ತೇವೆ. ನಮ್ಮ ಬೇಡಿಕೆ ಈಡೇರುವ ತನಕ ಅಲ್ಲಿಂದ ಕದಲುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಚುನಾವಣೆಗೂ ಮುನ್ನ ರೈತರ ಪಂಪ್ ಸೆಟ್‌ಗಳಿಗೆ 10 ಗಂಟೆ ವಿದ್ಯುತ್ ನೀಡಲಾಗುವುದು ಎಂದು ಭರವಸೆ ನೀಡಿದರು. ಆದರೆ ಈಗ 5 ಗಂಟೆ ಕೂಡ ವಿದ್ಯುತ್ ದೊರೆಯುತ್ತಿಲ್ಲ. ವಿದ್ಯುತ್ ಕಣ್ಣು ಮುಚ್ಚಾಲೆಯಿಂದ ರೈತರು ಕಂಗಾಲಾಗಿದ್ದಾರೆ. ನುಡಿದಂತೆ ನಡೆಯುತ್ತೇವೆ ಎಂದು ಹೇಳುವ ಸರ್ಕಾರ ಈಗ ವಚನಭ್ರಷ್ಟವಾಗಿದೆ ಎಂದು ಕುರುಬೂರು ಶಾಂತಕುಮಾರ್ ಆರೋಪಿಸಿದರು.

ಕೈಗಾರಿಕೆಗಳಿಗೆ ದಿನದ 24 ಗಂಟೆಯೂ ವಿದ್ಯುತ್ ನೀಡುವ ಸರ್ಕಾರ ಅನ್ನದಾತರಿಗೆ ಮಾತ್ರ ಮೋಸ ಮಾಡುತ್ತಿದೆ. ತಾರತಮ್ಯ ಮಾಡುತ್ತಿರುವ ಸರ್ಕಾರ ತನ್ನ ಧೋರಣೆ ಬದಲಿಸಬೇಕು. ರೈತರಿಗೆ ಮೊದಲ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದರು.

ಕನ್ನಡ ರಾಜ್ಯೋತ್ಸವದ 50 ವರ್ಷಗಳ ಆಚರಣೆ ವೇಳೆ ಎಲ್ಲಾ ಕಂದಾಯ ಹಾಗೂ ಇತರೆ ಇಲಾಖೆಗಳ ನ್ಯಾಯಾಲಯಗಳಲ್ಲಿ ಕನ್ನಡದಲ್ಲೇ ವಾದ ಮಾಡಲು ಸರ್ಕಾರ ಆದೇಶ ನೀಡಬೇಕು. ಇದರಿಂದ ಆಂಗ್ಲ ಭಾಷೆ ತಿಳಿಯದ ರೈತರಿಗೆ ಅನುಕೂಲವಾಗುತ್ತದೆ. ಇಂಗ್ಲಿಷ್ ಭಾಷೆಯ ಮೂಲಕ ರೈತರಿಗೆ ಮಾಡುತ್ತಿರುವ ಶೋಷಣೆ ಕೂಡ ತಪ್ಪುತ್ತದೆ ಎಂದು ಹೇಳಿದರು.

ರಾಷ್ಟ್ರರಾಜಧಾನಿ ದೆಹಲಿಯಲ್ಲಿ ನವೆಂಬರ್ 6 ಮತ್ತು 7 ರಂದು ರಾಜಕೀಯೇತರ ಸಂಯುಕ್ತ ಕಿಸಾನ್ ಮೋರ್ಚಾದ ಸಭೆ ಆಯೋಜಿಸಲಾಗಿದೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ರೈತರ ನಿಲುವು ಏನು ಎಂದು ಅಂದಿನ ಸಭೆಯಲ್ಲಿ ತೀರ್ಮಾನಿಸಲಾಗುವುದು ಎಂದು ಕುರುಬೂರು ಶಾಂತಕುಮಾರ್ ತಿಳಿಸಿದರು.

ಸಂಘದ ಜಿಲ್ಲಾಧ್ಯಕ್ಷ ಪಿ. ಸೋಮಶೇಖರ್, ಹತ್ತಳ್ಳಿ ದೇವರಾಜ್, ಬರಡನಪುರ ನಾಗರಾಜ್, ಹಳಿಕೆರೆಹುಂಡಿ ಭಾಗ್ಯರಾಜ್, ಕಿರಗಸೂರ ಶಂಕರ, ಕುರುಬೂರು ಸಿದ್ದೇಶ್, ಹಾಡ್ಯ ರವಿ, ಪಟೇಲ್ ಶಿವಮೂರ್ತಿ, ಲಕ್ಷ್ಮಿಪುರ ವೆಂಕಟೇಶ್ ಸೇರಿದಂತೆ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಎಸ್ಸಿಗೆ ಕಾಂಗ್ರೆಸ್ ಹೆಚ್ಚು ಅಧಿಕಾರ ನೀಡಿದೆ

● ಶಾಸಕ ಡಿ.ರವಿಶಂಕರ್ ಹೇಳಿಕೆ ● ಕೆ.ಆರ್.ನಗರದಲ್ಲಿ ವಾಲ್ಮೀಕಿ ಜಯಂತಿ



ಕೆ.ಆರ್.ನಗರ, ಅ.29– ಪರಿಶಿಷ್ಟ ಪಂಗಡಕ್ಕೆ ರಾಜಕೀಯವಾಗಿ ಕಾಂಗ್ರೆಸ್ ನೀಡಿರುವಷ್ಟು ಅಧಿಕಾರವನ್ನು ಬೇರೆ ಯಾವುದೇ ಪಕ್ಷ ನೀಡಿಲ್ಲ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಡಾ.ರಾಜಕುಮಾರ್ ಬಾನಂಗಳದಲ್ಲಿ ತಾಲೂಕು ಆಡಳಿತ, ಪುರಸಭೆ, ಸಮಾಜ ಕಲ್ಯಾಣ ಇಲಾಖೆ, ತಾಲೂಕು ನಾಯಕ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪರಿಶಿಷ್ಟ ಪಂಗಡದ ಸಮುದಾಯವನ್ನು ಕಾಂಗ್ರೆಸ್ ಗುರುತಿಸುವ ಮೂಲಕ ಹೆಚ್ಚು ಅಧಿಕಾರ ನೀಡಿದೆ ಎಂದರು.

ರಾಜ್ಯದಲ್ಲಿ 2.25 ಲಕ್ಷ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದು. ಜತೆಗೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಇನ್ನಿತರ ಭತ್ಯೆಗಳನ್ನು ಮಂಜೂರು ಮಾಡಿಸಲು ಪ್ರಯತ್ನಿಸಲಾಗುವುದು. ಸಾಲಿಗ್ರಾಮ ಮತ್ತು ತಿಪ್ಪೂರು ಮಂಜನಹಳ್ಳಿ ಗ್ರಾಮಗಳಿಗೆ ವಾಲ್ಮೀಕಿ ಸಮುದಾಯ ಭವನಕ್ಕೆ ನಿವೇಶನ ಮತ್ತು ನಿರ್ಮಾಣಕ್ಕೆ ಅನುದಾನ ನೀಡುವುದಾಗಿ ಭರವಸೆ ನೀಡಿದರು.

ಪ್ರೊ.ಜಿ.ಹನುಮಂತಪ್ಪ, ಹಬ್ಬಗಳ ಆಚರಣೆ ಸಮಿತಿಯ ತಾಲೂಕು ಅಧ್ಯಕ್ಷೆ ಸಿ.ಎಸ್.ಪೂರ್ಣಿಮಾ ಮಾತನಾಡಿದರು. ಇದಕ್ಕೂ ಮುನ್ನ ಪಟ್ಟಣದ ಕೃಷ್ಣರಾಜೇಂದ್ರ ಪದವಿಪೂರ್ವ ಕಾಲೇಜು ಆವರಣದಿಂದ ಡಾ.ರಾಜಕುಮಾರ್ ಬಾನಂಗಳದವರೆಗೆ ವಾಲ್ಮೀಕಿ ಭಾವಚಿತ್ರವನ್ನು ವಿವಿಧ ಕಲಾ ತಂಡ, ಸ್ತಬ್ಧಚಿತ್ರ, ಮಂಗಳವಾದ್ಯದೊಂದಿಗೆ ಮೆರವಣಿಗೆ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರು ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಪುರಸಭೆ ಸದಸ್ಯರಾದ ಶಿವುನಾಯಕ್ ಶಂಕರ್, ನಟರಾಜ್ ಪ್ರಕಾಶ್, ಟಿಎಪಿಸಿಎಂಎಸ್ ನಿರ್ದೇಶಕ ತೋಟಪ್ಪ ನಾಯಕ, ತಾಲೂಕು ವಾಲ್ಮೀಕಿ ಸಮುದಾಯದ ಅಧ್ಯಕ್ಷ ನರಸಿಂಹ ನಾಯಕ, ಮಾದನಾಯಕ, ಮಹಾದೇವ ನಾಯಕ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಎಸ್.ಎಂ.ಅಶೋಕ್ ಕುಮಾರ್, ತಾಲೂಕು ಪಂಚಾಯಿತಿ ಇಒ ಜಿ.ಕೆ.ಹರೀಶ್, ಬಿಇಒ ಕೃಷ್ಣಪ್ಪ, ಪಿಡಬ್ಲ್ಯೂಡಿ ಎಇಇ ಸುಮಿತಾ ಇನ್ನಿತರರು ಹಾಜರಿದ್ದರು.

ಮಹರ್ಷಿ ವಾಲ್ಮೀಕಿ ಆದರ್ಶ ಅಳವಡಿಸಿಕೊಳ್ಳಬೇಕು

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಅಭಿಮತ



ನಂಜನಗೂಡು: ಮಹರ್ಷಿ ವಾಲ್ಮೀಕಿ ಅವರ ತತ್ವ ಸಿದ್ಧಾಂತ ಮತ್ತು ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸಿ.ಚಿಕ್ಕರಂಗ ನಾಯಕ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ನಡೆದ ವಾಲ್ಮೀಕಿ ಜಯಂತ್ಯುತ್ಸವದಲ್ಲಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಾಮಾಜಿಕ ಕ್ರಾಂತಿಯ ಮೂಲಕ ಮನುಕುಲಕ್ಕೆ ಸಂದೇಶ ಸಾರಿದ ಬುದ್ಧ, ಬಸವ, ಅಂಬೇಡ್ಕರ್, ಕನಕದಾಸರು ಕೇವಲ ಒಂದೇ ಸಮಾಜಕ್ಕೆ ಸೀಮಿತರಾದವರಲ್ಲ. ಆ ಮಹನೀಯರು ಸಮಾಜದ ಆಸ್ತಿ ಎಂದರು.

ಮಹರ್ಷಿ ವಾಲ್ಮೀಕಿ ಅವರ ರಾಮಾಯಣ ಇಡೀ ಪ್ರಪಂಚಕ್ಕೆ ಕೌಟುಂಬಿಕ ಮೌಲ್ಯಗಳನ್ನು ಸಾರುವ ಕೃತಿಯಾಗಿದೆ. ಮೊದಲು ವಾಲ್ಮೀಕಿ ಅವರು ಬದಲಾಗಿ, ನಂತರ ಮನುಕುಲ ಹೇಗೆ ಸಾಗಬೇಕು ಎಂದು ತಮ್ಮ ಕೃತಿ ಮೂಲಕ ತಿಳಿಸಿದ್ದಾರೆ. ಆದ್ದರಿಂದ ಈ ಕೃತಿ ಮೊದಲು ನಾನು ಬದಲಾದರೆ ಪ್ರಪಂಚದ ಬದಲಾವಣೆ ಸಾಧ್ಯ ಎಂಬ ಸಂದೇಶವನ್ನು ಸಾರಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್ ಹೊರಳವಾಡಿ, ಮುಖಂಡರಾದ ಹೆಮ್ಮರಗಾಲ ಸೋಮಣ್ಣ, ಶಿವಣ್ಣ, ಗೋವಿಂದರಾಜು, ಮಹೇಶ್ ಬಾಬು, ತಾಪಂ ಮಾಜಿ ಸದಸ್ಯ ಹೆಮ್ಮರಗಾಲ ಶಿವಣ್ಣ ಮತ್ತಿತರರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಲಿಯೋ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಲಿಯೋ (ಕ)	2 ಪ್ರದರ್ಶನಗಳು
ಲಿಯೋ (ತ)	2 ಪ್ರದರ್ಶನಗಳು
ಗಾಯಿತ್ರಿ	
ಘೋಸ್ಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವಂತ್ ಕೇಸರಿ (ತೆ)	4 ಪ್ರದರ್ಶನಗಳು
ಸಂಗಂ	
ಟಗರುಪಲ್ಯ(ಕ)	4 ಪ್ರದರ್ಶನಗಳು
ಲಿಡೋ	
ಲಿಯೋ (ಕ)	2 ಪ್ರದರ್ಶನಗಳು
ಲಿಯೋ (ತ)	2 ಪ್ರದರ್ಶನಗಳು
ತಿಬ್ಬಾದೇವಿ	
ಲಿಯೋ(ತ)	4 ಪ್ರದರ್ಶನಗಳು
ಪ್ರಭಾ	
ರೋಣಿ (ಕ)	2 ಪ್ರದರ್ಶನಗಳು
ಇನಾಮ್‌ದಾರ್(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಲಿಂಯೋ (ತ):** ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, **ಘೋಸ್ಟ್ (ಕ):** ಮ.1.10ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	**ದಸರಾ ಚಿತ್ರಗಳು:** ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, **ಗಣಪತ್ (ಹಿಂ):** ರಾ.10.20ಕ್ಕೆ.
ಸ್ಕ್ರೀನ್ 3	**ಯಾರಿಯನ್ 2 (ಹಿಂ):** ಬೆ.10.05ಕ್ಕೆ, **ಗಣಪತ್ (ಹಿಂ):** ಮ.1ಕ್ಕೆ, **ಟೈಗರ್ ನಾಗೇಶ್ವರ್ ರಾವ್ (ತೆ):** ಮ.3.35ಕ್ಕೆ, ರಾ.7ಕ್ಕೆ, **ಭಗವಂತ್ ಕೇಸರಿ (ತೆ):** ರಾ.10.25ಕ್ಕೆ.
ಸ್ಕ್ರೀನ್ 4	**ಘೋಸ್ಟ್ (ಕ):** ಬೆ.10.15ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, **ಲಿಂಯೋ (ತ):** ಮ.1ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಲಿಯೋ (ತ):** ಬೆ.9.35ಕ್ಕೆ, ಮ.3.55ಕ್ಕೆ, **ಘೋಸ್ಟ್ (ಕ):** ಮ.1ಕ್ಕೆ, ರಾ.7.20ಕ್ಕೆ, **ಗಣಪತ್ (ಹಿಂ):** ರಾ.10.15ಕ್ಕೆ.
ಸ್ಕ್ರೀನ್ 2	**ಲಿಯೋ (ತ):** ರಾ.10.20ಕ್ಕೆ.
ಸ್ಕ್ರೀನ್ 3	**ಭಗವಂತ್ ಕೇಸರಿ (ತೆ):** ರಾ.10.30ಕ್ಕೆ.
ಸ್ಕ್ರೀನ್ 4	**ಟೈಗರ್ ನಾಗೇಶ್ವರ್ ರಾವ್ (ತೆ):** ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ಪರಿಶುದ್ಧಂ (ಕ):** ಬೆ.10.30ಕ್ಕೆ, **ಹನಿಮೂನ್ ಇನ್ ಬ್ಯಾಂಕಾಕ್(ಕ):** ಮ.1.30ಕ್ಕೆ, **ಧ್ವಂದ್ವ (ಕ):** ಸಂ.4.20ಕ್ಕೆ, **ಬನ್ ಟೀ (ಕ):** ಸಂ.6.45ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ರಾ.9.15ಕ್ಕೆ.
ಸ್ಕ್ರೀನ್ 2	**ಜವಾನ್ (ಹಿಂ):** ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	**ದಿ ನನ್ 2 (ಇಂ):** ಸಂ.4.45ಕ್ಕೆ, **ಜವಾನ್ (ಹಿಂ):** ರಾ.7ಕ್ಕೆ.
ಸ್ಕ್ರೀನ್ 4	**ಜವಾನ್ (ಹಿಂ):** ಬೆ.10.30ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ (ಕ):** ಮ.1.45ಕ್ಕೆ, ಸಂ.4.45ಕ್ಕೆ, **ದಿ ನನ್ 2 (ಇಂ):** ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, **ಗಣಪತ್ (ಹಿಂ):** ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, **ಘೋಸ್ಟ್ (ಕ):** ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, **ಲಿಯೋ (ಕ):** ಮ.12.15ಕ್ಕೆ, **ಲಿಯೋ (ತ):** ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, **ಲಿಯೋ (ತ):** ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, **ಟೈಗರ್ ನಾಗೇಶ್ವರ್ ರಾವ್ (ತೆ):** ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, **ಯಾರಿಯನ್ 2 (ಹಿಂ):** ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಾರ್ವಜನಿಕ ಆಸ್ಪತ್ರೆಯಲ್ಲಿ ಮೂಳೆ ಸಾಂದ್ರತೆ ಪರೀಕ್ಷೆ



ತಿ.ನರಸೀಪುರ: ಪಟ್ಟಣದ ಸಾರ್ವ ಜನಿಕ ಆಸ್ಪತ್ರೆಯಲ್ಲಿ ಗುರುವಾರ ಮೂಳೆ ಸಾಂದ್ರತೆ ಪರೀಕ್ಷೆ ಶಿಬಿರ ನಡೆಸಲಾಯಿತು.

ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಬಿ.ಸಿ. ಜಗನ್ನಾಥ್ ಸ್ವತಃ ಮೂಳೆ ಸಾಂದ್ರತೆ ಪರೀಕ್ಷೆಗೆ ಒಳಗಾಗಿ ಶಿಬಿರಕ್ಕೆ ಚಾಲನೆ ನೀಡಿದರು. ಆಸ್ಪತ್ರೆಯ ಆವರಣದಲ್ಲಿ 150 ಜನ ಮೂಳೆ ಸಾಂದ್ರತೆ ಪರೀಕ್ಷೆಗೆ ಒಳಗಾದರು. ಈ ಪೈಕಿ 20 ಜನರಿಗೆ ಪಾಸಿಟಿವ್ ಬಂದ ಹಿನ್ನೆಲೆಯಲ್ಲಿ ಸಂಬಂಧಿಸಿದ ಔಷಧ ಹಾಗೂ ಚಿಕಿತ್ಸೆಗೆ ಶಿಫಾರಸು ಮಾಡಲಾಯಿತು.

ಮೂಳೆ ಮತ್ತು ಕೀಲು ತಜ್ಞ ಡಾ.ದಯಾನಂದ್ ಬಾಬು ಮಾತನಾಡಿ, ಚಿಕ್ಕಂದಿನಿಂದಲೇ ಮೂಳೆಗಳ ಆರೋಗ್ಯದ ಬಗ್ಗೆ ಎಚ್ಚರಿಕೆ ವಹಿಸಿದರೆ ವಯಸ್ಸಾದಾಗ ಮೂಳೆ ಸಂಬಂಧಿ ಕಾಯಿಲೆಗಳು ಬರುವುದಿಲ್ಲ. ಮೂಳೆ ಮತ್ತು ಕೀಲು ನಮ್ಮ ದೇಹದ ರಚನೆಗೆ ಮೂಲ ಅಗತ್ಯ ಅಂಗಗಳು, ಸ್ನಾಯುಗಳ ರಕ್ಷಣೆ ಮತ್ತು ಕ್ಯಾಲ್ಸಿಯಂ ಸಂಗ್ರಹಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹೀಗಾಗಿ ದೇಹಕ್ಕೆ ಮೂಳೆ ಆರೈಕೆ ಅಗತ್ಯ ಎಂದರು.

ಈ ವೇಳೆ ದಂತ ವೈದ್ಯೆ ಕಮಲಮ್ಮ, ಮೂಳೆ ಮತ್ತು ಸಾಂದ್ರತೆ ಪರೀಕ್ಷಕ ಗಿರೀಶ್, ನೇತ್ರ ಪರಿವೀಕ್ಷಕ ಉಮೇಶ್, ಪ್ರಸನ್ನ ಇದ್ದರು.

ನಾಳೆ ತೆಂಗಿನ ಬೇಸಾಯ ತರಬೇತಿ

ಭೇರ್ಯ, ಅ.29– ಮೈಸೂರು ತಾಲೂಕಿನ ಇಲವಾಲದ ಯಲಚನಹಳ್ಳಿಯ ತೋಟಗಾರಿಕೆ ಮಹಾವಿದ್ಯಾಲಯ ವತಿಯಿಂದ ತೆಂಗಿನ ಬೆಳೆಯಲ್ಲಿ ಕೀಟ, ರೋಗ ನಿಯಂತ್ರಣ ಹಾಗೂ ಸುಧಾರಿತ ಬೇಸಾಯ ಕ್ರಮಗಳ ಕುರಿತು ತರಬೇತಿ ಹಾಗೂ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಅ.31ರಂದು ಬೆಳಗ್ಗೆ 11 ಗಂಟೆಗೆ ಮಿರ್ಲೆ ಹೋಬಳಿಯ ಎಲೆ ಮುದ್ದನಹಳ್ಳಿಕೊಪ್ಪಲು ಗ್ರಾಮದ ರೈತ ಪುಟ್ಟಸ್ವಾಮೀಗೌಡ ಅವರ ತೆಂಗಿನ ತೋಟದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಾಸಕ ಡಿ.ರವಿಶಂಕರ್ ತರಬೇತಿಗೆ ಚಾಲನೆ ನೀಡಲಿದ್ದು, ತೋಟಗಾರಿಕೆ ಉಪ ನಿರ್ದೇಶಕ ಡಾ.ಮಂಜುನಾಥ್ ಅಂಗಡಿ, ಯಲಚನಹಳ್ಳಿಯ ತೋಟಗಾರಿಕೆ ಮಹಾ ವಿದ್ಯಾಲಯದ ಸಸ್ಯರೋಗ ತಜ್ಞ ಡಾ. ಸುದರ್ಶನ್, ಸಸ್ಯಕೀಟ ಶಾಸ್ತ್ರಜ್ಞ ಡಾ.ಪಿ. ಮುತ್ತುರಾಜು ಭಾಗವಹಿಸಲಿದ್ದಾರೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕಿ ಟಿ.ಎಸ್.ಭಾರತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಪಿರಿಯಾಪಟ್ಟಣ ತಾಲೂಕಿನ ಕಿತ್ತೂರು ದೊಡ್ಡೇಗೌಡನ ಕೊಪ್ಪಲು ಗ್ರಾಮದ ಕೆ.ಪಿ.ಸಂಸ್ಕೃತಿ ಅಭಿಲಾಷ್ ಅವರಿಗೆ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಪಿಎಚ್‌ಡಿ ಪದವಿ ಪ್ರದಾನ ಮಾಡಿದರು. ಈಕೆ ಚುಂಚನಕಟ್ಟೆ ಸಕ್ಕರೆ ಕಾರ್ಖಾನೆಯ ನಿವೃತ್ತ ನೌಕರರ ಕೆ.ಎಂ.ಲೋಕೇಶ್ ಅವರ ಸೊಸೆ.



ತಿ.ನರಸೀಪುರ ತಾಲೂಕಿನ ಮೂಗೂರು ಗ್ರಾಮದ ಹೂವಿನ ಬೀದಿ ಸಮುದಾಯದ ಮುಖಂಡರು ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಜಯಂತಿ ಆಚರಿಸಿದರು. ಗ್ರಾಮದ ಮುಖಂಡರಾದ ಎಂ.ನಾಗೇಂದ್ರ, ರಂಗಸ್ವಾಮಿ, ಮಹಾದೇವ ನಾಯಕ, ಜಗದೀಶ್, ರಾಜು, ಬಸವರಾಜು, ದಯಾ, ಯೋಗೇಶ್, ಗ್ರಾಮಸ್ಥರು ಇದ್ದರು.

ಹೊಂಬಾಳೆಯಲ್ಲಿ ತೆಂಗಿನ ಸಸಿ

ಹಿರಿಕ್ಯಾತನಹಳ್ಳಿ: ಕಲ್ಪವೃಕ್ಷ ಎಂದು ಕರೆಯುವ ತೆಂಗಿನ ಮರದಲ್ಲಿ ಎಳನೀರು, ಕಾಯಿ ಬಿಡಬೇಕಾದ ಹೊಂಬಾಳೆಯಲ್ಲಿ ತೆಂಗಿನ ಸಸಿ ಬೆಳೆದು ಅಚ್ಚರಿ ಮೂಡಿಸಿದೆ.

ಹೌದು, ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಹಿರಿಕ್ಯಾತನಹಳ್ಳಿ ಗ್ರಾಮದ ರೈತ ಸಣ್ಣೇಗೌಡ ಅವರ ಜಮೀನಿನ ತೆಂಗಿನಮರದಲ್ಲಿ ತೆಂಗಿನ ಗಿಡ ಬೆಳೆಯುತ್ತಿರುವುದು ಅಚ್ಚರಿಗೆ ಕಾರಣವಾಗಿದೆ.

ಸಣ್ಣೇಗೌಡ ಕಳೆದ 6–7 ವರ್ಷಗಳ ಹಿಂದೆ ತಮ್ಮ ಜಮೀನಿನಲ್ಲಿ ತೆಂಗಿನ ಸಸಿಗಳನ್ನು ನೆಟ್ಟಿದ್ದರು. ಈಗ ತೆಂಗಿನ ಮರಗಳಲ್ಲಿ ಎಳನೀರು ಬಿಡುತ್ತಿದ್ದರೆ, ಆದರೆ ಒಂದು ತೆಂಗಿನ ಮರ ಈ ವರ್ಷ ಮೊದಲ ಬಾರಿ ಬಿಟ್ಟ ಹೊಂಬಾಳೆಯಲ್ಲಿ ಮೊಳಕೆ ಒಡೆದು ತೆಂಗಿನ ಸಸಿ ಬೆಳೆಯುತ್ತಿದೆ. ಇದು ಜನರ ಕುತುಹಲ ಹಾಗೂ ಆಕರ್ಷಣೆಗೆ ಕಾರಣವಾಗಿದೆ. ಇದು ಕಲಿಯುಗಕ್ಕೆ ವಿರುದ್ಧವಾಗಿಯೇ ಅಥವಾ ದೇವರ ಸೃಷ್ಟಿಯೋ ಎಂದು ಗ್ರಾಮಸ್ಥರು ಅಚ್ಚರಿಗೊಂಡಿದ್ದಾರೆ.



"ಇದೊಂದು ಅಪರೂಪ, ಕೃಷಿ ವಿಜ್ಞಾನಿಗಳ ಪ್ರಕಾರ ಇದು ಅನುವಂಶೀಯ ಗುಣವಾಗಿದೆ. ತೆಂಗು ಏಕಭ್ರೂಣ ಹೊಂದಿರುವ ಬೆಳೆಯಾಗಿದ್ದು, ಕೆಲವೊಮ್ಮೆ ಕಾಯಿ ಕಚ್ಚುವ ಹಂತದಲ್ಲಿ ಮರದಲ್ಲೇ ಭ್ರೂಣವು ಸಸಿಯಾಗಿ ಬೆಳವಣಿಗೆಯಾಗುತ್ತವೆ.

–**ನೇತ್ರಾವತಿ,** ತೋಟಗಾರಿಕೆ ಇಲಾಖೆಯ ನಿರ್ದೇಶಕಿ, ಹುಣಸೂರು



ಮೈಸೂರಿನ ಕಲಾಮಂದಿರದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಹೆಚ್.ಡಿ.ಕೋಟೆ ತಾಲೂಕು ನಾಯಕ ಸಂಘದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ ಹಾಗೂ ಚಾಮುಂಡಿಬೆಟ್ಟದ ಶಂಭುನಾಯಕ ಅವರನ್ನು ಸನ್ಮಾನಿಸಲಾಯಿತು. ಸಚಿವ ಎಚ್.ಸಿ.ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ಶ್ರೀವತ್ಸ, ಹರೀಶ್‌ಗೌಡ, ಮೇಯರ್ ಶಿವಕುಮಾರ್, ವಿಧಾನಪರಿಷತ್ ಸದಸ್ಯರಾದ ತಿಮ್ಮಯ್ಯ, ಮಂಜೇಗೌಡ, ಜಿಲ್ಲಾಧಿಕಾರಿ ರಾಜೇಂದ್ರ, ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ ಮುನಿರಾಜು, ಜಯಪ್ರಕಾಶ್, ಹೆಚ್.ಡಿ.ಕೋಟೆ ತಾಲೂಕು ನಾಯಕ ಸಂಘದ ಉಪಾಧ್ಯಕ್ಷ ಮಿಲ್ ನಾಗರಾಜು, ಪ್ರಧಾನ ಕಾರ್ಯದರ್ಶಿ ಚಾಕಳ್ಳಿ ಕೃಷ್ಣ, ಕಾರ್ಯದರ್ಶಿ ಜಿಯಾರ ನಾಗನಾಯಕ, ನಿಂಗನಾಯಕ, ಬೀರನಾಯಕ, ಸೂರಿ ಮೆಕಾನಿಕ್, ಸಿದ್ದರಾಜು ಇಟ್ನಾ, ಪಿ.ಬೆಟ್ಟಪ್ಪ ಬೋರ್‌ವೆಲ್ ಆನಂದ, ಸ್ವಾಮಿ ಅಂಕನಾಥಪುರ, ಆಗತ್ತೂರು ಮಹದೇವನಾಯಕ, ನಾಗರಾಜು, ಹೆಗ್ಗುಡಿಲು ಸಿದ್ದರಾಜು, ರವಿ ಹೆಗ್ಗಡಾಪುರ, ಇಟ್ನಾ ಕಾಲೋನಿ ಬೆಟ್ಟನಾಯಕ ಇದ್ದರು.



ಕೆ.ಆರ್.ನಗರದ ಪಿಕಾರ್ಡ್ ಬ್ಯಾಂಕಿನ ಕಟ್ಟಡ ನಿರ್ಮಾಣ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಶಾಸಕ ಡಿ.ರವಿಶಂಕರ್ ಹಾಗೂ ಕಸ್ಕಾರ್ಡ್ ಬ್ಯಾಂಕಿನ ಅಧ್ಯಕ್ಷ ಕೆ.ಷಡಕ್ಷರಿ ಉದ್ಘಾಟಿಸಿದರು. ಮೈಸೂರು ಜಿಲ್ಲಾ ನಿರ್ದೇಶಕ ಕೆಂಪಯ್ಯನಹುಂಡಿ ಮಹದೇವಣ್ಣ, ಮಂಡ್ಯ ಜಿಲ್ಲಾ ನಿರ್ದೇಶಕ ತಿಮ್ಮರಾಯಿಗೌಡ, ಜಿಲ್ಲಾ ವ್ಯವಸ್ಥಾಪಕಿ ಬಿ.ಪಿ.ರಶ್ಮಿತಾ ಇದ್ದರು.



ತಿ.ನರಸೀಪುರದಲ್ಲಿ ತಾಲೂಕು ಆಡಳಿತದ ವತಿಯಿಂದ ನಡೆದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಮೆರವಣಿಗೆಯಲ್ಲಿ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಅವರನ್ನು ಸನ್ಮಾನಿಸಲಾಯಿತು. ನಾಯಕ ಸಂಘದ ಅಧ್ಯಕ್ಷ ಚಿಕ್ಕಯ್ಯ, ಜಿಪಂ ಮಾಜಿ ಸದಸ್ಯರಾದ ಹೊನ್ನನಾಯಕ, ಟಿ.ಎಚ್.ಮಂಜುನಾಥ್, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ವ್ಯಾಸರಾಜಪುರ ಸುಂದರ್, ಗದ್ದೆಮೊಳೆ ಸಿದ್ದರಾಜು, ಪಾಂಡು, ಶ್ರೀರಂಗರಾಜಪುರ ರಾಜೇಶ್, ಕೊಳತ್ತೂರು ಕುಮಾರ್, ಆಗೂಡು ನಾಗರಾಜು, ಆರ್.ಸೋಮಣ್ಣ, ಗೋವಿಂದರಾಜು, ವಿಕ್ರಾಂತ್ ಮಹದೇವು, ಅಣ್ಣಯ್ಯ ಮತ್ತಿತರರಿದ್ದರು.

ಬಿ.ಯು. ದಿವ್ಯಶ್ರೀಗೆ ಪಿಎಚ್.ಡಿ



ಮೈಸೂರು, ಅ.29– ಡಾ. ವಿ. ವಾಸುದೇವ ಅವರ ಮಾರ್ಗದರ್ಶನದಲ್ಲಿ ಬಿ.ಯು. ದಿವ್ಯಶ್ರೀ ಅವರು ಸಾರ್ವಜನಿಕ ಜೈವಿಕ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಂಜನಗೂಡಿನಲ್ಲಿ ಪುನೀತ್ ಪುಣ್ಯಸ್ಮರಣೆ



ನಂಜನಗೂಡು, ಅ.29–ನಟ ಪುನೀತ್ ರಾಜಕುಮಾರ್ ಅವರ ಎರಡನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಅಪ್ಪು ಅಭಿಮಾನಿಗಳು ಭಾನುವಾರ ನಗರದಲ್ಲಿ ಅನ್ನಸಂತರ್ಪಣೆ ಏರ್ಪಡಿಸಿದ್ದರು.

ನಗರದ ಖಾಸಗಿ ಬಸ್ ನಿಲ್ದಾಣದ ಬಳಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಂಜನಗೂಡು ಪೊಲೀಸ್ ಉಪ ವಿಭಾಗದ ಡಿವೈಎಸ್‌ಪಿ ಗೋವಿಂದರಾಜು ಪುನೀತ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಅನ್ನಸಂತರ್ಪಣೆಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಪುನೀತ್ ರಾಜಕುಮಾರ್ ಭೌತಿಕವಾಗಿ ಮರೆಯಾಗಿದ್ದರೂ ರಾಜ್ಯದ ಜನರ ಮನಸ್ಸಿನಲ್ಲಿ ಸದಾ ನೆಲೆಸಿದ್ದಾರೆ. ಅವರ ಸರಳತೆ ಹಾಗೂ ಸಾಮಾಜಿಕ ಸೇವಾ ಕಾರ್ಯಗಳು ಅನುಕರಣೀಯವಾಗಿವೆ ಎಂದರು. ಇದೇ ವೇಳೆ ಸ್ಥಳೀಯ ಕಲಾವಿದರು ಪುನೀತ್ ರಾಜಕುಮಾರ್ ಗೀತೆಗಳನ್ನು ಹಾಡುವ ಮೂಲಕ ಗೀತ ನಮನ ಸಲ್ಲಿಸಿದರು. ನೂರಾರು ಪುನೀತ್ ಅಭಿಮಾನಿಗಳು ಉಪಸ್ಥಿತರಿದ್ದರು.

ಪೋಷಕರು ತಮ್ಮ ಮಕ್ಕಳ ಬಗೆಗಿನ ಮೂಢನಂಬಿಕೆ ತೊರೆಯಿರಿ

ಸರಗೂರು, ಅ.29– ಪೋಷಕರು ತಮ್ಮ ಮಕ್ಕಳ ಬಗ್ಗೆ ಇರುವ ಮೂಢನಂಬಿಕೆಯನ್ನು ತೊರೆದು ತಾಂತ್ರಿಕತೆಯ ವೈದ್ಯಕೀಯ ಸೌಲಭ್ಯದತ್ತ ಗಮನ ಹರಿಸಬೇಕು ಎಂದು ಮಕ್ಕಳ ತಜ್ಞ ಡಾ.ಸಿ. ಚಂದ್ರಶೇಖರ್ ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಭಾನುವಾರ ನಡೆದ ಆರೋಗ್ಯ ಉಚಿತ ಶಿಬಿರದಲ್ಲಿ ಮಾತನಾಡಿದ ಅವರು, ಪೋಷಕರು ಮಕ್ಕಳಲ್ಲಿ ಜೀವನ ಕೌಶಲ್ಯಗಳನ್ನು ರೂಢಿಸಿ ಆತ್ಮವಿಶ್ವಾಸ ಮೂಡಿಸಬೇಕು. ಮನುಷ್ಯರಿಗೆ ಯಾವುದೇ ಕಾಯಿಲೆ ಹೆಚ್ಚಾಗುವ ಮುನ್ನ ವೈದ್ಯರ ಭೇಟಿ ಮಾಡಿ, ಸಲಹೆ ಸೂಚನೆ ಪಡೆಯುವುದು ಸೂಕ್ತ ಎಂದು ಹೇಳಿದರು.

ಗ್ರಾಮೀಣ ಭಾಗದ ಜನರಿಗಾಗಿ ಜೆಎಸ್‌ಎಸ್ ಆಸ್ಪತ್ರೆ ಪ್ರತಿತಿಂಗಳ ಕೊನೆಯ ಭಾನುವಾರ ಆರೋಗ್ಯ ಉಚಿತ ಶಿಬಿರಗಳನ್ನು ನಡೆಸುತ್ತಿದೆ. ಈ ಸೌಲಭ್ಯಗಳನ್ನು ಗ್ರಾಮಾಂತರ ಜನರು ಉಪಯೋಗಿಸಿಕೊಳ್ಳಬೇಕು. ಇದರಿಂದ ಆರೋಗ್ಯ ಸುಧಾರಣೆಗೆ ಸಹಾಯವಾಗುತ್ತದೆ ಎಂದರು.



ಸರಗೂರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷೆ ಸುಧಾ ಮೃತ್ಯುಂಜಯಪ್ಪ ಮಾತನಾಡಿದರು, ಶಿಬಿರದಲ್ಲಿ ಸುಮಾರು 524 ಜನ ತಪಾಸಣೆಗೆ ಒಳಗಾಗಿ ಚಿಕಿತ್ಸೆ ಪಡೆದರು. ಸಾಮಾನ್ಯ ವೈದ್ಯಕೀಯ ವಿಭಾಗದ ಡಾ.ನಿಮ್ರಾ ಫಾತಿಮಾ, ಜೆಎಸ್‌ಎಸ್ ಆಸ್ಪತ್ರೆಯ ಹೃದ್ರೋಗ ವಿಭಾಗದ ಡಾ.ಪೂರ್ಣಿಮಾ, ಶಸ್ತ್ರಚಿಕಿತ್ಸಾ ವಿಭಾಗದ ಡಾ. ಸೌರಭ, ಕಣ್ಣಿನ ವಿಭಾಗದ ಡಾ.ಎ.ಅಮೃತಾ, ಮಕ್ಕಳ ವಿಭಾಗದ ಡಾ.ಸಿ.ಚಂದ್ರಶೇಖರ್, ಕಿವಿ, ಮೂಗು, ಗಂಟಲು ವಿಭಾಗದ ಡಾ.ಎ.ಬಾಬು, ಮೂಳೆ ರೋಗ ವಿಭಾಗದ ಡಾ.ಅರುಣೋದಯ, ಎಸ್.ಸಿದ್ಧಾರ್ಥ, ಸ್ತ್ರೀ ರೋಗ ಮತ್ತು ಪ್ರಸೂತಿ ವಿಭಾಗದ ಡಾ.ಮೇಘನಾ, ಶ್ವಾಸಕೋಶ ವಿಭಾಗದ ವಿಜಯಲಕ್ಷ್ಮೀ, ದಂತ ಚಿಕಿತ್ಸಾ ವಿಭಾಗದ ಡಾ.ಅನಿತಾ, ಹಿರಿಯ ನಾಗರಿಕರ ವಿಭಾಗದ ಡಾ.ಅಜಯ್ ಶರ್ಮಾ, ಜಠರ ಕರುಳು ವಿಭಾಗ ಡಾ.ವಿನೋದ್, ಶಾಲಾ ಮತ್ತು ಕಾಲೇಜು ಮುಖ್ಯಸ್ಥರಾದ ಅಂಜುಮ್ ಪಾಷ, ಗಂಗಾಧರಯ್ಯ, ಮಹದೇವಸ್ವಾಮಿ, ಜೆಎಸ್‌ಎಸ್ ಆಸ್ಪತ್ರೆಯ ಮಾರ್ಕೆಟಿಂಗ್ ವಿಭಾಗದ ಮಲ್ಲಿಕಾರ್ಜುನ ಸ್ವಾಮಿ, ಜಗದೀಶ್, ಪರಶಿವಮೂರ್ತಿ, ಹುಂಡಿ ಮಹದೇವಸ್ವಾಮಿ, ಕೃಷ್ಣಮೂರ್ತಿ, ಅಶೋಕ್, ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಸಿಬ್ಬಂದಿ, ಶಾಲಾ ಮಕ್ಕಳು, ಜೆಎಸ್‌ಎಸ್ ಆಸ್ಪತ್ರೆ ಸಿಬ್ಬಂದಿ ಇತರರು ಉಪಸ್ಥಿತರಿದ್ದರು.

ಸುಬ್ಬಯ್ಯ ನಿಧನ



ಮಲ್ಕುಂಡಿ: ನಂಜನಗೂಡು ತಾಲೂಕಿನ ಕಪ್ಪಸೋಗೆ ಗ್ರಾಮದ ನಿವಾಸಿ ಹಾಗೂ ನಿವೃತ್ತ ಗ್ರಾಮ ಸೇವಕ ಸುಬ್ಬಯ್ಯ(68) ಶನಿವಾರ ನಿಧನರಾದರು.

ಮೃತರು ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಮೃತರ ಸ್ವಗ್ರಾಮ ಕಪ್ಪಸೋಗೆಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.



ವಿಶ್ವಕಪ್‌ನಲ್ಲಿ ಭಾರತದ ಅಜೇಯ ಗೆಲುವಿನ ಓಟ

● 20 ವರ್ಷಗಳ ಬಳಿಕ ಆಂಗ್ಲರ ಮಣಿಸಿದ ಭಾರತ ಸೆಮೀಸ್‌ಗೆ ಬಹುತೇಕ ಎಂಟ್ರಿ ● ಟೂರ್ನಿಯಿಂದ ಹೊರಬಿದ್ದ ಹಾಲಿ ಚಾಂಪಿಯನ್ನರು

ಲಕ್ನೋ, ಅ.29– ನಾಯಕ ರೋಹಿತ್ ಶರ್ಮಾ ಅವರ ಅರ್ಧ ಶತಕ ಹಾಗೂ ಜಸ್ಪ್ರೀತ್ ಬುಮ್ರಾ, ಮೊಹಮ್ಮದ್ ಶಮಿ ಅವರುಗಳ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಭಾರತ ಇಂಗ್ಲೆಂಡ್ ವಿರುದ್ಧ 100 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಆ ಮೂಲಕ 20 ವರ್ಷಗಳ ಬಳಿಕ ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ಸೋಲಿಸಿದ ಭಾರತ ಸತತ 6 ಪಂದ್ಯಗಳಲ್ಲಿ ಜಯ ಸಾಧಿಸಿ ಟೂರ್ನಿಯಲ್ಲಿ ತನ್ನ ಅಜೇಯ ಗೆಲುವಿನ ಓಟ ಮುಂದುವರೆಸಿದ್ದು, ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಅಲಂಕರಿಸಿದೆ. ಅಲ್ಲದೇ ಈ ಗೆಲುವಿನೊಂದಿಗೆ ಭಾರತದ ಸೆಮೀಸ್ ಹಾದಿ ಬಹುತೇಕ ಖಚಿತವಾಗಿದ್ದು, ಮತ್ತೊಂದೆಡೆ ಸತತ ಸೋಲಿನಿಂದ ಕಂಗೆಟ್ಟಿರುವ ಆಂಗ್ಲರು ಟೂರ್ನಿಯಿಂದ ಹೊರ ಬಿದ್ದಿದ್ದಾರೆ.



ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ನಾಯಕತ್ವದಲ್ಲಿ ಭಾರತ 2003ರಲ್ಲಿ ಕೊನೆ ಬಾರಿಗೆ ಇಂಗ್ಲೆಂಡ್ ವಿರುದ್ಧ ಗೆಲುವು ಸಾಧಿಸಿತ್ತು. ಉಳಿದಂತೆ 2007, 2011, 2015 ಮತ್ತು 2019ರಲ್ಲಿ ಭಾರತ, ಇಂಗ್ಲೆಂಡ್ ಎದುರು ವಿರೋಚಿತ ಸೋಲನುಭವಿಸಿತ್ತು. ಹೀಗಾಗಿ ಕಳೆದ 20 ವರ್ಷಗಳಿಂದ ವಿಶ್ವಕಪ್ ಟೂರ್ನಿಯಲ್ಲಿ ಭಾರತಕ್ಕೆ ಗೆಲುವು ಸಿಕ್ಕಿರಲಿಲ್ಲ. ಇಂದು 100 ರನ್‌ಗಳ ಭರ್ಜರಿ ಜಯದೊಂದಿಗೆ ಹೊಸ ಇತಿಹಾಸ ಸೃಷ್ಟಿಸಿದೆ.

ಇಲ್ಲಿನ ಭಾರತ ರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 229 ರನ್ ಗಳಿಸಿತು. ಬೃಹತ್ ಮೊತ್ತ ಕಲೆಹಾಕುವ ಗುರಿ ಹೊಂದಿದ್ದ ಭಾರತಕ್ಕೆ ಆರಂಭದಲ್ಲೇ ನಿರಾಸೆಯಾಯಿತು. ತಂಡದ ಮೊತ್ತ 40 ಆಗುವಷ್ಟರಲ್ಲಿ ಭಾರತ ಶುಭ್‌ಮನ್ ಗಿಲ್, ವಿರಾಟ್ ಕೊಹ್ಲಿ ಹಾಗೂ ಶ್ರೇಯಸ್ ಅಯ್ಯರ್ ಅವರ ವಿಕೆಟ್ ಕಳೆದುಕೊಂಡಿತು. ಈ ವೇಳೆ 4ನೇ ವಿಕೆಟ್‌ಗೆ ಜೊತೆಯಾದ ಕೆ.ಎಲ್.ರಾಹುಲ್ ಹಾಗೂ ರೋಹಿತ್ ಶರ್ಮಾ 91 ರನ್ ಜೊತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 3 ಬೌಂಡರಿ ಒಳಗೊಂಡ 39 ರನ್ ಗಳಿಸಿದ್ದ ಕೆ.ಎಲ್.ರಾಹುಲ್ ನಿರ್ಗಮಿಸಿದರು. ಆಂಗ್ಲರ ವಿರುದ್ಧ ಹೋರಾಡಿದ ರೋಹಿತ್ ಶರ್ಮಾ 101 ಎಸೆತಗಳಲ್ಲಿ 3 ಸಿಕ್ಸರ್, 10 ಬೌಂಡರಿ ಒಳಗೊಂಡ 87 ರನ್ ಗಳಿಸಿ ಔಟಾದರು. ಅಲ್ಲದೇ ಸೂರ್ಯಕುಮಾರ್ ಯಾದವ್ 49 ರನ್‌ಗಳಿಗೆ ಔಟಾಗುವ ಮೂಲಕ 1 ರನ್‌ನಿಂದ ಅರ್ಧಶತಕದಿಂದ ವಂಚಿತರಾದರು. ಇನ್ನಿಂಗ್ಸ್ ಕೊನೆಯಲ್ಲಿ ಜಸ್ಪ್ರೀತ್ ಬುಮ್ರಾ 16, ರವೀಂದ್ರ ಜಡೇಜಾ 8, ಮೊಹಮ್ಮದ್ ಶಮಿ 1 ಹಾಗೂ ಕುಲದೀಪ್ ಯಾದವ್ 9 ರನ್ ಗಳಿಸಿದರು.

ಇಂಗ್ಲೆಂಡ್ ಪರ ಡೇವಿಡ್ ವಿಲ್ಲಿ 3, ಕ್ರಿಸ್ ವೋಕ್ಸ್, ಆದಿಲ್ ರಶೀದ್ ತಲಾ 2 ಹಾಗೂ ಮಾರ್ಕ್‌ವುಡ್ ಒಂದು ವಿಕೆಟ್ ಪಡೆದು ಮಿಂಚಿದರು.

ಭಾರತ ನೀಡಿದ 230ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಇಂಗ್ಲೆಂಡ್ ಉತ್ತಮ ಆರಂಭ ಪಡೆಯಿತು. ಆದರೆ ಮಾರಕ ಬೌಲಿಂಗ್ ದಾಳಿ ನಡೆಸಿದ ಬುಮ್ರಾ ಹಾಗೂ ಮೊಹಮ್ಮದ್ ಶಮಿ 10 ರನ್ ಅಂತರದಲ್ಲಿ ಪ್ರಮುಖ ನಾಲ್ಕು ವಿಕೆಟ್ ಉರುಳಿಸಿ ಆಘಾತ ನೀಡಿದರು. ಸತತ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ ಇಂಗ್ಲೆಂಡ್ 25 ಓವರ್‌ಗಳಲ್ಲಿ 6 ವಿಕೆಟ್‌ಗೆ ಕೇವಲ 84 ರನ್ ಗಳಿಸಿತ್ತು. ಭಾರತೀಯ ಬೌಲರ್‌ಗಳ ಮಾರಕ ದಾಳಿಯಿಂದ ತತ್ತರಿಸಿದ ಇಂಗ್ಲೆಂಡ್ ಅಂತಿಮವಾಗಿ 34.5 ಓವರ್‌ಗಳಲ್ಲಿ 129 ರನ್‌ಗಳಿಗೆ ಸರ್ವಪತನ ಕಂಡಿತು.

ಇಂಗ್ಲೆಂಡ್ ಪರ ಜಾನಿ ಬೈರ್ಸ್ಟೋವ್ 14, ಡೇವಿಡ್ ಮಲಾನ್ 16, ಜೋಸ್ ಬಟ್ಲರ್ 10, ಮೊಯಿನ್ ಅಲಿ 15, ಲಿಯಾಮ್ ಲಿವಿಂಗ್‌ಸ್ಟೋನ್ 27, ಕ್ರಿಸ್‌ವೋಕ್ಸ್ 10, ಆದಿಲ್ ರಶೀದ್ 13, ಡೇವಿಡ್ ವಿಲ್ಲಿ 16ರನ್ ಗಳಿಸಿದರು. ಭಾರತದ ಪರ ಮೊಹಮ್ಮದ್ ಶಮಿ 4, ಬುಮ್ರಾ 3, ಕುಲದೀಪ್ ಯಾದವ್ 2, ರವೀಂದ್ರ ಜಡೇಜಾ ಒಂದು ವಿಕೆಟ್ ಪಡೆದರು. ರೋಹಿತ್ ಶರ್ಮಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಇಂಡಿಯಾ	6	6	0	0	12
ದಕ್ಷಿಣ ಆಫ್ರಿಕಾ	6	5	1	0	10
ನ್ಯೂಜಿಲ್ಯಾಂಡ್	6	4	2	0	8
ಆಸ್ಟ್ರೇಲಿಯಾ	6	4	2	0	8
ಶ್ರೀಲಂಕಾ	5	2	3	0	4
ಪಾಕಿಸ್ತಾನ	6	2	4	0	4
ಅಫ್ಘಾನಿಸ್ತಾನ್	5	2	3	0	4
ನೆದರ್‌ಲ್ಯಾಂಡ್ಸ್	6	2	4	0	4
ಬಾಂಗ್ಲಾದೇಶ	6	1	5	0	2
ಇಂಗ್ಲೆಂಡ್	6	1	5	0	2

ಅಮೆರಿಕದಿಂದ 1,440 ಕಲಾಕೃತಿಗಳ ವಾಪಸಾತಿ

ವಿದೇಶಗಳಿಂದ ಮತ್ತಷ್ಟು ಪುರಾತನ ಕಲಾಕೃತಿಗಳ ಹಿಂಪಡೆಯುವಿಕೆ ನಿರೀಕ್ಷೆಯಲ್ಲಿ ಭಾರತ

ನವದೆಹಲಿ, ಅ.29– ಅಮೆರಿಕವು 1440 ಕಲಾಕೃತಿಗಳನ್ನು ಭಾರತಕ್ಕೆ ವಾಪಸ್ ನೀಡುತ್ತಿರುವ ಸಂದರ್ಭದಲ್ಲಿ ಅವುಗಳ ಪುರಾತನ ಮೌಲ್ಯವನ್ನು ಪರಿಶೀಲಿಸಲು ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ (ASI)ದ ತಜ್ಞರ ತಂಡವನ್ನು ಈಗಾಗಲೇ ನ್ಯೂಯಾರ್ಕ್‌ಗೆ ಕಳುಹಿಸಲಾಗಿದೆ.

ಸಂಸ್ಕೃತಿ ಸಚಿವಾಲಯದ ಕಾರ್ಯದರ್ಶಿ ಗೋವಿಂದ್ ಮೋಹನ್, ಇದು ದಶಕಗಳಿಂದ ದೇಶದ ವಿವಿಧ ಭಾಗಗಳಿಂದ ಕದ್ದು ಕಳ್ಳಸಾಗಣೆಯಾದ ಸಾಂಸ್ಕೃತಿಕ ಪರಂಪರೆಯ ವಸ್ತುಗಳನ್ನು ಹಿಂದಿರುಗಿಸುವಿಕೆಯಾಗಿದೆ. ಈ ನಿಟ್ಟಿನಲ್ಲಿ ದೊಡ್ಡ ಮಟ್ಟದ ಚಟುವಟಿಕೆಗಳು ನಡೆಯುತ್ತಿವೆ. ಅಮೆರಿಕ ತನ್ನ ಪ್ರಾಂತೀಯ ವಸ್ತು ಸಂಗ್ರಹಾಲಯಗಳೊಂದಿಗೆ 1,440 ಪ್ರಾಚೀನ ವಸ್ತುಗಳನ್ನು ಹಿಂದಿರುಗಿಸಲು ಉತ್ಸುಕವಾಗಿದೆ. ಎಎಸ್‌ಐ ತಂಡ ಈಗಾಗಲೇ ನ್ಯೂಯಾರ್ಕ್‌ನಲ್ಲಿದೆ. ದಾಖಲೆಗಳನ್ನು ಪರಿಶೀಲಿಸಿದ ನಂತರ ಅವು ನಮಗೆ ಸೇರಿದ್ದು ಮತ್ತು ಹಿಂಪಡೆಯಲು ಯೋಗ್ಯವಾಗಿದೆಯೇ ಎಂದು ನಾವು ಪರಿಶೀಲಿಸುತ್ತೇವೆ. ಇದು ಕೆಲ ಸಮಯ ತೆಗೆದುಕೊಳ್ಳಬಹುದು ಎಂದಿದ್ದಾರೆ.

ಸ್ವಾತಂತ್ರ್ಯದ ನಂತರ, ಸುಮಾರು 350 ಪಾರಂಪರಿಕ ವಸ್ತುಗಳನ್ನು ಫ್ರಾನ್ಸ್, ಜರ್ಮನಿ, ಸಿಂಗಾಪುರ್, ಆಸ್ಟ್ರೇಲಿಯಾ ಮತ್ತು ಕೆನಡಾ ಸೇರಿದಂತೆ ವಿವಿಧ ದೇಶಗಳಿಂದ ಮರಳಿ ತರಲಾಗಿದೆ. ಸಚಿವಾಲಯದ ಪ್ರಕಾರ, 190 ಕಲಾಕೃತಿಗಳನ್ನು ಹಿಂಪಡೆಯಲಾಗಿದೆ. 2014 ರಿಂದ 1947 ರಿಂದ ಕೇವಲ 13 ವಸ್ತುಗಳನ್ನು ತರಲು ಸಾಧ್ಯವಾಗಿದ್ದರಿಂದ ಆಗಮನ ಹೆಚ್ಚಾಗಿದೆ. ಈ ಹೆಚ್ಚಿನ ಸಾಮಗ್ರಿಗಳನ್ನು ತಮಿಳುನಾಡಿನಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿರುವ ಕುಖ್ಯಾತ ಕಲಾ ವ್ಯಾಪಾರಿ ಸುಭಾಷ್ ಕಪೂರ್ ಕಳ್ಳಸಾಗಣೆ ಮಾಡಿದ್ದಾರೆ.

ಭಾರತೀಯ ಪ್ರಾಚೀನ ವಸ್ತುಗಳನ್ನು ದೃಢೀಕರಿಸಲು ಮತ್ತೊಂದು ತಂಡ ಸಿಂಗಾಪುರದಲ್ಲಿದೆ ಎಂದು ಮೋಹನ್ ಮಾಹಿತಿ ನೀಡಿದರು. ಎಎಸ್‌ಐಯ ಪ್ರತ್ಯೇಕ ತಂಡಗಳು ಇತ್ತೀಚೆಗೆ ಲಂಡನ್, ಗ್ಲಾಸ್ಗೋ ಮತ್ತು ಬರ್ಮಿಂಗ್ಹ್ಯಾಮ್‌ನಲ್ಲಿರುವ ವಸ್ತುಸಂಗ್ರಹಾಲಯಗಳಿಗೆ ಭೇಟಿ ನೀಡಿವೆ.

ಬ್ರಿಟಿಷ್ ಲೈಬ್ರರಿಯು ಭಾರತೀಯ ಹಸ್ತಪ್ರತಿಗಳ ಡಿಜಿಟೈಸ್ಡ್ ಆವೃತ್ತಿಗಳನ್ನು ತೆಗೆದುಕೊಳ್ಳಲು ನಮಗೆ ಅವಕಾಶ ನೀಡಿದೆ. ನಾವು ಶೀಘ್ರದಲ್ಲೇ ಅವರೊಂದಿಗೆ ತಿಳುವಳಿಕೆ ಪತ್ರಕ್ಕೆ ಸಹಿ ಹಾಕುತ್ತೇವೆ ಎಂದು ಅಧಿಕಾರಿ ಹೇಳಿದರು.


ಲಂಡನ್‌ನಲ್ಲಿರುವ ರಾಷ್ಟ್ರೀಯ ಗ್ರಂಥಾಲಯವು ಆಧುನಿಕ ಪೂರ್ವ ಮತ್ತು ಆಧುನಿಕ ಕಾಲದ 10,000ಕ್ಕೂ ಹೆಚ್ಚು ಸಂಸ್ಕೃತ ಮತ್ತು ಪಾಲಿ ಹಸ್ತಪ್ರತಿಗಳ ವ್ಯಾಪಕ ಸಂಗ್ರಹಗಳನ್ನು ಹೊಂದಿದೆ. ಎಎಸ್‌ಐಗೆ ಸೇರಿದ ಮಧ್ಯ ಏಷ್ಯಾದ ಪ್ರಾಚೀನ ವಸ್ತುಗಳ ಆರಲ್ ಸ್ಟೈನ್ ಸಂಗ್ರಹಕ್ಕೆ ಸೇರಿದ ಸುಮಾರು 700 ಕಲಾಕೃತಿಗಳನ್ನು ಹಿಂಪಡೆಯಲು ಸಚಿವಾಲಯವು ಕೆಲಸ ಮಾಡುತ್ತಿದೆ ಎಂದು ಕಾರ್ಯದರ್ಶಿ ಹೇಳಿದರು. ಈ ಸಂಗ್ರಹವನ್ನು ಸುಮಾರು 100 ವರ್ಷಗಳ ಹಿಂದೆ ಲಂಡನ್‌ನಲ್ಲಿರುವ ವಿಕ್ಟೋರಿಯಾ ಮತ್ತು ಆಲ್ಬರ್ಟ್ (ಎಲ್ & ಎ) ಮ್ಯೂಸಿಯಂಗೆ ನೀಡಲಾಯಿತು.

ಸಾರಿಗೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿಯ 31 ಸದಸ್ಯರ ಸಂಸದೀಯ ಸ್ಥಾಯಿ ಸಮಿತಿಯು ಇತ್ತೀಚೆಗೆ ಲಂಡನ್ ಮ್ಯೂಸಿಯಂನೊಂದಿಗೆ ಸಂಪರ್ಕವನ್ನು ಸ್ಥಾಪಿಸಲು ಮತ್ತು ವಾಪಸಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಎಎಸ್‌ಐಯನ್ನು ಕೇಳಿದೆ.

ಪ್ರೇಕ್ಷಕರ ಮನಸೂರೆಗೊಂಡ ನಾದಸ್ವರದ ಮಾಧುರ್ಯ, ಭರತನಾಟ್ಯದ ವೈಭವ

ದಸರಾ ವಸ್ತು ಪ್ರದರ್ಶನದಲ್ಲಿ 90 ದಿನ ಸಾಂಸ್ಕೃತಿಕ ಕಾರ್ಯಕ್ರಮದ ಸೊಗಸು





ಮೈಸೂರು,ಅ.29(ಪಿಎಂ)– ದಸರಾ ವಸ್ತುಪ್ರದರ್ಶನದ ಆವರಣದ ಪಿ.ಕಾಳಿಂಗರಾವ್ ಗಾನಮಂಟಪದ ತುಂಬೆಲ್ಲಾ ನಾದಸ್ವರದ ಮಾಧುರ್ಯ, ಭರತನಾಟ್ಯದ ವೈಭವದ ದೃಶ್ಯಾವಳಿ ಅನಾವರಣಗೊಂಡಿತು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ಇದೇ ಮಂಟಪದಲ್ಲಿ ಇಂದಿನಿಂದ 90 ದಿನಗಳ ಕಾಲ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಯುಕ್ತ ಭಾನುವಾರ ಸಂಜೆ ನಡೆದ ಮೊದಲ ದಿನದ ಕಾರ್ಯಕ್ರಮದ ಸೊಬಗು ಇದು.

ಮೊದಲಿಗೆ ನಾದಸ್ವರವು ಸಭಿಕರನ್ನು ಮಂತ್ರಮುಗ್ಧರಾಗಿಸಿತು. ನಾದಸ್ವರ ವಿದ್ವಾನ್‌ಗಳಾದ ಎಸ್.ಸಿ.ನಂದನ್, ಜಗದೀಶ್ ಮತ್ತು ಸಂತೋಷ್ ತಮ್ಮ ವಾದ್ಯ ಸಂಗೀತದ ಸುನಾದದಲ್ಲಿ ಇಡೀ ಆವರಣ ತೇಲುವಂತೆ ಮಾಡಿದರು. ಇವರಿಗೆ ವಿದ್ವಾನ್ ಶ್ರೀನಿವಾಸ್ ಮತ್ತು ವಿದ್ವಾನ್ ನಾಗೇಶ್ ಡೋಲು ಸಹಕಾರ ನೀಡಿದರೆ, ಶ್ರುತಿಯಲ್ಲಿ ರಾಮಚಂದ್ರ ಮತ್ತು ತಾಳದಲ್ಲಿ ಪ್ರೀತಮ್ ಸಹಕಾರ ನೀಡಿದರು. ತಾಸಿಗೂ ಹೆಚ್ಚು ಕಾಲ ಈ ಕಲಾತಂಡದ ನಾದ ಮೋಡಿಗೆ ಸಭಿಕರು ಅಭಿಮಾನ ಚಪ್ಪಾಳೆ ಸುರಿಸಿದರು.

ನಂತರ ವೇದಿಕೆಯಲ್ಲಿ ಮೂಡಿಬಂದ ಭರತನಾಟ್ಯ ನೃತ್ಯರೂಪಕವು ಸಭಿಕರ ಮನಸೂರೆಗೊಂಡಿತು. ಡಾ.ಪದ್ಮಶ್ರೀ ಎನ್.ಕಶ್ಯಪ್, ವಿದುಷಿ ದೀಪ್ತಿ ವಿದುಷಿ ಪ್ರಕೃತಿ ಮಂಜುನಾಥ್, ವಿದುಷಿ ನಮ್ರತಾ, ಹರೀಶ್ ಕುಮಾರ್ ಹಾಗೂ ವಿದೇಶಿಗರಾದ (ವಿಯೆಟ್ನಾಂ) ಉಯಂಗ್ ಮ್ಯಾಂಗ್ ತೋಂಗ್ ತಮ್ಮ ಮನಮೋಹಕ ನೃತ್ಯದೊಂದಿಗೆ ಪ್ರೇಕ್ಷಕರ ಮನಕ್ಕೆ ಲಗ್ಗೆ ಇಟ್ಟರು.

ತಾಳ, ಲಯ ಮತ್ತು ನೃತ್ಯದ ಸಮಾಗಮಗೊಳಿಸುವ 'ಮೇಳ ಪ್ರಾಪ್ತಿ ಪೂರ್ವ ರಂಗ' ನೃತ ಪ್ರಕಾರ ಪ್ರಸ್ತುತಪಡಿಸಿ ನಟರಾಜನ ಆರಾಧಾನೆಯೊಂದಿಗೆ ಪ್ರೇಕ್ಷಕರಲ್ಲಿ ಭಕ್ತಿಯ ಸಿಂಚನ ಮೂಡಿಸಿದರು. ಇದಾದ ಬಳಿಕ ಮತ್ತೊಂದು ಪ್ರಸ್ತುತಿಯಾದ 'ನಾಟ್ಯಾಂಜಲಿ' ನೃತ್ಯ ಪ್ರಕಾರದಲ್ಲಿ ದೇವಿ ಚಾಮುಂಡೇಶ್ವರಿಯು ಮಹಿಷಾಸುರ ಸಂಹಾರ ಮಾಡುವ ದೃಶ್ಯಾವಳಿ ಮೂಡಿತು. ಆ ಮೂಲಕ ನಾಡದೇವತೆ ಚಾಮುಂಡಶ್ವರಿಯಲ್ಲಿನ ಭಕ್ತಿಯ ಪರಾಕಾಷ್ಠೆ ಅನಾವರಣಗೊಂಡಿತು.

ಹೀಗೆ ಪ್ರೇಕ್ಷಕರು ಭಕ್ತಿಭಾವದಲ್ಲಿ ತೇಲುತಿರುವಂತೆ 'ಕೌತ್ವಂ' ನೃತ್ಯ ಪ್ರಕಾರವು ತೆರೆದುಕೊಂಡಿತು. ಸುಮಾರು ಒಂದೂವರೆ ತಾಸು ಒಟ್ಟು 8 ನೃತ್ಯ ಪ್ರಕಾರಗಳನ್ನು ಪ್ರದರ್ಶಿಸಿದ ಈ ತಂಡವು ಪ್ರೇಕ್ಷಕರ ಅಭಿಮಾನಕ್ಕೆ ಪಾತ್ರವಾಯಿತು. ಅಲ್ಲದೆ, ಈ ತಂಡದ ಕಲಾಕೌಶಲ್ಯಕ್ಕೆ ಸಭಿಕರು ಬೆರಗಾಗಿ ಚಪ್ಪಾಳೆಯ ಮಳೆ ಸುರಿಸಿದರು. ಇಂದಿನಿಂದ 90 ದಿನಗಳ ಕಾಲ ಪ್ರತಿದಿನ ರಾತ್ರಿ 7, 8 ಮತ್ತು 9 ಗಂಟೆಗೆ ಒಂದೊಂದು ಕಲಾ ಪ್ರಕಾರದ ಸಾಂಸ್ಕೃತಿಕ ಕಾರ್ಯಕ್ರಮ ಇಲ್ಲಿ ನಡೆಯಲಿದೆ.

ಕೇರಳಾ ಬಾಂಬ್ ಸ್ಫೋಟ: ದೇಶಾದ್ಯಂತ ಹೈ ಅಲರ್ಟ್

ಬೆಂಗಳೂರು/ನವದೆಹಲಿ, ಅ.29–ಕೊಚ್ಚಿ ಬಳಿ ಸ್ಫೋಟ ಸಂಭವಿಸಿ ಇಬ್ಬರು ಮೃತಪಟ್ಟು 52 ಜನರು ಗಾಯಗೊಂಡಿ ರುವ ಭೀಕರ ಘಟನೆ ನಂತರ ಗೃಹ ಇಲಾಖೆ ತೀವ್ರ ಕಟ್ಟೆಚ್ಚರ ವಹಿಸಿದೆ.

ಕೇರಳ ಬ್ಲಾಸ್ಟ್ ಬಳಿಕ ದೆಹಲಿ ಪೊಲೀಸರು ಅಲರ್ಟ್ ಆಗಿದ್ದು ದೇಶದ ಹೈ ಅಲರ್ಟ್ ಘೋಷಣೆ ಮಾಡಲಾಗಿದೆ. ದೆಹಲಿಯ ಎಲ್ಲಾ ಪ್ರದೇಶದಲ್ಲಿ ಹದ್ದಿನ ಕಣ್ಣಿರಿಸಲಾಗಿದೆ. ದೇಶದ ಯಾವುದೇ ಭಾಗದಲ್ಲಿಯಾದರೂ ಇಂತಹ ಸ್ಫೋಟ ನಡೆಯಬಹುದು ಎಂಬ ಆತಂಕದಿಂದ ರಾಜ್ಯಗಳಿಗೆ ಕೇಂದ್ರ ಗೃಹ ಇಲಾಖೆ ಸೂಚನೆ ನೀಡಿದೆ.

ದೆಹಲಿ ಅಲ್ಲದೇ ತಮಿಳುನಾಡು, ಮಹಾ ರಾಷ್ಟ್ರ, ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಪೊಲೀಸರು ಹೈ ಅಲರ್ಟ್ ಘೋಷಣೆ ಮಾಡಿದ್ದಾರೆ. ಕೇರಳ ಸರಣಿ ಸ್ಫೋಟಕದ ನಂತ್ರ ಕರ್ನಾಟಕದಲ್ಲಿನ ಜನನಿಬಿಡ ಪ್ರದೇಶಗಳಲ್ಲಿ ಕಟ್ಟೆಚ್ಚರ ಹಾಗೂ ಸೂಕ್ತ ಬಿಗಿ ಪೊಲೀಸ್ ಭದ್ರತೆಯನ್ನು ಕೈಗೊಳ್ಳುವಂತೆ ಗೃಹ ಸಚಿವ ಡಾ.ಜಿ ಪರಮೇಶ್ವರ್ ಸೂಚಿಸಿದ್ದಾರೆ.

ರಾಜ್ಯದ ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಪೊಲೀಸರು ಕೇರಳ ಸರಣಿ ಸ್ಫೋಟದ ನಂತ್ರ ಮುನ್ನೆಚ್ಚರಿಕೆ ಕ್ರಮವಾಗಿ ಹದ್ದಿನ ಕಣ್ಣು ನೆಟ್ಟಿದ್ದಾರೆ. ಕರ್ನಾಟಕದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಬಿಗಿ ಪೊಲೀಸ್ ಭದ್ರತೆಯನ್ನು ಕೂಡ ಹೆಚ್ಚಿಸಿದ್ದಾರೆ ಎನ್ನಲಾಗುತ್ತಿದೆ.

ಮತ್ತೊಂದೆಡೆ ಮಹಾರಾಷ್ಟ್ರದ ಅಧಿಕಾರಿಗಳು ಭದ್ರತಾ ವ್ಯವಸ್ಥೆಗಳನ್ನು ಹೆಚ್ಚಿಸಿದ್ದಾರೆ. ಮುಂಬೈ ಮತ್ತು ಇತರ ಸ್ಥಳಗಳಲ್ಲಿ ಜನನಿಬಿಡ ಸ್ಥಳಗಳಲ್ಲಿ ಅವುಗಳನ್ನು ಜಾರಿಗೆ ತಂದಿದ್ದಾರೆ

ಕೇರಳದಲ್ಲಿ ಸರಣಿ ಸ್ಫೋಟ: ಕರಾವಳಿ, ಗಡಿ ಪ್ರದೇಶಗಳಲ್ಲಿ ಕಟ್ಟೆಚ್ಚರ – ಗೃಹ ಸಚಿವ ಪರಮೇಶ್ವರ್

ಮಂಗಳೂರು: ಕೇರಳದ ಕೊಚ್ಚಿಯ ಕಲಮಸ್ಸೆರಿ ಕನ್ವೆನ್ಷನ್ ಸೆಂಟರ್‌ನಲ್ಲಿ ಭಾನುವಾರ ಸರಣಿ ಸ್ಫೋಟ ಸಂಭವಿಸಿದ್ದು, ಸ್ಫೋಟದಲ್ಲಿ ಓರ್ವ ಸಾವನ್ನಪ್ಪಿದ್ದು, 37 ಮಂದಿ ಗಾಯಗೊಂಡಿದ್ದಾರೆ. ಎನ್‌ಐಎ ಪ್ರಕರಣದ ತನಿಖೆ ನಡೆಸುತ್ತಿದೆ.

ಈ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು, ಕರಾವಳಿ ಭಾಗ ಮತ್ತು ಗಡಿ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ತೀವ್ರ ನಿಗಾ ವಹಿಸಲಾಗಿದೆ. ಕರ್ನಾಟಕದಲ್ಲಿ ಇಂತಹ ಘಟನೆ ನಡೆಯಲು ಅವಕಾಶ ನೀಡಲ್ಲ ಎಂದಿದ್ದಾರೆ. ತೀವ್ರ ನಿಗಾ ಇರಿಸುವಂತೆ ಗುಪ್ತಚರ ಇಲಾಖೆಗೆ ಸೂಚಿಸಲಾಗಿದೆ.